ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜೂನ್ 6 ಶುಕ್ರವಾರ 2025

₹4

ಸಂಪುಟ: 46 | ಸಂಚಿಕೆ: 51 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಮೈಸೂರು ಮಿತ್ರ ಶುಕ್ರವಾರ 6 ಜೂನ್ 2025

ಹಾಸನ ಮಿತ್ರ

ನಾಲೆ ಅಭಿವೃದ್ಧಿಗೆ 49 ಲಕ್ಷ ಅನುದಾನ



ಗುಲಸಿಂದ ಗ್ರಾಮದ ಹಿರಿಯರನ್ನು ಶಾಸಕ ಸಿ.ಎನ್.ಬಾಲಕೃಷ್ಣ ಸನ್ಮಾನಿಸಿದರು.

ಚನ್ನರಾಯಪಟ್ಟಣ: ಗುಲಸಿಂದ ಗ್ರಾಮದಲ್ಲಿರುವ ರಾಘವೇಂದ್ರಸ್ವಾಮಿ ನೂತನ ಪೂಜಾಮಂದಿರದ ಹಿಂಭಾಗದಲ್ಲಿ ತಡೆಗೋಡೆ ನಿರ್ಮಾಣ ಮತ್ತು ಕೆರೆ ಕೋಡಿ ನೀರು ಸರಾಗವಾಗಿ ಹರಿಯಲು ನಾಲೆ ನಿರ್ಮಾಣಕ್ಕೆ 49 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ಕಸಬಾ ಹೋಬಳಿ ಗುಲಸಿಂದ ಗ್ರಾಮದಲ್ಲಿ ರಾಘವೇಂದ್ರ ಸ್ವಾಮಿ ಪೂಜಾ ಮಂದಿರದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಮಳೆಗಾಲದಲ್ಲಿ ಕೆರೆ ತುಂಬಿದಾಗ ಕೋಡಿಯಲ್ಲಿ ಹೆಚ್ಚು ಪ್ರಮಾಣದಲ್ಲಿ ನೀರು ಹರಿಯುವುದರಿಂದ ರಾಘವೇಂದ್ರಸ್ವಾಮಿ ದೇಗುಲಕ್ಕೆ ಹಾನಿಯಾಗುವ ಸಾಧ್ಯತೆ ಇತ್ತು. ದೇಗುಲದ ಧರ್ಮದರ್ಶಿಯ ಮನವಿ ಮೇರೆಗೆ ಅನುದಾನ ಬಿಡುಗಡೆ ಮಾಡಲಾಗಿದೆ ಎಂದರು.

ರಾಷ್ಟ್ರೀಯ ಹೆದ್ದಾರಿಯಿಂದ ಗುಲಸಿಂದ ಗ್ರಾಮದವರೆಗೆ 2 ಕಿ.ಮೀ ರಸ್ತೆ ಅಭಿವೃದ್ಧಿಪಡಿಸಲಾಗುವುದು. ಗ್ರಾಮ ಶೀತಪೀಡಿತ ಪ್ರದೇಶಕ್ಕೆ ಸೇರ್ಪಡೆಯಾಗಿದೆ. ಸರ್ಕಾರ ಮಂಜೂರು ಮಾಡಿದ ನಿವೇಶನದಲ್ಲಿ ಗ್ರಾಮಸ್ಥರು ಮನೆ ನಿರ್ಮಾಣ ಮಾಡಿಕೊಂಡಿದ್ದಾರೆ. ಅಲ್ಲಿಗೆ ಸಾಕಷ್ಟು ಅಭಿವೃದ್ಧಿ ಕೈಗೊಳ್ಳಬೇಕಿದೆ. ಎರಡು ವರ್ಷದಿಂದ ರಾಜ್ಯ ಸರ್ಕಾರ ಅನುದಾನ ಬಿಡುಗಡೆ ಮಾಡಿಲ್ಲ. ಹಾಗಾಗಿ ಕಾಮಗಾರಿ ಕೈಗೊಂಡಿಲ್ಲ. ಮುಂದಿನ 3 ತಿಂಗಳಲ್ಲಿ ರಸ್ತೆ ಅಭಿವೃದ್ಧಿ ಮಾಡಲಾಗುವುದು ಎಂದು ತಿಳಿಸಿದರು.

ರಾಘವೇಂದ್ರಸ್ವಾಮಿ ಪೂಜಾಮಂದಿರದ ಧರ್ಮದರ್ಶಿ ರಾಧಾಕೃಷ್ಣ ಮಾತನಾಡಿದರು. ಇದೇ ವೇಳೆ ಗ್ರಾಮದ 30ಕ್ಕೂ ಹೆಚ್ಚು ಹಿರಿಯರನ್ನು ಗೌರವಿಸಲಾಯಿತು. ಗ್ರಾಪಂ ಸದಸ್ಯ ಉಮೇಶ್, ಮಂಜುನಾಥ್, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಲಕ್ಷ್ಮಣ್, ಜಿಪಂ ಮಾಜಿ ಸದಸ್ಯೆ ಕುಸುಮಾ ಬಾಲಕೃಷ್ಣ, ಮುಖಂಡರಾದ ಗೋವಿಂದೇಗೌಡ, ಚಂದ್ರೇಗೌಡ, ಶಿವೇಗೌಡ, ನಾಗೇಶ್, ನಾಗರಾಜು, ಹಿರಿಯಣ್ಣ, ಲಕ್ಷ್ಮೀನಾರಾಯಣ, ನವೀನ್ ಭಾಗವಹಿಸಿದ್ದರು.

ಉಪಕರಣಗಳ ವಿತರಣೆ



ಹಾಸನದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಜಿಲ್ಲಾ ಪಂಚಾಯತ್ ಗ್ರಾಮೀಣ ಕೈಗಾರಿಕಾ ವಿಭಾಗದ ವತಿಯಿಂದ ಕೆಐಎಡಿಬಿ ಕಚೇರಿಯಲ್ಲಿ ಫಲಾನುಭವಿಗಳಿಗೆ ವಿವಿಧ ಉಪಕರಣಗಳನ್ನು ಶಾಸಕ ಹೆಚ್.ಪಿ.ಸ್ವರೂಪ್ ವಿತರಿಸಿದರು. ಈ ವೇಳೆ ಕೈಗಾರಿಕೆ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಇಂದಿನಿಂದ ಮೈಸೂರು ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ವನದುರ್ಗಾ ವೃಕ್ಷಶಾಂತಿ ಮಹಾಯಜ್ಞ; ಚಂಡೀಯಾಗ


ಈ ಮಹಾ ಧಾರ್ಮಿಕ ವಿಧಿ-ವಿಧಾನ ಪ್ರಪಂಚದಲ್ಲೇ ಪ್ರಪ್ರಥಮವಾಗಿ ನೆರವೇರುತ್ತಿದೆ; ಸ್ವಾಮೀಜಿ ವಿವರಣೆ

ಮೈಸೂರು, ಜೂ.5(ಎಂಟಿವೈ)– ಲೋಕ ಕಲ್ಯಾಣಾರ್ಥವಾಗಿ ವಿಶ್ವದಲ್ಲೇ ಮೊದಲ ಬಾರಿಗೆ ಮೈಸೂರಿನ ಅವಧೂತ ದತ್ತಪೀಠದಲ್ಲಿ ಜೂ.6ರಿಂದ 15ರವರೆಗೆ ವನ ದುರ್ಗಾ ವೃಕ್ಷ ಶಾಂತಿ ಮಹಾಯಜ್ಞ ಹಾಗೂ ಸಹಸ್ರ ಚಂಡೀಯಾಗ ಹಮ್ಮಿಕೊಳ್ಳಲಾಗಿದೆ ಎಂದು ಅವಧೂತ ದತ್ತಪೀಠ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ತಿಳಿಸಿದ್ದಾರೆ.

ಮೈಸೂರಿನ ಅವಧೂತ ದತ್ತಪೀಠದ ಶುಕವನದ ಬಳಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭೂಮಿ ಮೇಲಿನ ಸಕಲ ಜೀವರಾಶಿಗೂ ಒಳಿತಾಗಲೆಂದು ಬಯಸಿ, ಲೋಕ ಕಲ್ಯಾಣಾರ್ಥವಾಗಿ ಸಹಸ್ರ ಚಂಡೀಯಾಗ ಮತ್ತು ಶ್ರೇಷ್ಠವಾದ ವನದುರ್ಗಾ ವೃಕ್ಷ ಶಾಂತಿ ಮಹಾಯಜ್ಞ ಹಮ್ಮಿಕೊಳ್ಳಲಾಗಿದೆ. ನಾಳೆ(ಜೂ.6) ಬೆಳಗ್ಗೆ ದುರ್ಗಾದೇವಿಯ ಪ್ರಾರ್ಥನೆಯೊಂದಿಗೆ ಚಂಡೀಯಾಗ ಪ್ರಾರಂಭವಾಗಲಿದೆ. ಮಹಾಭಾರತದ ಕಾಲದಲ್ಲಿ ಇಂತಹ ಸಹಸ್ರ ಚಂಡೀಯಾಗ ನಡೆದಿತ್ತು. ಇದೀಗ ಪ್ರಪಂಚದಲ್ಲೇ ಪ್ರಪ್ರಥಮ ಬಾರಿಗೆ ದತ್ತಪೀಠದಲ್ಲಿ ಹಮ್ಮಿಕೊಳ್ಳಲಾಗಿದೆ. ದೇಶ, ರಾಜ್ಯಕ್ಕೆ ಒಳಿತಾಗಲಿ, ಜನರ ಸಂಕಷ್ಟ ದೂರವಾಗಿ, ಆರೋಗ್ಯ ಪ್ರಾಪ್ತಿಯಾಗಲಿ. ಸಮಾಜದಲ್ಲಿ ಶಾಂತಿ, ನೆಮ್ಮದಿ ಸಿಗಬೇಕೆಂದು ಸಂಕಲ್ಪ ಮಾಡಿ ಚಂಡೀಯಾಗ ನಡೆಸಲಾಗುತ್ತಿದೆ ಎಂದರು.

ಈ ಯಾಗದಲ್ಲಿ ಯಾವುದೇ ಜಾತಿ, ಧರ್ಮ, ಲಿಂಗಭೇದವಿಲ್ಲದೆ ಯಾರು ಬೇಕಾದರೂ ಪಾಲ್ಗೊಳ್ಳಬಹುದಾಗಿದೆ. 11 ಹೋಮ ಕುಂಡಗಳಲ್ಲಿ 10 ದಿನಗಳ ಕಾಲ ಸಹಸ್ರ ಚಂಡೀಯಾಗ ನಡೆಯಲಿದೆ. ಜೊತೆಗೆ ವನದುರ್ಗಾ ವೃಕ್ಷ ಶಾಂತಿ ಮಹಾಯಜ್ಞವೂ ನಡೆಯಲಿದೆ. ವಿಶ್ವ ಶಾಂತಿ ಹಾಗೂ ಪರಿಸರ ಸಮತೋಲನಕ್ಕಾಗಿ 8,000 ಬೋನ್ಸಾಯ್ ವೃಕ್ಷಗಳ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಇಂದಿನ ಮಕ್ಕಳಿಗೆ ಕೆಲವು ಗಿಡ–ಮರಗಳ ಪರಿಚಯ ಬಿಟ್ಟರೆ ಅಮೂಲ್ಯ ವೃಕ್ಷಗಳ ಬಗ್ಗೆ ಮಾಹಿತಿ ಇಲ್ಲ. ನಕ್ಷತ್ರ ವೃಕ್ಷ, ನವಗ್ರಹ ವೃಕ್ಷಗಳು ಏನೆಂದು ತಿಳಿದಿಲ್ಲ. ಗಿಡ–ಮರಗಳ ಬಗ್ಗೆ ಒಂದು ವೃಕ್ಷ ಮ್ಯೂಸಿಯಂ ಮಾಡಬೇಕು ಎಂಬ ಮಹದಾಸೆ ಇದೆ. ಅದಕ್ಕಾಗಿ ತೈವಾನ್, ಇಂಗ್ಲೆಂಡ್, ಜಪಾನ್ ಸೇರಿದಂತೆ ವಿವಿಧ ದೇಶಗಳಿಂದ ಅತ್ಯಮೂಲ್ಯ ಗಿಡಗಳನ್ನು ತರಿಸಿದ್ದೇವೆ. ವೃಕ್ಷ ಶಾಂತಿ ಮಾಡುವ ಸಂಕಲ್ಪ ಮಾಡಿದ್ದೇವೆ ಎಂದರು.



ಅವಧೂತ ದತ್ತಪೀಠದಲ್ಲಿ ಹೊಸದಾಗಿ ಸ್ಥಾಪಿಸಿರುವ ಪಂಚ ಮೂಲಿಕ ವನದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಬೋನ್ಸಾಯ್ ಗಿಡ ಪ್ರದರ್ಶಿಸಿದರು.

ಕರ್ನಾಟಕ, ತೆಲಂಗಾಣ, ಆಂಧ್ರ, ತಮಿಳುನಾಡು ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಜಮೀನು ಖರೀದಿಸಿ, ವೃಕ್ಷಗಳನ್ನು ಬೆಳೆಸಲು ಉದ್ದೇಶಿಸಲಾಗಿದೆ. ಅತ್ಯಮೂಲ್ಯ ಗಿಡಗಳುಳ್ಳ ಪಂಚ ಮೂಲಿಕ ವನವನ್ನು ಹೊಸದಾಗಿ ಮಾಡಲಾಗಿದೆ. ಅದಕ್ಕಾಗಿ ಸಹಸ್ರಾರು ಬೋನ್ಸಾಯ್ ವೃಕ್ಷಗಳನ್ನು ಸೇರಿಸಲಾಗಿದೆ. ಈ ಪಂಚ ಮೂಲಿಕ ವನದಲ್ಲಿ ನಾವ್ಯಾರೂ ನೋಡಿರದ ಹಲವು ಗಿಡಗಳನ್ನು ತಂದು ಪ್ರದರ್ಶನಕ್ಕಿಡಲಾಗಿದೆ. ಪೂಜೆಗೆ ಅತ್ಯುತ್ಕೃಷ್ಟವಾದ ಗಿಡಮರಗಳು ಇವೆ. ಸಂಜೀವಿನಿಯಂತಹ ವೃಕ್ಷ, ಬೇವು, ಆಲ, ನೆಲ್ಲಿ ವೃಕ್ಷ ಸೇರಿದಂತೆ ಅನೇಕ ವೃಕ್ಷಗಳನ್ನು ಸಂರಕ್ಷಿಸಲಾಗುತ್ತಿದೆ ಎಂದು ತಿಳಿಸಿದರು.

ಯಾಗದ ಸಂದರ್ಭದಲ್ಲಿ ಪ್ರತಿ 1000 ವೃಕ್ಷಗಳ ಸಮೂಹವನ್ನು ಎಂಟು ವಿವಿಧ ದೇವತೆಗಳಿಗೆ ಸಮರ್ಪಿಸಲಾಗುತ್ತದೆ. ಜೂ.6ರಂದು ಗಣಪತಿ ಪೂಜೆ, ಜೂ.7ರಂದು ಲಲಿತಾ ಪೂಜೆ, ಜೂ.8ರಂದು ಸೂರ್ಯ ಪೂಜೆ, ಜೂ.9ರಂದು ಶಿವ ಪೂಜೆ, ಜೂ.10ರಂದು ಸುಬ್ರಹ್ಮಣ್ಯ ಪೂಜೆ, ಜೂ.11ರಂದು ವಿಷ್ಣು, ಜೂ.12ರಂದು ದತ್ತಾತ್ರೇಯ ಪೂಜೆ, ಜೂ.13ರಂದು ಹನುಮಾನ್ ಪೂಜೆ, ಜೂ.14ರಂದು ದುರ್ಗಾ ಪೂಜೆ ನೆರವೇರಲಿದ್ದು, ಜೂ.15ರಂದು ಮಹಾ ಪೂರ್ಣಾಹುತಿ ನೆರವೇರಲಿದೆ. ಈ 8 ದೇವತೆಗಳ ಸಹಸ್ರನಾಮದ ಪವಿತ್ರ ನಾಮಗಳನ್ನು ಪ್ರತಿಯೊಂದು ವೃಕ್ಷಕ್ಕೂ ಹೆಸರಿಸಲಾಗುತ್ತಿದೆ ಎಂದರು. ಆಶ್ರಮವು ಬರ–ನೆರೆ ಸೇರಿದಂತೆ ಪ್ರಕೃತಿ ವಿಕೋಪಗಳಲ್ಲಿ ಸಂತ್ರಸ್ತರ ಸಂಕಷ್ಟಕ್ಕೆ ಮಿಡಿಯುತ್ತಾ ಬಂದಿದೆ. ಜೊತೆಗೆ ಭಗವದ್ಗೀತೆ ಕಂಠಪಾಠ ಮಾಡಿಸಲಾಗುತ್ತಿದೆ. ಭಗವದ್ಗೀತೆ ಓದುವುದರಿಂದ ಮಾನಸಿಕ ಖಿನ್ನತೆ ದೂರವಾಗಲಿದೆ. ಮನುಷ್ಯನ ಜೀವನ ಸುಧಾರಿಸಲಿದೆ ಎಂದು ಸ್ವಾಮೀಜಿ ನುಡಿದರು.

ಸದಾ ಜನ ಎಚ್ಚರದಿಂದಿರಬೇಕು

ಬೆಂಗಳೂರು ಕಾಲ್ತುಳಿತದ ಬಗ್ಗೆ ಗಣಪತಿ ಸಚ್ಚಿದಾನಂದ ಶ್ರೀಗಳ ಕಿವಿಮಾತು

ಮೈಸೂರು,ಜೂ.5(ಎಂಟಿವೈ)– ಪ್ರಯಾಗದಲ್ಲಿ ನಡೆದ ಕುಂಭಮೇಳ, ವೈಕುಂಠ ಏಕಾದಶಿಯಂದು ತಿರುಪತಿಯಲ್ಲೂ ಕಾಲ್ತುಳಿತ ಪ್ರಕರಣ ನಡೆದಿತ್ತು. ಇನ್ನಾದರೂ ಜನ ಎಚ್ಚೆತ್ತುಕೊಂಡು ಶಿಸ್ತಿನಿಂದ ಜೀವನ ನಡೆಸಬೇಕು ಎಂದು ಮೈಸೂರಿನ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಕಿವಿಮಾತು ಹೇಳಿದ್ದಾರೆ.

ಮೈಸೂರಿನ ಅವಧೂತ ದತ್ತಪೀಠದ ಶುಕವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಐಪಿಎಲ್‌ನಲ್ಲಿ ಗೆದ್ದ ಆರ್‌ಸಿಬಿ ತವರಿಗೆ ವಾಪಸ್ಸಾದ ಹಿನ್ನೆಲೆಯಲ್ಲಿ ಬೆಂಗಳೂರಲ್ಲಿ ನಡೆದ ಸಂಭ್ರಮಾಚರಣೆ ವೇಳೆ ಉಂಟಾದ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟು ಹಲವರು ಗಾಯಗೊಂಡ ಘಟನೆ ನನ್ನ ಮನಸ್ಸು ಘಾಸಿಗೊಳಿಗಿದೆ. ಕಾಲ್ತುಳಿತ ಪ್ರಕರಣ ಇದೆ ಮೊದಲು ನಡೆದಿರುವುದೇನಲ್ಲ. ಐತಿಹಾಸಿಕ ಕುಂಭಮೇಳದಲ್ಲೂ ಕಾಲ್ತುಳಿತ ಉಂಟಾಗಿದೆ. ತಿರುಪತಿಯಲ್ಲೂ ಕಾಲ್ತುಳಿತ ನಡೆದಿದೆ. ಈ ಹಿಂದೆಯೂ ಅನೇಕ ಸಂದರ್ಭಗಳಲ್ಲಿ ಕಾಲ್ತುಳಿತ ಸಂಭವಿಸಿದೆ. ದೇಶಕ್ಕೆ ಕಾಲ್ತುಳಿತ ಶಾಪವಾಗಿದೆ. ಹಾಗಾಗಿ ಜನ ಎಚ್ಚರಿಕೆಯಿಂದ ಇರಬೇಕು ಎಂದರು.

ಕ್ರಿಕೆಟ್ ಪಂದ್ಯಾವಳಿಯಲ್ಲಿ ಗೆಲುವು ಸಾಧಿಸಿದ ಆಟಗಾರರನ್ನು ಹತ್ತಿರದಿಂದ ನೋಡಲು ಸಾಧ್ಯವೇ? ಯಾಕೆ ಅಷ್ಟು ದೊಡ್ಡ ಸಂಖ್ಯೆಯ ಜನ ಅಲ್ಲಿಗೆ ಹೋಗಬೇಕಾಗಿತ್ತು. ಜನ ಮರುಳೋ ಜಾತ್ರೆ ಮರುಳೋ ಎಂಬಂತೆ ಜನ ಸೇರಿದ್ದು ಯಾಕೆ. ಟಿವಿಗಳಲ್ಲೇ ತಮ್ಮ ನೆಚ್ಚಿನ ಆಟಗಾರರನ್ನು ನೋಡಬಹುದಿತ್ತು. ಘಟನೆ ನಡೆದ ನಂತರ ಸರ್ಕಾರವನ್ನು ಬೈಯ್ಯೋದು ಸುಲಭ. ಸರ್ಕಾರ ಆಕಾಶಕ್ಕೆ ಚಪ್ಪರ ಹಾಕೋಕೆ ಸಾಧ್ಯವಿಲ್ಲ. ವ್ಯವಸ್ಥೆಯಲ್ಲಿ ಅದು ಸರಿಯಿಲ್ಲ, ಇದು ಸರಿಯಿಲ್ಲ ಎಂದು ಹೇಳುವವರೇ ಸರಿಯಿಲ್ಲ ಎಂದು ಹೇಳಬೇಕಾಗುತ್ತದೆ. ದತ್ತಪೀಠದಲ್ಲಿ ಪ್ರಸಾದ ಕೊಡುತ್ತೇವೆ ಎಂದರೆ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಾರೆ. ಆ ವೇಳೆ ಕೈಲಾದ ವ್ಯವಸ್ಥೆ ಮಾಡಿರುತ್ತೇವೆ. ಆಶ್ರಮದ ಆವರಣದಲ್ಲೆಲ್ಲಾ ಚಪ್ಪರ ಹಾಕಿಸಿ ಎಂದರೆ ಸಾಧ್ಯವಿಲ್ಲ.

ಶಿಸ್ತು ಇರಬೇಕು. ಮನೆಯಲ್ಲೇ ಕುಳಿತು ಟಿವಿಯಲ್ಲಿ ಕ್ರಿಕೆಟ್ ಆಟಗಾರರನ್ನು ನೋಡಬಹುದಿತ್ತು. ಜೀವ ಹೋದರೆ ವಾಪಸ್ಸು ಬರುವುದಿಲ್ಲ. ಮೊದಲು ತಮ್ಮ ಜೀವದ ಬಗ್ಗೆ ಎಚ್ಚರಿಕೆ ವಹಿಸಬೇಕಾಗಿತ್ತು. ಇದಕ್ಕಾಗಿ ಜೀವನದಲ್ಲಿ ಶಿಸ್ತು ಅಳವಡಿಸಿಕೊಳ್ಳುವುದು ಬಹು ಮುಖ್ಯ. ಇನ್ನಾದರೂ ಹೆಚ್ಚು ಜನ ಸೇರುವ ಸ್ಥಳದಲ್ಲಿ ಎಚ್ಚರಿಕೆಯಿಂದ ಇರಬೇಕು. ಇಂತಹ ಘಟನೆಗಳು ನಡೆದಾಗ ಸರ್ಕಾರ ಮತ್ತು ವ್ಯವಸ್ಥೆಯನ್ನು ದೂರುವುದು ಸಹಜ. ಆದರೆ, ತಾವೇನು ಮಾಡಬಹುದಿತ್ತು ಎಂದು ಯಾರೂ ಯೋಚಿಸುವುದಿಲ್ಲ. ಸರ್ಕಾರಕ್ಕೂ, ಜನರಿಗೂ ಒಳ್ಳೆ ಬುದ್ಧಿ ಬರಲಿ ಎಂದು ಲೋಕಕಲ್ಯಾಣಾರ್ಥ ವನದುರ್ಗಾ ಪೂಜೆ ನೆರವೇರಿಸಲಾಗುತ್ತಿದೆ ಎಂದರು.

ಸಾರ್ವಜನಿಕ ದೂರು, ಮನವಿ ತ್ವರಿತ ವಿಲೇವಾರಿಗೆ 21 ದಿನಗಳ ಕಾಲಮಿತಿ

ಮೈಸೂರು, ಜೂ.5(ಎಸ್‌ಪಿಎನ್)– ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು ಹಾಗೂ ಅಧೀನ ಸಂಸ್ಥೆಗಳ ಸೇವೆ ಮತ್ತು ಯೋಜನೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಸ್ವೀಕೃತವಾಗುವ ದೂರು, ಮನವಿಗಳನ್ನು ತ್ವರಿತ, ಗುಣಾತ್ಮಕ ವಿಲೇವಾರಿಗೆ 21 ದಿನಗಳ ಕಾಲಮಿತಿಯನ್ನು ನಿಗದಿಪಡಿಸಿ ರಾಜ್ಯ ಸರ್ಕಾರ ಆದೇಶಿಸಿದೆ.

ಸಾರ್ವಜನಿಕ ಕುಂದುಕೊರತೆಗಳ ನಿರ್ವಹಣೆಗೆ ಕೇಂದ್ರ ಸರ್ಕಾರದ ಜನಸ್ಪಂದನ–ಏಕೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆಯ ತಂತ್ರಾಂಶವನ್ನು ಅನುಷ್ಠಾನ ಗೊಳಿಸಲಾಗಿದೆ. ಸದರಿ ತಂತ್ರಾಂಶದಲ್ಲಿ ಸಾರ್ವಜನಿಕರಿಂದ ಸ್ವೀಕೃತವಾಗುವ ಮನವಿಗಳನ್ನು ನೋಂದಾಯಿಸಿ ವಿಲೇವಾರಿಗೊಳಿಸಲು ಕೇಸ್ ವರ್ಕರ್ ಹಂತದಲ್ಲಿ 7 ದಿನ, ಗ್ರೇಡ್ –2 ಅಧಿಕಾರಿ ಹಂತದಲ್ಲಿ 7 ದಿನ, ಗ್ರೇಡ್–1 ಅಧಿಕಾರಿ ಹಂತದಲ್ಲಿ 7 ದಿನ ಸೇರಿದಂತೆ ಒಟ್ಟು 21ದಿನಗಳಲ್ಲಿ ಕಡ್ಡಾಯಗೊಳಿಸಲಾಗಿದೆ.

ಈ ಹಿಂದೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ಸಾರ್ವಜನಿಕ ಕುಂದುಕೊರತೆ, ದೂರುಗಳನ್ನು ವಿಲೇವಾರಿಗೊಳಿಸಲು 30 ದಿನಗಳು ಕಾಲಮಿತಿ ನಿಗದಿಗೊಳಿಸಿದ್ದು, ಇದರ ಅನ್ವಯ ಸಾರ್ವಜನಿಕ ದೂರುಗಳ ನಿರ್ವಹಣೆಗೆ ಮತ್ತು ವಿಲೇವಾರಿಗೆ 30 ದಿನಗಳ ಕಾಲ ಮಿತಿ ಪಾಲನೆ ಮಾಡಲಾಗುತ್ತಿದೆ. ಇನ್ನು ಮುಂದೆ ಸಿಪಿಜಿ ಆರ್‌ಎಎಂಎಸ್‌ನಲ್ಲಿ ಸ್ವೀಕೃತವಾಗುವ ಸಾರ್ವಜನಿಕ ದೂರು, ಮನವಿ ಪತ್ರಗಳ ವಿಲೇವಾರಿಗೆ 21 ದಿನಗಳ ಕಾಲಮಿತಿ ನಿಗದಿಗೊಳಿಸಿ ಕೇಂದ್ರ ಸರ್ಕಾರ ಪರಿಷ್ಕೃತ ಆದೇಶ ಹೊರಡಿಸಿದೆ.

> “ಜನಸ್ಪಂದನ–ಏಕೀಕೃತ ಸಾರ್ವಜನಿಕ ಕುಂದು ಕೊರತೆ ನಿವಾರಣಾ ವ್ಯವಸ್ಥೆಯ ತಂತ್ರಾಂಶದಲ್ಲಿ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಯಲ್ಲಿ ಮ್ಯಾಪ್ ಆಗಿರುವ ಎಲ್1, ಎಲ್2, ಎಲ್3 ಹಂತದ ಅಧಿಕಾರಿಗಳಿಗೆ ಸ್ವೀಕೃತ ಅರ್ಜಿಗಳ ವಿಲೇವಾರಿಗೆ 21 ದಿನದ ಕಾಲಮಿತಿ ನಿಗದಿಪಡಿಸಿದೆ. ಇದನ್ನು ಇ–ಆಡಳಿತ ಕೇಂದ್ರದ ಸಿಇಓ ನಿಗಾ ವಹಿಸಬೇಕು.
> –ಜಿ.ಉಮಾದೇವಿ, ಅಧೀನ ಕಾರ್ಯದರ್ಶಿ, (ಇ–ಆಡಳಿತ, ದೂರುಗಳು, ಕುಂದು ಕೊರತೆಗಳು)

ಯಾವೆಲ್ಲಾ ಇಲಾಖೆಗೆ ಅನ್ವಯ: ಈ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಇಲಾಖೆಗಳು, ಅಧೀನ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು, ನಿಗಮಗಳು, ಮಂಡಳಿಗಳು, ಪ್ರಾಧಿಕಾರಿಗಳು, ಅನುದಾನಿತ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಹಾಗೂ ಸಾರ್ವಜನಿಕ ಉದ್ದಿಮೆಗಳು ಸೇರಿದಂತೆ ಎಲ್ಲಾ ಸರ್ಕಾರಿ, ಸರ್ಕಾರಿ ಅನುದಾನಿತ ಹಾಗೂ ಅರೆ ಸರ್ಕಾರಿ ಸಂಸ್ಥೆಗಳಲ್ಲಿನ ಸೇವೆ ಹಾಗೂ ಯೋಜನೆಗಳಿಗೆ ಸಂಬಂಧಿಸಿದ ಮನವಿಗಳನ್ನು 21 ದಿನದಲ್ಲಿ ವಿಲೇವಾರಿಗೊಳಿಸಬೇಕು.

ಸಿಪಿಜಿಆರ್‌ಎಎಮ್‌ಎಸ್‌ನಲ್ಲಿ ದಾಖಲಾಗಿ ಐಪಿಜಿಆರ್‌ಎಸ್‌ನಲ್ಲಿ ಬಿತ್ತರಿಸಲಾಗುವ ಎಲ್ಲಾ ಸಾರ್ವಜನಿಕ ಕುಂದು ಕೊರತೆ, ಮನವಿಗಳನ್ನು ಗುಣಾತ್ಮಕವಾಗಿ ವಿಲೇ ಮಾಡಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಆಯಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ ಹಾಗೂ ಇಲಾಖಾ ಮುಖ್ಯಸ್ಥರ ಜವಾಬ್ದಾರಿ. ಇನ್ನುಳಿದಂತೆ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 29ಪಿಆರ್‌ಜೆ 2020, ದಿನಾಂಕ: 9.8.2021ರಲ್ಲಿನ ಎಲ್ಲಾ ಮಾರ್ಗ ಸೂಚಿಗಳನ್ನು ಮುಂದುವರೆಸುವಂತೆ ಸಿಆಸುಇ (ಇ–ಆಡಳಿತ, ದೂರುಗಳು ಮತ್ತು ಕುಂದು ಕೊರತೆಗಳು) ಅಧೀನ ಕಾರ್ಯದರ್ಶಿ ಜಿ.ಉಮಾದೇವಿ ಆದೇಶಿಸಿದ್ದಾರೆ.

ಜೂ.9, ಉಪನ್ಯಾಸ

ಮೈಸೂರು: ಮೈಸೂರಿನ ಹಿರಿಯ ನಾಗರಿಕರ ಮಂಡಳಿ ವತಿಯಿಂದ ಸ್ವಾಸ್ಥ್ಯ ಆರೋಗ್ಯದ ಬಗ್ಗೆ ವೈದ್ಯರಿಂದ ಉಪನ್ಯಾಸ, ಪ್ರಗತಿಪರ ರೈತ ಬಿ.ಎ.ಪ್ರಕಾಶ್ ಅವರಿಗೆ ಗೌಡಪ್ಪ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜಯಲಕ್ಷ್ಮಿಪುರಂನ ಸರಸ್ವತಿ ಸಮುದಾಯ ಭವನದಲ್ಲಿ ಜೂ.9, ಸಂಜೆ 5 ಗಂಟೆಗೆ ಏರ್ಪಡಿಸಲಾಗಿದೆ ಸ್ವಾಸ್ಥ್ಯ ಆರೋಗ್ಯದ ಕುರಿತು ಪ್ರೊ.ಮಾಲಿನಿ ಉಪನ್ಯಾಸ ನೀಡುವರು.

ಜೂ.8, ಸಂವಾದ

ಮೈಸೂರು: ಮೈಸೂರು ಆರ್ಟ್ ಗ್ಯಾಲರಿಯಲ್ಲಿ ಹಿರಿಯ ನೃತ್ಯ ಗುರು, ಕರ್ನಾಟಕ ಕಲಾಶ್ರೀ ಡಾ.ಕೆ.ಕುಮಾರ್ ಅವರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಹಿರಿಯ ರಂಗಕರ್ಮಿ ಕೆ.ಜೆ.ನಾರಾಯಣಶೆಟ್ಟಿ, ಸಂಸ್ಥೆ ಸಂಸ್ಥಾಪಕ ಶಿವಲಿಂಗಪ್ಪ, ವಿದುಷಿ ಪುಷ್ಪ ಕೃಷ್ಣಮೂರ್ತಿ, ಗೋಪಾಲ್, ಸಾಗರ, ಆನಂದರಾಜ್‌ಅರಸ್, ಡಾ.ಸಹನಾ ಭಟ್, ಶರತ್ ಭಾಗವಹಿಸಲಿದ್ದಾರೆ.

ಶ್ರೀಕಂಠ ಶಿವಾಚಾರ್ಯ ಗುರುಗಳ ಭಾವಚಿತ್ರ ಮೆರವಣಿಗೆ



ಶ್ರೀಕಂಠ ಶಿವಾಚಾರ್ಯ ಗುರುಗಳ ಭಾವಚಿತ್ರದ ಮೆರವಣಿಗೆ.

ಮೈಸೂರು, ಜೂ. 5– ಮೈಸೂರಿನ ಕರ್ನಾಟಕ ರಾಜ್ಯ ಶಿವಾರ್ಚಕರ ಸಂಘದ ವತಿಯಿಂದ ನಡೆದ ಮೈಸೂರು ಶೈವಾಗಮ ರೀತ್ಯಾ ಅರ್ಚಕರ ಪೂಜಾ ತರಬೇತಿ ಹಾಗೂ ಪಂಚಾಂಗ ಪರಿಚಯ ದೀಕ್ಷಾ ಉಪನಯನ ಶಿಬಿರದ ಸಮಾರೋಪ ಸಮಾರಂಭದಲ್ಲಿ ದಕ್ಷಿಣಮೂರ್ತಿ, ಶಿವಾದ್ವೈತ ಪ್ರವರ್ತಕರಾದ ಶ್ರೀಕಂಠ ಶಿವಾಚಾರ್ಯ ಗುರುಗಳ ಭಾವಚಿತ್ರದ ಮೆರವಣಿಗೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು.

ಶಿಬಿರದಲ್ಲಿ ಶೈವಾಗಮ ರೀತ್ಯಾ ಅರ್ಚಕರ ಪೂಜಾ ತರಬೇತಿ ಹಾಗೂ ಪಂಚಾಂಗ ಪರಿಚಯ ದೀಕ್ಷಾ ಉಪನಯನ ಮಾಡಲಾಯಿತು. ಗೌರವಾಧ್ಯಕ್ಷ ಅಂಬಳೆ ಶಿವಣ್ಣ, ಅಧ್ಯಕ್ಷ ಪ್ರೊ.ಮಲ್ಲಣ್ಣ, ಉಪಾಧ್ಯಕ್ಷ ಕುಮಾರಸ್ವಾಮಿ, ಕಾರ್ಯದರ್ಶಿ ನಾಗೇಂದ್ರ, ಮಹಾದೇವಸ್ವಾಮಿ, ಕೋಶಾಧ್ಯಕ್ಷ ಗಿರೀಶ್ ಕುಮಾರ್, ನಿಲಯ ಪಾಲಕರಾದ ತಿಲಕ್ ದೇವಿತಂದ್ರೆ, ಮನುಕುಮಾರ್, ನಿರ್ದೇಶಕರಾದ ಸಚಿನ್, ಮಂಜು, ಬಾಬು, ವೀರಣ್ಣ, ಮಹದೇವಸ್ವಾಮಿ, ಶಿವಶಂಕರಪ್ಪ, ಮಲ್ಲಣ್ಣ, ಗುರುದೇವ್, ಶಂಕರ್, ಕೆ.ಆರ್. ಸ್ವಾಮಿ ಹಾಗೂ ಮಕ್ಕಳು ಉಪಸ್ಥಿತರಿದ್ದರು

ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ...



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 141ನೇ ಜನ್ಮದಿನವನ್ನು ಆಚರಿಸಲಾಯಿತು. ಈ ವೇಳೆ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಪಿ.ರಾಜೇಶ್ವರಿ, ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಯೋಗಾನಂದ್, ಜಿ.ನಿರಂಜನ್, ಪ್ರಮಿಳಾ, ಕೆ.ಗಿರೀಶ್ ಇನ್ನಿತರರಿದ್ದರು.

ಜೂ.10, ಪ್ರಗತಿಪರ ರೈತರಿಗೆ ಅಭಿನಂದನೆ

ಮೈಸೂರು, ಜೂ.5(ಜಿಎ)–ಕಬ್ಬು ಬೆಳೆಗಾರರ ಹೋರಾಟ ಹಿತರಕ್ಷಣಾ ಸಮಿತಿ ವತಿಯಿಂದ ಜೂ.10ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಜೆಪಿ ನಗರದಲ್ಲಿರುವ ಬಾಲಗಂಗಾಧರನಾಥ್ ಉದ್ಯಾನವನದಲ್ಲಿ ಪ್ರಗತಿಪರ ರೈತರನ್ನು ಅಭಿನಂದಿಸಲಾಗುತ್ತಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿ ಅಧ್ಯಕ್ಷ ಬ್ಯಾತಹಳ್ಳಿ ಮಾದಪ್ಪ ಈ ವಿಷಯ ತಿಳಿಸಿ, ಕಳೆದ ಹಲವಾರು ವರ್ಷಗಳಿಂದ ಪ್ರತಿ ಆರು ತಿಂಗಳಿಗೊಮ್ಮೆ ಪ್ರಗತಿಪರ ರೈತರನ್ನು ಅಭಿನಂದಿಸಲಾಗುತ್ತಿದ್ದು, ಈ ಬಾರಿ ವಿಶೇಷವಾಗಿ ರೈತನನ್ನು ಮದುವೆ ಮಾಡಿಕೊಂಡು ಸಾಧನೆ ಮಾಡಬಹುದು ಎಂದು ತೋರಿಸಿಕೊಟ್ಟಿರುವ ಚಂದ್ರವಾಡಿ ಮಹೇಶ್ವರಿ ಸೇರಿದಂತೆ ಪ್ರಗತಿಪರ ರೈತರಾದ ಕುಲಿಹುಂಡಿ ಮಲ್ಲಣ್ಣ, ಎನ್.ಎಸ್. ಉದಯಕುಮಾರ್, ಗುರುಕಾರ್ ಚಿಕ್ಕನಂದಿ, ಮಹೇಶ್, ದಾಸನೂರು ಶಿವನಂಜಪ್ಪ ಅವರನ್ನು ಅಭಿನಂದಿಸಲಾಗುತ್ತಿದೆ ಎಂದರು. ಗೋಷ್ಠಿಯಲ್ಲಿ ಎಸ್.ಪ್ರತಿಭಾ, ಎಂ.ಸುಮ, ನಂಜಪ್ಪ ಮತ್ತಿತರರು ಉಪಸ್ಥಿತರಿದ್ದರು.

ವೆಂಕಟ ಚಲಪತಿ ನಿಧನ



ಮೈಸೂರು, ಜೂ.5–ಮೈಸೂರಿನ ಗಾಂಧಿನಗರದ 4ನೇ ಕ್ರಾಸ್ ನಿವಾಸಿ ವೆಂಕಟ ಚಲಪತಿ(43) ಗುರುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಗಾಂಧಿನಗರದ ಆದಿಕರ್ನಾಟಕ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

06.06.2025 ಶುಕ್ರವಾರ, ಮಳೆ ನಕ್ಷತ್ರ: ರೋಹಿಣಿ, 25.05.2025 ರಿಂದ 07.06.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಹಸ್ತ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಕಾರ್ನಿಯಲ್ ಒಪೇಸಿಟಿ ಚಿಕಿತ್ಸಾ ಶಿಬಿರ, ಗರ್ಭಾಶಯ ಮುಖದಲ್ಲಿ ಹುಣ್ಣು ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6.30 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ತೊಳಸಿ ಜ್ಯುವೆಲ್ಸ್ :** ಇಟಾಳಸಿ ಲಕ್ಸ್ ಫೆಸ್ಟ್–ಆಭರಣಗಳ ಪ್ರದರ್ಶನ, ಸ್ಥಳ: ತೊಳಸಿ ಜ್ಯುವೆಲ್ಸ್, ವಿವಿ ಮೊಹಲ್ಲಾ, ಟೆಂಪಲ್ ರಸ್ತೆ, ಬೆಳಗ್ಗೆ 11 ರಿಂದ.

■ **ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ವಿಶ್ವದ ಮೊಟ್ಟ ಮೊದಲ ವಿಶಿಷ್ಟ ಕಾರ್ಯಕ್ರಮ, ವನ ದುರ್ಗಾ ವೃಕ್ಷ ಶಾಂತಿ ಮಹಾಯಜ್ಞ, ಸಹಸ್ರ ಚಂಡೀಯಾಗ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಸಾಮಾಜಿಕ ಕಾರ್ಯ ಶಿಬಿರ, ಬೆಳಗ್ಗೆ 11.30 ರಿಂದ ಟಿಸರಿಂಗ್ ಚೋಡೆನ್ ಅವರಿಂದ ವುಮೆನ್ಸ್ ಅಸೋಸಿಯೇಷನ್ : ಆರ್ಗನೈಸೇಷನ್ ಅಂಡ್ ಫಂಕ್ಷನಿಂಗ್ ಕುರಿತು ಉಪನ್ಯಾಸ, ಸಂಜೆ 6.15 ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ದೊಂಡೆನ್‌ಲಿಂಗ್ ಟಿಬೆಟಿಯನ್ ವೆಲ್‌ಫೇರ್ ಸೊಸೈಟಿ, ಒಡೆಯರ ಪಾಳ್ಯ.

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ :** ಕರ್ನಾಟಕ ಶಾಸ್ತ್ರೀಯ ಸಂಗೀತ ಅಧ್ಯಯನ ಶಿಬಿರ, ಸ್ಥಳ: 510, 13ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 4.30 ರಿಂದ.

■ **ಹೋಂ ಸೈನ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ರೀಜನಲ್ ಚಾಪ್ಟರ್ :** ಉದ್ಘಾಟನಾ ಸಮಾರಂಭ ಮತ್ತು ಹ್ಯಾಂಡ್‌ಬುಕ್ ಆಫ್ ಫುಡ್ ಅಂಡ್ ನ್ಯೂಟ್ರಿಷನ್ ಬಿಡುಗಡೆ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಸಿಎಫ್‌ಟಿಆರ್‌ಐ ನಿರ್ದೇಶಕರಾದ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ಗೌರವ ಅತಿಥಿಗಳು : ಪ್ರೊ. ಜಮುನಾ ಪ್ರಕಾಶ್, ಎ.ಹೆಚ್. ವಿಷ್ಣು, ಪ್ರೊ. ಎಂ. ಕೋಮಲಾ, ಸ್ಥಳ: ಸೆಮಿನಾರ್ ಹಾಲ್, ಮಾನಸಗಂಗೋತ್ರಿ, ಮಧ್ಯಾಹ್ನ 3ಕ್ಕೆ

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಆಕ್ಯುಪ್ರೆಶರ್ ಹಾಗೂ ಸುಜೋಕ್, ಆಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್ ವ್ಹೀಲ್, ರೋಟರಿ ಭವನ, ವಿಜಯನಗರ ರೈಲ್ವೆ ಬಡಾವಣೆ, ಬೆಳಗ್ಗೆ 10.30 ರಿಂದ.

■ **ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ :** ದಿವಂಗತ ಡಿ. ದೇವರಾಜ ಅರಸು ಪುಣ್ಯಸ್ಮರಣೆ, ಉಪಸ್ಥಿತರು : ಶಾಸಕರಾದ ತನ್ವೀರ್ ಸೇಠ್, ಹೆಚ್. ವಿಶ್ವನಾಥ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ, ಜಿಲ್ಲಾಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ರಘುರಾಂ ವಾಜಪೇಯಿ, ಆರ್. ರಘು ಕೌಟಿಲ್ಯ, ಪ್ರೊ. ಕಾಳೇಗೌಡ ನಾಗವಾರ, ಮಾಜಿ ಮೇಯರ್ ಪುರುಷೋತ್ತಮ್, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಎಂ. ಚಂದ್ರಶೇಖರ್, ವೈ.ಡಿ.ರಾಜಣ್ಣ, ಪಿ. ರಾಜು, ಸ್ಥಳ: ಮಹಾರಾಣಿ ಕಾಲೇಜು ಮುಂಭಾಗ, ದೇವರಾಜ ಅರಸ್ ರಸ್ತೆ, ಬೆಳಗ್ಗೆ 11ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ – ಶೋಧನ ಗ್ರಾಮೀಣ ಪರಿಸರದ ಉಪಕರಣಗಳು, ಲೇಖನ : ಡಾ. ಎಂ. ಎನ್. ಚಿಕ್ಕಮಾದು, ಪ್ರಸ್ತುತಿ: ಡಾ. ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಮತ್ತೂರು ಕೆ. ಸ್ವಾಮಿ, ನಿತಿನ್ ರಾಜಾರಾಂ ಶಾಸ್ತ್ರೀ ಹಾಗೂ ಎಂ.ಡಿ. ಸುಮತಿ ಮುರಾರಿ, ವ್ಯಾಖ್ಯಾನ –ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಯೋಗದತ್ತ ಜಗತ್ತು–ಯೋಗ ಕುರಿತ ವಿಶೇಷ ಕಾರ್ಯಕ್ರಮ ಸರಣಿ, ಯೋಗ ಗುರು ಡಾ. ಕೆ. ರಾಘವೇಂದ್ರ ಪೈ ಅವರೊಂದಿಗೆ ಸಂದರ್ಶನ, ಸಂದರ್ಶಕರು –ದಿವಾಕರ ಹೆಗಡೆ, 8.50 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ ವಿಶ್ವ ಪರಿಸರ ದಿನಾಚರಣೆಯ ಸಂದರ್ಭದಲ್ಲಿ ಪರಿಸರ ಮತ್ತು ಮಕ್ಕಳ ಆರೋಗ್ಯ ಕುರಿತು ತಿಳಿಸಿಕೊಡಲಿದ್ದಾರೆ ಡಾ.ಶ್ರೀನಿವಾಸ್ ಬಿ.ಎಚ್. ಹಾಗೂ ಡಾ.ಶಿವು ಪಿ. ಮತ್ತು ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಂಬಂಧವಾಗಿ ವಿಶೇಷ ಕಾರ್ಯಕ್ರಮ ಮಾನಸಿಕ ಆರೋಗ್ಯ ಮತ್ತು ಪತಂಜಲಿಯ ಯೋಗ ಸೂತ್ರಗಳು ಕುರಿತು ಡಾ. ಟಿ.ಎನ್.ಮಂಜುನಾಥ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಪಿ.ಗುರುಪ್ರಸಾದ್–ಸ್ಯಾಕ್ಸೊಫೋನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ : ಜಿ. ಎನ್. ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ.ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ –ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಬಿ.ವಿ. ದುರ್ಗಾ ಭವಾನಿ – ಹಾಡುಗಾರಿಕೆ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ–ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಸೇವಾ ಅವಕಾಶಗಳು ಕುರಿತು ಅತ್ಯುತ್ತಮ ಎನ್. ಎಸ್.ಎಸ್. ಅಧಿಕಾರಿ ರಾಷ್ಟ್ರಪ್ರಶಸ್ತಿ ಪುರಸ್ಕೃತರು ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರಾಗಿರುವ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು ಬಾಬುರಾಯನ ಕೊಪ್ಪಲಿನ ಡಾ. ರಾಘವೇಂದ್ರ ಆರ್. ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ–ಪ್ರಾಯೋಜಿತ ನೇರ ಫೋನ್ ಇನ್ ಕಾರ್ಯಕ್ರಮ, ವಿಷಯ–ಜಲಾನಯನ ಅಭಿವೃದ್ಧಿ ಯೋಜನೆಯಡಿ ಮಣ್ಣು ಮತ್ತು ನೀರು ಸಂರಕ್ಷಣಾ ಕ್ರಮಗಳು, ಭಾಗವಹಿಸುತ್ತಾರೆ –ಜಯಸ್ವಾಮಿ ಜಿ. ಎಸ್., ಜಂಟಿ ಕೃಷಿ ನಿರ್ದೇಶಕರು, (ಮಣ್ಣು ಮತ್ತು ನೀರು ಸಂರಕ್ಷಣೆ), 7.20 ಪರಾಗ ಬೇಸಾಯದ ಬದುಕು ಸರಾಗ, 7.45 ಕನ್ನಡದಲ್ಲಿ ಭಾಷಣ, 8.00 ವಿಜ್ಞಾನ ಭಾರತಿ, ಡ್ರೋಣ್ ಹಾರುತಿದೆ ನೋಡಾ –ಮಾತನಾಡುತ್ತಾರೆ ಲಕ್ಷ್ಮಿ ಬಿ., ಆಹಾರ ಪದಾರ್ಥಗಳಲ್ಲಿ ರಾಸಾಯನಿಕಗಳು–ಮಾತನಾಡುತ್ತಾರೆ ನಂದಿನಿ ಎಂ. ಎಸ್., 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಮಧುರವಿ ಕಶ್ಯಪ್– ಹಾಡುಗಾರಿಕೆ, 10.00 ಜನಪದ ಸಂಗೀತ, 10.25 ಸವಿನೆನಪು– ಹಳೆಯ ಕನ್ನಡ ಚಿತ್ರಗೀತೆಗಳು

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಶ್ರೀ ನಟರಾಜ ಬಾಲಕಿಯರ ಪದವಿಪೂರ್ವ ಕಾಲೇಜು :** ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಇತಿಹಾಸ ತಜ್ಞ ಪ್ರೊ. ಎನ್.ಎಸ್. ರಂಗರಾಜು, ಅಧ್ಯಕ್ಷತೆ : ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಪ್ರಾಸ್ತಾವಿಕ ನುಡಿ : ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಶ್ರೀ ನಟರಾಜ ಸಭಾಂಗಣ, ಶ್ರೀ ಹೊಸಮಠ, ಬೆಳಗ್ಗೆ 11ಕ್ಕೆ.

■ **ರಂಗಾಯಣ :** ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ವಿನ್ಯಾಸ ಕಾವ್ಯ ನಾಟಕ ಪ್ರದರ್ಶನ, ನಿರ್ದೇಶನ : ಹೆಚ್.ಕೆ. ದ್ವಾರಕಾನಾಥ್, ಸ್ಥಳ: ರಂಗಾಯಣದ ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 6 ಶುಕ್ರವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 51 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಆರ್‌ಸಿಬಿ ವಿಜಯೋತ್ಸವದ ವೇಳೆ ನೂಕು–ನುಗ್ಗಲು, ಕಾಲ್ತುಳಿತದಿಂದ 11 ಮಂದಿ ಅಭಿಮಾನಿಗಳ ಸಾವಿನ ಹಿನ್ನೆಲೆಯಲ್ಲಿ ಹೈಕೋರ್ಟ್ ನೋಟಿಸ್; ಎಚ್ಚೆತ್ತ ರಾಜ್ಯ ಸರ್ಕಾರದಿಂದ ಕಠಿಣ ಕ್ರಮ

ಬೆಂಗಳೂರು ಪೊಲೀಸ್ ಆಯುಕ್ತ ದಯಾನಂದ್ ಅಮಾನತು

- ಜೊತೆಗೆ ಸ್ಟೇಡಿಯಂ ವ್ಯಾಪ್ತಿಯ ಹೆಚ್ಚುವರಿ ಪೊಲೀಸ್ ಆಯುಕ್ತ, ಡಿಸಿಪಿ, ಎಸಿಪಿ, ಇನ್ಸ್‌ಪೆಕ್ಟರ್ ತಲೆದಂಡ
- ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹಾ ಆಯೋಗದಿಂದ ತನಿಖೆ
- ಸಚಿವ ಸಂಪುಟ ಸಭೆ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಹಿತಿ

ಬೆಂಗಳೂರು, ಜೂ.5– ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಆರ್‌ಸಿಬಿ ವಿಜಯೋತ್ಸವದ ವೇಳೆ ಬುಧವಾರ ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಕಾಲ್ತುಳಿತಕ್ಕೆ 11 ಮಂದಿ ಬಲಿಯಾಗಿ, 57 ಮಂದಿ ಗಾಯಗೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ಪೊಲೀಸ್ ಆಯುಕ್ತ ದಯಾನಂದ ಸೇರಿದಂತೆ ಹಲವು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ಇಂದು ಸಚಿವ ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಕರಣ ಸಂಬಂಧ ಬೆಂಗಳೂರು ನಗರ ಪೊಲೀಸ್ ಆಯುಕ್ತ ದಯಾನಂದ, ಚಿನ್ನಸ್ವಾಮಿ ಸ್ಟೇಡಿಯಂ ಇನ್‌ಚಾರ್ಜ್ ಆಗಿರುವ ನಗರ ಹೆಚ್ಚುವರಿ ಪೊಲೀಸ್ ಆಯುಕ್ತ ವಿಕಾಸ್ ಕುಮಾರ್, ಕೇಂದ್ರ ವಲಯದ ಡಿಸಿಪಿ ಹೆಚ್.ಟಿ.ಶೇಖರ್, ಕಬ್ಬನ್ ಪಾರ್ಕ್ ವಿಭಾಗದ ಎಸಿಪಿ ಸಿ.ಬಾಲಕೃಷ್ಣ ಕಬ್ಬನ್ ಪಾರ್ಕ್ ಠಾಣೆಯ ಇನ್ಸ್‌ಪೆಕ್ಟರ್ ಎ.ಕೆ.ಗಿರೀಶ್ ಅವರನ್ನು ಬೇಜವಾಬ್ದಾರಿತನ ಹಾಗೂ ನಿರ್ಲಕ್ಷ್ಯದ ಹಿನ್ನೆಲೆಯಲ್ಲಿ ತಕ್ಷಣದಿಂದಲೇ ಅಮಾನತುಗೊಳಿಸಲು ತೀರ್ಮಾನಿಸಲಾಗಿದೆ ಎಂದು ಪ್ರಕಟಿಸಿದರು. ಇದಾದ ಕೆಲವೇ ನಿಮಿಷಗಳಲ್ಲಿ ಈ ಅಧಿಕಾರಿಗಳ ಅಮಾನತು ಆದೇಶ ಹೊರ ಬಿದ್ದಿತು.

ನಿನ್ನೆ (ಬುಧವಾರ) ನಡೆದ ದುರಂತದಲ್ಲಿ 11 ಮಂದಿ ಸಾವನ್ನಪ್ಪಿ, 57 ಮಂದಿ ಗಾಯಗೊಂಡ ಘಟನೆ ಹಿನ್ನೆಲೆಯಲ್ಲಿ ಇಂದು ಎಲ್ಲಾ ಕಾರ್ಯಕ್ರಮಗಳನ್ನೂ ಮುಂದೂಡಿ, ಸಂಪುಟ ಸಭೆಯಲ್ಲಿ ಈ ವಿಚಾರದ ಬಗ್ಗೆಯೇ ಗಂಭೀರ ಚರ್ಚೆ ನಡೆಸಲಾಯಿತು ಎಂದು ಮುಖ್ಯಮಂತ್ರಿ ಹೇಳಿದರು.

ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಈಗಾಗಲೇ ಆರ್‌ಸಿಬಿ ಸಂಸ್ಥೆ, ಕಾರ್ಯಕ್ರಮದ ಆಯೋಜಕರಾದ ಡಿಎನ್‌ಎ ಈವೆಂಟ್ ಮ್ಯಾನೇಜ್‌ಮೆಂಟ್ ಮತ್ತು ಕೆಎಸ್‌ಸಿಎ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಈ ಸಂಸ್ಥೆಗಳಿಗೆ ಸಂಬಂಧಿಸಿದ ಪ್ರತಿನಿಧಿಗಳನ್ನು ಬಂಧಿಸಬೇಕೆಂದು ಪೊಲೀಸರಿಗೆ ಸೂಚಿಸಲಾಗಿದೆ. ಕಬ್ಬನ್ ಪಾರ್ಕ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿದೆ ಎಂದು ಮುಖ್ಯಮಂತ್ರಿ ಹೇಳಿದ್ದರು.

ತಾವು ಮುಖ್ಯಮಂತ್ರಿ ಆದ ನಂತರ ಇಂತಹ ಯಾವುದೇ ದುರ್ಘಟನೆ ನಡೆದಿರಲಿಲ್ಲ. ಈ ಘಟನೆ ನಮ್ಮೆಲ್ಲರನ್ನೂ ಘಾಸಿಗೊಳಿಸಿದೆ. ನಡೆಯಬಾರದ್ದು ನಡೆದು ಹೋಗಿದೆ. ಇದೊಂದು ಮಹಾನ್ ದುರಂತ ಎಂದು ಭಾವಿಸಿ ನಮಗೆ ದೊರೆತ ಕೆಲವು ಮಾಹಿತಿಗಳನ್ನಾಧರಿಸಿ, ಡಿಸಿಎಂ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ. ಜಿ.ಪರಮೇಶ್ವರ್, ಕಾನೂನು ಸಚಿವ ಹೆಚ್.ಕೆ. ಪಾಟೀಲ್, ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಉನ್ನತ ಶಿಕ್ಷಣ ಸಚಿವ ಸುಧಾಕರ್, ಮುಖ್ಯಮಂತ್ರಿಗಳ ರಾಜಕೀಯ ಸಲಹೆಗಾರ ಗೋವಿಂದ ರಾಜು, ಕಾನೂನು ಸಲಹೆಗಾರರೂ ಆದ ವೀರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಮುಂತಾದವರೊಂದಿಗೆ ಸುದೀರ್ಘವಾಗಿ ಚರ್ಚಿಸಿ ಈ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಐಪಿಎಲ್‌ನಲ್ಲಿ ಆರ್‌ಸಿಬಿ ತಂಡ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಮಂಗಳವಾರ ರಾತ್ರಿಯಿಡೀ ಬೆಂಗಳೂರಿನಲ್ಲಿ ಅಭಿಮಾನಿಗಳು ಸಂಭ್ರಮಾಚರಣೆಯಲ್ಲಿ ತೊಡಗಿದ್ದರು. ಈ ನಡುವೆ ಬುಧವಾರ ಸಂಜೆ 6 ಗಂಟೆಗೆ ವಿಧಾನಸೌಧದಿಂದ ಚಿನ್ನಸ್ವಾಮಿ ಸ್ಟೇಡಿಯಂವರೆಗೂ ಆರ್‌ಸಿಬಿ ಆಟಗಾರರ ವಿಕ್ಟರಿ ಪರೇಡ್ ನಡೆಯಲಿದೆ ಎಂದು ಬೆಳಗ್ಗೆ 7.30ರ ಸುಮಾರಿನಲ್ಲಿ ಆರ್‌ಸಿಬಿ ಮ್ಯಾನೇಜ್‌ಮೆಂಟ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿತ್ತು. ಅಲ್ಲದೇ ಚಿನ್ನಸ್ವಾಮಿ ಸ್ಟೇಡಿಯಂನಲ್ಲೂ ಸಂಭ್ರಮಾಚರಣೆ ನಡೆಯಲಿದೆ ಎಂದು ಉಲ್ಲೇಖಿಸಿತ್ತು. ■ 10ನೇ ಪುಟಕ್ಕೆ



ಗುರುವಾರ ಸಂಪುಟ ಸಭೆ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಧ್ಯಮಗಳಿಗೆ ಮಾಹಿತಿ ನೀಡಿದರು. ಈ ವೇಳೆ (ಎಡದಿಂದ) ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಗೃಹ ಸಚಿವ ಡಾ. ಜಿ.ಪರಮೇಶ್ವರ್, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕಾನೂನು ಸಚಿವ ಹೆಚ್.ಕೆ. ಪಾಟೀಲ್ ಉಪಸ್ಥಿತರಿದ್ದಾರೆ.



ಬಿ.ದಯಾನಂದ | ವಿಕಾಸ್‌ಕುಮಾರ್ | ಶೇಖರ್ | ಬಾಲಕೃಷ್ಣ | ಗಿರೀಶ್

ಬೆಂಗಳೂರು ದುರಂತ ತನಿಖೆಗೆ ನ್ಯಾ. ಜಾನ್ ಮೈಕೆಲ್ ಕುನ್ಹಾ ನೇತೃತ್ವದ ಆಯೋಗ ರಚನೆ



ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಬುಧವಾರ ಕಾಲ್ತುಳಿದಲ್ಲಿ 11 ಮಂದಿ ಸಾವನ್ನಪ್ಪಿದ ಪ್ರಕರಣದ ತನಿಖೆಗಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮೈಕೇಲ್ ಕುನ್ಹಾ ನೇತೃತ್ವದ ಆಯೋಗವನ್ನು ರಚಿಸಲು ಸಂಪುಟ ಸಭೆ ತೀರ್ಮಾನಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ನಿನ್ನೆ ಮ್ಯಾಜಿಸ್ಟೀರಿಯಲ್ ತನಿಖೆಗೆ ಆದೇಶಿಸಿದ್ದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಜಗದೀಶ್ ಅವರು ಇಂದು ಬೆಳಗ್ಗೆ ಘಟನೆ ನಡೆದ ಚಿನ್ನ ಸ್ವಾಮಿ ಕ್ರೀಡಾಂಗಣ ಮತ್ತಿತರೆಡೆ ಭೇಟಿ ನೀಡಿ ಪರಿಶೀಲಿಸುವ ಮೂಲಕ ಕಾರ್ಯಾರಂಭ ಮಾಡಿದ್ದು. ಇದೀಗ ಕುನ್ಹಾ ತನಿಖಾ ಆಯೋಗ ರಚನೆ ಆಗಿರುವುದರಿಂದ ಜಿಲ್ಲಾಧಿಕಾರಿ ಜಗದೀಶ್ ಅವರ ತನಿಖೆ ಅಷ್ಟಕ್ಕೆ ಸ್ಥಗಿತಗೊಂಡಿದೆ.

ಬೆಂಗಳೂರು ನೂತನ ಕಮಿಷ್ನರ್ ಸೀಮಂತ್ ಕುಮಾರ್‌ಸಿಂಗ್



ಬೆಂಗಳೂರು ನಗರ ನೂತನ ಪೊಲೀಸ್ ಕಮಿಷ್ನರ್ ಆಗಿ, ಬೆಂಗಳೂರು ಮೆಟ್ರೋಪಾಲಿಟನ್ ಟಾಸ್ಕ್‌ಫೋರ್ಸ್ ಎಡಿಜಿಪಿ ಸೀಮಂತ್ ಕುಮಾರ್ ಸಿಂಗ್ ಅವರನ್ನು ನಿಯೋಜಿಸಲಾಗಿದೆ. 1996ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾದ ಸಿಂಗ್ ಅವರು ಗುರುವಾರ ರಾತ್ರಿ ಬೆಂಗಳೂರು ನೂತನ ಪೊಲೀಸ್ ಕಮಿಷ್ನರ್ ಆಗಿ ಅಧಿಕಾರ ವಹಿಸಿಕೊಂಡರು.

ಸಂತ್ರಸ್ತರ ಕುಟುಂಬಕ್ಕೆ ಆರ್‌ಸಿಬಿ ತಲಾ 10 ಲಕ್ಷ ರೂ. ಪರಿಹಾರ

ಬೆಂಗಳೂರು, ಜೂ.5– ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟ 11 ಅಭಿಮಾನಿಗಳ ಕುಟುಂಬಗಳಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಆಡಳಿತ ಮಂಡಳಿ ತಲಾ 10 ಲಕ್ಷ ರೂ. ಪರಿಹಾರ ಘೋಷಣೆ ಮಾಡಿದೆ.

ಈಗಾಗಲೇ ಕರ್ನಾಟಕ ಸರ್ಕಾರ ತಲಾ 10 ಲಕ್ಷ ರೂ. ಘೋಷಣೆ ಮಾಡಿತ್ತು. ಇದರೊಂದಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯ ಆಡಳಿತ ಮಂಡಳಿ ತಲಾ 10 ಲಕ್ಷ ರೂ. ಹಾಗೂ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ತಲಾ 5 ಲಕ್ಷ ರೂ. ಪರಿಹಾರ ಘೋಷಿಸಿದೆ. ಹೀಗಾಗಿ ಮೃತರ ಕುಟುಂಬಗಳಿಗೆ ತಲಾ 25 ಲಕ್ಷ ರೂ. ಪರಿಹಾರ ಸಿಗಲಿದೆ. ಜೊತೆಗೆ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರಿಗೆ ಚಿಕಿತ್ಸಾ ವೆಚ್ಚವನ್ನೂ ಭರಿಸುವುದಾಗಿ ಹೇಳಿದೆ.

ಈ ಕುರಿತು ಆರ್‌ಸಿಬಿ ಮಂಡಳಿ ತನ್ನ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದೆ. ಬೆಂಗಳೂರಿನಲ್ಲಿ ನಿನ್ನೆ ನಡೆದ ಘಟನೆ ನಿಜಕ್ಕೂ ದುರದೃಷ್ಟಕರ. ಇದು ಆರ್‌ಸಿಬಿ ಕುಟುಂಬಕ್ಕೆ ಅತೀವವಾದ ನೋವುಂಟು ಮಾಡಿದೆ. ಆರ್‌ಸಿಬಿ ಮೃತರ 11 ಕುಟುಂಬಗಳಿಗೆ ತಲಾ 10 ಲಕ್ಷ ರೂ.ಗಳ ಆರ್ಥಿಕ ಸಹಾಯ ಘೋಷಿಸಿದೆ. ಇದಲ್ಲದೇ ಈ ದುರಂತ ಘಟನೆಯಲ್ಲಿ ಗಾಯಗೊಂಡ ಅಭಿಮಾನಿಗಳಿಗೆ ಸಹಕರಿಸಲು ಆರ್‌ಸಿಬಿ ಕೇರ್ಸ್ ಎಂಬ ನಿಧಿಯನ್ನೂ ರಚಿಸಲಾಗುತ್ತಿದೆ.

ಆರ್‌ಸಿಬಿ, ಡಿಎನ್‌ಎ ಇವೆಂಟ್ ಮ್ಯಾನೇಜ್‌ಮೆಂಟ್, ಕೆಎಸ್‌ಸಿಎ ಪ್ರತಿನಿಧಿಗಳ ಬಂಧನಕ್ಕೆ ಆದೇಶ

ಬೆಂಗಳೂರು, ಜೂ.5– ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಆರ್‌ಸಿಬಿ ಸಂಭ್ರಮಾಚರಣೆ ವೇಳೆ ನಡೆದ ಕಾಲ್ತುಳಿತದಿಂದ 11 ಮಂದಿ ಮೃತಪಟ್ಟ ಪ್ರಕರಣ ಸಂಬಂಧ ಆರ್‌ಸಿಬಿ ಮ್ಯಾನೇಜ್ಮೆಂಟ್, ಡಿಎನ್‌ಎ ಇವೆಂಟ್ ಮ್ಯಾನೇಜ್‌ಮೆಂಟ್ ಹಾಗೂ ಕೆಎಸ್‌ಸಿಎ ಪ್ರತಿನಿಧಿಗಳನ್ನು ಬಂಧಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದಾರೆ.

ಪೊಲೀಸ್ ಇನ್ಸ್‌ಪೆಕ್ಟರ್ ಎ.ಕೆ.ಗಿರೀಶ್ ದೂರನ್ನು ಆಧರಿಸಿ ಈಗಾಗಲೇ ಭಾರತೀಯ ನ್ಯಾಯ ಸಂಹಿತೆಯಡಿ ಸೆಕ್ಷನ್‌ಗಳಾದ 105, 115(2) ಹಾಗೂ 118(1)(2), 190, 132, 125ಎ, 125ಬಿ ಅಡಿಯಲ್ಲಿ ಕಬ್ಬನ್ ಪಾರ್ಕ್ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಎ1 ಆರ್‌ಸಿಬಿ ಮ್ಯಾನೇಜ್‌ಮೆಂಟ್, ಎ2 ಡಿಎನ್‌ಎ ಇವೆಂಟ್ ಮ್ಯಾನೇಜ್‌ಮೆಂಟ್ ಆಗಿದ್ದರೆ ಕೆಎಸ್‌ಸಿಎ(ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್)ಮೂರನೇ ಆರೋಪಿಯನ್ನಾಗಿ ಮಾಡಲಾಗಿದೆ.

ಪೊಲೀಸ್ ಇಲಾಖೆಯ ಯಾವುದೇ ಪೂರ್ವಾನುಮತಿ ಪಡೆಯದೇ ಸಾಮಾಜಿಕ ಜಾಲತಾಣದಲ್ಲಿ ಆರ್‌ಸಿಬಿ ಗೆಲುವಿನ ಸಂಭ್ರಮಾಚರಣೆಯ ಬಗ್ಗೆ ಮತ್ತು ವಿಕ್ಟರಿ ಪರೇಡ್ ನಡೆಸುವ ಬಗ್ಗೆ ಅಭಿಮಾನಿಗಳು ಸೇರಬೇಕೆಂದು ಪ್ರಕಟಣೆ ನೀಡಲಾಗಿದ್ದು, ಇದು ಸುದ್ದಿ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರವಾಗಿದೆ. ಈ ಮೂಲಕ ಲಕ್ಷಾಂತರ ಜನರು ಜಮಾವಣೆಯಾಗಲು ನೇರ ಕಾರಣವಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಕೆಎಸ್‌ಸಿಎ ಉನ್ನತ ಅಧಿಕಾರಿಗಳು ಜೂ.4ರಂದು ಸಂಜೆ ನಗರದಲ್ಲಿ ಆರ್‌ಸಿಬಿ ತಂಡದ ವಿಜಯೋತ್ಸವ ಕಾರ್ಯಕ್ರಮವನ್ನು ನಡೆಸುವ ಬಗ್ಗೆ ಸೂಕ್ತ ಬಂದೋಬಸ್ತ್ ವ್ಯವಸ್ಥೆಯನ್ನು ಕೋರಿ ಕಬ್ಬನ್‌ಪಾರ್ಕ್ ಠಾಣೆಗೆ ಮನವಿ ನೀಡಿದ್ದರು. ಆದರೆ, ಈ ಕಾರ್ಯಕ್ರಮಕ್ಕೆ ಲಕ್ಷಾಂತರ ಅಭಿಮಾನಿ ಗಳು ಸೇರುವ ಹಿನ್ನೆಲೆ ಸಾರ್ವಜನಿಕರಿಗೆ ಅಡಚಣೆ ಯುಂಟಾಗುವುದರಿಂದ ಸೂಕ್ತ ಬಂದೋಬಸ್ತ್‌ಗೆ ಕಾಲಾವಕಾಶ ಬೇಕಾಗುತ್ತದೆ ಎಂದು ಪೊಲೀಸರು ತಿಳಿಸಿದ ನಂತರವೂ ಇದಕ್ಕೆ ಒಪ್ಪದೆ ನಿಯಮ ಮೀರಿ ಕಾರ್ಯಕ್ರಮ ನಡೆಸಲಾಗಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ವಿಜಯೋತ್ಸವದಲ್ಲಿ ಕಾಲ್ತುಳಿತಕ್ಕೆ ಒಳಗಾಗಿ 11 ಜನರು ಮೃತಪಟ್ಟರೆ 57 ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿದ್ದಾರೆ. ಇವರಲ್ಲಿ ಹಲವು ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೂ ಗಾಯಗಳಾಗಿವೆ. ಆದ್ದರಿಂದ ಈ ಎಲ್ಲದಕ್ಕೂ ಕಾರಣರಾಗಿರುವ ಆರ್‌ಸಿಬಿ ಮ್ಯಾನೇಜ್‌ಮೆಂಟ್, ಡಿಎನ್‌ಎ ಇವೆಂಟ್ ಮ್ಯಾನೇಜ್‌ಮೆಂಟ್ ಹಾಗೂ ಕೆಎಸ್‌ಸಿಎ ಉನ್ನತ ಅಧಿಕಾರಿ ಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ದೂರಿನಲ್ಲಿ ಒತ್ತಾಯಿಸಲಾಗಿದೆ. ಈ ಮೊದಲು ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಯುಡಿಆರ್ (ಅಸಹಜ ಸಾವಿನ ವರದಿ) ದಾಖಲಿಸಲಾಗಿತ್ತು. ಇದು ಹಲವು ಅನುಮಾನಗಳಿಗೆ ಕಾರಣವಾಗಿ ಸಾರ್ವಜನಿಕ ವಲಯ ಹಾಗೂ ಸುದ್ದಿ ಮಾಧ್ಯಮಗಳಲ್ಲಿ ವ್ಯಾಪಕ ಟೀಕೆ ವ್ಯಕ್ತವಾದ ಬೆನ್ನಲ್ಲೇ ಎಚ್ಚೆತ್ತ ಪೊಲೀಸರು ಗುರುವಾರ ಸಂಜೆಯ ನಂತರ ಎಫ್‌ಐಆರ್ ದಾಖಲಿಸಿದ್ದಾರೆ.

ಪೊಲೀಸರನ್ನು ಸಂಪರ್ಕಿಸದೇ ವಿಕ್ಟರಿ ಪೆರೇಡ್ ಘೋಷಿಸಿದ್ದ ಆರ್‌ಸಿಬಿ ಫ್ರಾಂಚೈಸಿ

ಬೆಂಗಳೂರು, ಜೂ.5– ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡ 18 ವರ್ಷಗಳ ಬಳಿಕ ಐಪಿಎಲ್ ಚಾಂಪಿಯನ್ ಪಟ್ಟವನ್ನು ಮುಡಿಗೇರಿಸಿಕೊಂಡಿದೆ ಆದರೆ, ಆರ್‌ಸಿಬಿ ಫ್ಯಾನ್ಸ್‌ಗಳು ಈ ಐತಿಹಾಸಿಕ ಕ್ಷಣವನ್ನು ಸಂಭ್ರಮಿಸುತ್ತಿದ್ದಾಗಲೇ ದುರಂತ ಸಂಭವಿಸಿದೆ. ಕಾಲ್ತುಳಿತದಲ್ಲಿ ಉಂಟಾದ ಅಭಿಮಾನಿಗಳ ಸಾವು–ನೋವಿಗೆ ಆರ್‌ಸಿಬಿ ಫ್ರಾಂಚೈಸಿ ಹಾಗೂ ಪೊಲೀಸ್ ಇಲಾಖೆಯ ವೈಫಲ್ಯವೇ ಕಾರಣ ಎನ್ನುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಮಂಗಳರಾತ್ರಿ 11.20ರ ಸುಮಾರಿಗೆ ಆರ್‌ಸಿಬಿ ವಿಜಯಶಾಲಿಯಾಗಿತ್ತು ಇದರಿಂದ ರಾತ್ರಿಯಿಡೀ ಅಭಿಮಾನಿಗಳ ಸಂಭ್ರಮ ಮುಗಿಲು ಮುಟ್ಟಿತ್ತು. ಬುಧವಾರ ಸಹ ಬೆಂಗಳೂರು ನಗರದ ■ 10ನೇ ಪುಟಕ್ಕೆ

ದುರಂತಕ್ಕೆ ಪ್ರಮುಖ ಕಾರಣಗಳೇನು

- ವಿಕ್ಟರಿ ಪೆರೇಡ್ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಪೊಲೀಸರು ತಡ ಮಾಡಿದ್ದು
- ಟಿಕೆಟ್ ಮತ್ತು ಪಾಸ್ ಬಗ್ಗೆ ಪೊಲೀಸರಿಗೆ ಮಾಹಿತಿಯೇ ಇರಲಿಲ್ಲ
- ಜನರಿಗೆ ಮಾಹಿತಿ ನೀಡುವ ಆಸಕ್ತಿಯೇ ಪೊಲೀಸರಿಗೆ ಇರಲಿಲ್ಲ
- ಪೊಲೀಸ್ ನಿಯೋಜನೆಯಲ್ಲಿ ನಿರಂತರವಾಗಿ ಯಡವಟ್ಟು
- ಸ್ಟೇಡಿಯಂನ ಒಂದೇ ಗೇಟ್ ಅರೆಬರೆ ತೆರೆದಿದ್ದು



ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಕಾಲ್ತುಳಿತಕ್ಕೆ 11 ಅಭಿಮಾನಿಗಳ ಬಲಿ ಪ್ರಕರಣ ಕೋರ್ಟ್ ಕಟಕಟೆಗೆ

ಪೂರ್ಣ ವರದಿ ಸಲ್ಲಿಸಿ; ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶ

- ಘಟನೆ ಬಗ್ಗೆ ಕೋರ್ಟ್ ಕಳವಳ; ಪತ್ರಿಕಾವರದಿ ಆಧರಿಸಿ ಸ್ವಯಂಪ್ರೇರಿತ ಪ್ರಕರಣ ದಾಖಲು
- ಇದೇ ವೇಳೆ ಹಲವರು ಪಿಐಎಲ್ ಸಲ್ಲಿಕೆ; ಮುಂದಿನ ವಿಚಾರಣೆ ಜೂನ್ 10ಕ್ಕೆ

ಬೆಂಗಳೂರು, ಜೂ.5(ಕೆಎಂಶಿ)–ಐಪಿಎಲ್ ಟ್ರೋಫಿ ಗೆದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ವಿಜಯೋತ್ಸವ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾಲ್ತುಳಿತದಲ್ಲಿ ಸಿಲುಕಿ 11 ಮಂದಿ ಸಾವೀಗೀಡಾದ ಘಟನೆ ಬಗ್ಗೆ ಪೂರ್ಣ ವರದಿ ಸಲ್ಲಿಸುವಂತೆ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಆದೇಶ ನೀಡಿದೆ.

ನ್ಯಾಯಾಲಯ ಕಲಾಪ ಆರಂಭವಾಗುತ್ತಿದ್ದಂತೆ ಹಂಗಾಮಿ ನ್ಯಾಯಮೂರ್ತಿ ವಿ.ಕಾಮೇಶ್ವರ್ ರಾವ್ ನೇತೃತ್ವದ ವಿಭಾಗೀಯ ಪೀಠ ಘಟನೆಗೆ ತೀವ್ರ ಕಳವಳ ವ್ಯಕ್ತಪಡಿಸಿತು. ಅಲ್ಲದೆ ಬುಧವಾರ ನಡೆದ ದುರಂತವನ್ನು ನ್ಯಾಯಾಲಯ ಗಂಭೀರವಾಗಿ ಪರಿಗಣಿಸಿದೆ.

ಪತ್ರಿಕೆಗಳಲ್ಲಿ ಬಂದಿರುವ ವರದಿ ಆಧರಿಸಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದು, ಈ ಬಗ್ಗೆ ಸರ್ಕಾರ ವಿವರಣೆ ನೀಡಬೇಕೆಂದು ಅಡ್ವೋಕೇಟ್ ಜನರಲ್ ಅವರಿಗೆ ಸೂಚಿಸಿತು. ಮಧ್ಯಾಹ್ನ ಕಲಾಪ ಆರಂಭಕ್ಕೂ ಮುನ್ನ ಕೆಲವು ಹಿರಿಯ ವಕೀಲರು ಇದೇ ಪೀಠದ ಮುಂದೆ ಅರ್ಜಿಗಳನ್ನು ಸಲ್ಲಿಸಿದರು. ಘಟನೆಗೆ ಸಂಬಂಧಿಸಿದಂತೆ ವಾದ–ಪ್ರತಿವಾದ ಆಲಿಸಿದ ವಿಭಾಗೀಯ ಪೀಠ, ದುರಂತಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಪೂರ್ಣ ವರದಿ ಸಲ್ಲಿಸುವಂತೆ ಆದೇಶಿಸಿ ವಿಚಾರಣೆಯನ್ನು ಜೂನ್ 10ಕ್ಕೆ ಮುಂದೂಡಿತು.

ಇದಕ್ಕೂ ಮುನ್ನ ನ್ಯಾಯಮೂರ್ತಿಗಳು ಇಂತಹ ಘಟನೆ ತಡೆಗೆ ಎಸ್‌ಒಪಿ ಇರಬೇಕಲ್ಲವೆ? ವೈದ್ಯಕೀಯ ಸಿಬ್ಬಂದಿ, ಆಂಬ್ಯುಲೆನ್ಸ್ ವ್ಯವಸ್ಥೆ ಮಾಡಿದ್ದಿರಾ.

ಆಕಸ್ಮಿಕ ದುರಂತಗಳ ತಡೆಗೆ ಕಾರ್ಯಕ್ರಮ ರೂಪಿಸಲಾಗಿದೆಯೇ, ಅದರ ಮಾರ್ಗಸೂಚಿ ಏನು ಎಂಬ ಎಲ್ಲ ವಿಷಯಕ್ಕೆ ಸಂಬಂಧಿಸಿದಂತೆ ಪೀಠಕ್ಕೆ ಪೂರ್ಣ ಮಾಹಿತಿ ನೀಡಿ ಎಂದು ಸರ್ಕಾರಕ್ಕೆ ಆದೇಶಿಸಿತು.

ಸರ್ಕಾರದ ಪರ ವಾದ ಮಂಡಿಸಿದ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ನ್ಯಾಯಾಲಯ ನೀಡುವ ಸಲಹೆ–ಸೂಚನೆಗಳನ್ನು ಸರ್ಕಾರ ಪಾಲಿಸಲಿದೆ.

ಐಪಿಎಲ್ ಅಂತಿಮ ಪಂದ್ಯದ ದಿನದಂದು ಪೊಲೀಸರು ಭಾರೀ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು. ವಿಜೃಂಭಣೆ ದಿನದಂದು ಮುನ್ನೆಚ್ಚರಿಕೆ ಕೈಗೊಳ್ಳಲಾಗಿತ್ತು. ಆದರೆ, ನಿರೀಕ್ಷೆಗಿಂತ ಹತ್ತು ಪಟ್ಟು ಜನ ಸೇರಿದ್ದರಿಂದ ದುರಂತ ಸಂಭವಿಸಿದೆ. ದುರಂತದಲ್ಲಿ ಐವರು ಹೆಣ್ಣುಮಕ್ಕಳು ಸೇರಿದಂತೆ 11 ಮಂದಿ ಮೃತಪಟ್ಟಿದ್ದಾರೆ, 56 ಮಂದಿ ಗಾಯಗೊಂಡಿದ್ದಾರೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 34,600 ಜನರಿಗಷ್ಟೇ ಆಸನ ವ್ಯವಸ್ಥೆ ಇದೆ. 33,000 ▶ 10ನೇ ಪುಟಕ್ಕೆ



ಬೆಳಗ್ಗಿನ ಜಾವ 4 ಗಂಟೆವರೆಗೆ ಕೆಲಸ ಮಾಡಿದ್ದ ಪೊಲೀಸರಿಗೆ ಮತ್ತೆ ಬಂದೋಬಸ್ತ್ ನೀಡಲು ಆಗ್ತಿತ್ತಾ...!?

ಬೆಂಗಳೂರು, ಜೂ.5– ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಕಾಲ್ತುಳಿತಕ್ಕೆ 11 ಮಂದಿ ಬಲಿಯಾದ ಸಂಬಂಧ ಕರ್ನಾಟಕ ಹೈಕೋರ್ಟ್ ಹಂಗಾಮಿ ಸಿ.ಜೆ.ಕಾಮೇಶ್ವರ ರಾವ್ ಮತ್ತು ಸಿ.ಎಂ ಜೋಷಿ ಒಳಗೊಂಡ ವಿಭಾಗೀಯ ಪೀಠ, ದುರಂತ ನಡೆದ ಸ್ಥಳದಲ್ಲಿ ಯಾವ ರೀತಿಯ ಮೆಡಿಕಲ್ ಫೆಸಿಲಿಟಿ ಮಾಡಲಾಗಿತ್ತು. ಇಂತಹ ಘಟನೆ ಆದಾಗ ಏನೆಲ್ಲಾ ಮುನ್ನೆಚ್ಚರಿಕಾ ಕ್ರಮ ಕೈಗೊಂಡಿದ್ದಿರಿ, ಏನಾದ್ರೂ ಎಸ್‌ಓಪಿ ಮಾಡಿಕೊಂಡಿದ್ದಿರಾ. ಹಿಂದಿನ ದಿನ ಸೆಲೆಬ್ರೇಷನ್ ವೇಳೆ ಬೆಳಗ್ಗಿನ ಜಾವ 4 ಗಂಟೆವರೆಗೆ ಕೆಲಸ ಮಾಡಿದ್ದ ಪೊಲೀಸರು ಮತ್ತೆ ಬೆಳಗ್ಗೆ 11 ಗಂಟೆಯಿಂದ ಬಂದೋಬಸ್ತ್ ನೀಡಲು ಆಗ್ತಿತ್ತಾ. ಇಂತಹ ಕಾರ್ಯಕ್ರಗಳನ್ನು ಮಾಡುವಾಗ ನಿಯಮಗಳು ಇರಬೇಕು ಅಲ್ವಾ ಎಂದು ತೀವ್ರತರ ಪ್ರಶ್ನೆ ಮಾಡಿದೆ.

ಅಲ್ಲದೇ ಮೆಡಿಕಲ್, ಅಂಬುಲೆನ್ಸ್, ಫೈರ್ ಬ್ರಿಗೇಡ್ ಎಲ್ಲಾ ರೀತಿಯ ವ್ಯವಸ್ಥೆ ಇರಬೇಕು ಅಲ್ವಾ, ಈ ಘಟನೆಗೆ ಯಾರು ಹೊಣೆ. ಕ್ರಿಕೆಟ್ ಅಸೋಸಿಯೇಷನ್ನಾ, ಭದ್ರತೆಗೆ ನಿಯೋಜನೆಗೊಂಡಿದ್ದ ಪೊಲೀಸರಾ ಎಂದು ಪೀಠ ಪ್ರಶ್ನಿಸಿದೆ. ಹೆಚ್ಚಿನ ಜನ ಸೇರಿದ್ದಾಗ ಎಚ್ಚರಿಕೆ ಹೇಗೆ ವಹಿಸುತ್ತೀರಿ, ಎಸ್‌ಓಪಿ ಇರಬೇಕು ಅಲ್ವಾ ಎಂದು ಪ್ರಶ್ನಿಸಿದರು.

ವಕೀಲ ಹೇಮಂತ್, ರಂಗನಾಥ್ ರೆಡ್ಡಿ ವಾದ ಮಂಡಿಸಿ ಸರ್ಕಾರದಿಂದ ನಾಲ್ಕು ಸ್ಪಷ್ಟನೆ ಬೇಕು. ಯಾರು ಕಾರ್ಯಕ್ರಮ ಮಾಡಿದ್ದು, ಅವರು ಯಾವ ದೇಶಕ್ಕೆ ಆಡಿದ್ದರು, ಏಕಕಾಲಕ್ಕೆ ಎರಡೂ ಕಡೆ ಕಾರ್ಯಕ್ರಮ ಮಾಡಲು ಸೂಚನೆ ಕೊಟ್ಟವರು ಯಾರು, ಏನು ಮುಂಜಾಗ್ರತೆ ಇತ್ತು ಮತ್ತು ಸರ್ಕಾರದ ಪ್ಲಾನ್ ಆಫ್ ಆಕ್ಷನ್ ಏನಿತ್ತು, ಇದೆಲ್ಲದರ ಬಗ್ಗೆ ಸ್ಪಷ್ಟನೆ ಕೊಡಲು ಸೂಚಿಸುವಂತೆ ಮನವಿ ಮಾಡಿಕೊಂಡರು.

ನಕ್ಕರೆ ಅದೇ ಸ್ವರ್ಗ

ಮಾವ ಅಳಿಯನಿಗೆ ವರದಕ್ಷಿಣೆಯಾಗಿ ಹೆಲ್ಮೆಟ್ ಕೊಟ್ಟರು.
ಅಳಿಯ : ನನ್ನ ಹತ್ತಿರ ಬೈಕಿಲ್ಲ ಮಾವ!
ಮಾವ : ಹುಚ್ಚ ನಿಮ್ಮತ್ತೆ ತನ್ನ ಮಗಳಿಗೆ ಸ್ಟೀಲ್ ಲಟ್ಟಣಿಗೆ ಕೊಟ್ಟಿದ್ದಾಳೆ. ಅದಕ್ಕೆ ಇದು

ಮೈಸೂರು ಮಿತ್ರ
ಶುಕ್ರವಾರ 6 ಜೂನ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಹಿಂತಿರುಗಿ ನೋಡುವ ಅವಶ್ಯಕತೆ ಇಲ್ಲ. ಮುಂದೆ ನೋಡಲು ನಮಗೆ ಅನಂತ ಶಕ್ತಿ, ಅನಂತ ಉತ್ಸಾಹ, ಅನಂತ ತಾಳ್ಮೆ ಬೇಕು. ಆಗ ಮಾತ್ರ ಮಹತ್ಕಾರ್ಯಗಳನ್ನು ನಾವು ಸಾಧಿಸಬಹುದು.– ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ { ಕುಣಿಯಲು ಬಾರದವನಿಗೆ
ಗಾದೆ ಸುಳ್ಳಾಗದು { ನೆಲ ಡೊಂಕು

ನಿಮ್ಮ ಪತ್ರಗಳು

■ ಪರಿಹಾರ, ತನಿಖೆ ಸತ್ತವರ ಜೀವ ಉಳಿಸಬಲ್ಲದೇ?

ಮಾನ್ಯರೇ,
ಮಂಗಳವಾರ ಮಧ್ಯಾಹ್ನ ಬೆಂಗಳೂರಿನಲ್ಲಿ ಆರ್‌ಸಿಬಿ ವಿಜಯೋತ್ಸವ ಸಮಾರಂಭದಲ್ಲಿ ಕಾಲ್ತುಳಿತ ಉಂಟಾಗಿ 11 ಮಂದಿ ಸಾವನ್ನಪ್ಪಿ, 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಇದಕ್ಕೆ ಯಾವುದೇ ಪೂರ್ವಭಾವಿ ಸಿದ್ಧತೆ, ಚರ್ಚೆ ಮತ್ತು ಇತರೆ ತಯಾರಿಗಳು ನಡೆಸದೆ ಇದ್ದುದು ಕಾರಣ.

ಲಕ್ಷಾಂತರ ಮಂದಿ ಅಭಿಮಾನಿಗಳು ಸೇರುವ ಜಾಗದಲ್ಲಿ ಯಾವುದೇ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡದ ಕಾರಣ, ಅಭಿಮಾನಿಗಳ ಹುಚ್ಚು ಅಭಿಮಾನಕ್ಕೆ ಅಮಾಯಕರಾದ 11 ಮಂದಿ ಕಾಲ್ತುಳಿತದಲ್ಲಿ ಪ್ರಾಣ ಕಳೆದುಕೊಂಡಿರುವುದು ದುರದೃಷ್ಟಕರ. ಸರ್ಕಾರ ಮುಂಚಿತವಾಗಿಯೇ ಒಂದು ನಿರ್ದಿಷ್ಟ ದಿನಾಂಕ ಗೊತ್ತುಪಡಿಸಿ, ಅದಕ್ಕೆ ಬರಬೇಕಾದವರಿಗೆ ಕೆಲವು ಅಧಿಕೃತ ಕಡೆಗಳಲ್ಲಿ (ಮಾಲ್, ಹೋಟಲ್, ಸಂಘ ಸಂಸ್ಥೆಗಳು ಇತ್ಯಾದಿ) ಆಸಕ್ತ ಅಭಿಮಾನಿಗಳಿಗೆ ಮುಂಚಿತವಾಗಿ ಪಾಸ್ ವಿತರಿಸಿ, ಪಾಸ್ ಮೂಲಕ ಶಿಸ್ತುಬದ್ಧವಾಗಿ ಅವರನ್ನು ಸಮಾರಂಭಕ್ಕೆ ಬರುವಂತೆ ಮಾಡಬಹುದಿತ್ತು. ಆದರೆ, ಎತ್ತು ಈತು ಅಂದರೆ ಕೊಟ್ಟಿಗೇಲಿ ಕಟ್ಟು ಎನ್ನುವಂತೆ, ಟ್ರೋಫಿ ಗೆದ್ದಾಕ್ಷಣವೇ ಅನನುಭವಿಗಳ ತರಹ ಸಮಾರಂಭ ಅಯೋಜಿಸಿ, ಅಮಾಯಕರ ಪ್ರಾಣ ಬಲಿಯಾಗಿರುವುದಕ್ಕೆ ಸರ್ಕಾರದ ವೈಫಲ್ಯವೇ ಕಾರಣ ಎಂದರೆ ತಪ್ಪಾಗಲಾರದು. ಇನ್ನು ಅಭಿಮಾನಿಗಳು ಕೂಡಾ ತಮ್ಮ ಹುಚ್ಚು ಅಭಿಮಾನವನ್ನು ಬದಿಗೊತ್ತಬೇಕಿತ್ತು. ಕಾಲ್ತುಳಿತಕ್ಕೆ ಮತ್ತೊಂದು ಕಾರಣ ಮೈದಾನದ ಗೇಟ್ ಅನ್ನು ಮುಚ್ಚಿದ್ದರಿಂದ ಮುಂದೆ ಇದ್ದ ಜನ ಒಮ್ಮೆಲೆ ಅಲ್ಲೇ ಒಟ್ಟಾಗಿ ನಿಂತು ಜಂಗುಳಿ ಉಂಟಾಗಿ ಮೇಲೆ ಬಿದ್ದು ಉಸಿರುಗಟ್ಟುವಂತಾಗಿ ಸಾವನ್ನಪ್ಪಿದ್ದು ಭಯಾನಕ. ಇನ್ನು ಮುಂದಾದರೂ ಈ ತರಹದ ಸಮಾರಂಭಗಳು ನಡೆಯುವ ಸಂದರ್ಭದಲ್ಲಿ ಸೂಕ್ತ ಕ್ರಮ ಕೈಗೊಂಡು ಅಯೋಜಿಸಿದರೆ ಒಳಿತು. ಇಲ್ಲದೇ ಹೋದಲ್ಲಿ, ಸರ್ಕಾರಗಳ ವೈಫಲ್ಯಗಳು ಅಮಾಯಕರ ಸಾವಿಗೆ ಮತ್ತು ಸಂತ್ರಸ್ತ ಕುಟುಂಬಸ್ಥರ ಆಕ್ರಂದನಕ್ಕೆ ನೇರ ಹೊಣೆಗಾರರಾಗಬೇಕು. ಸಾವಿಗೆ ಪರಿಹಾರದ ಹಣವಾಗಲೀ, ತನಿಖಾ ವರದಿಯಾಗಲಿ ಜೀವ ವಾಪಸ್ಸು ನೀಡಲಾಗದು ಎನ್ನುವುದನ್ನು ಅರಿತರೆ ಒಳಿತು.

–ವಿಜಯ್ ಹೆಮ್ಮಿಗೆ, ಮೈಸೂರು

ಶಭಾಷ್ ಬಡ್ಡಿಮಗ್ನೆ....!?



ಮಾನ್ಯರೆ,
ಕರ್ನಾಟಕ ಸರಕಾರ ಹಾಗೂ ಲೋಕೋಪಯೋಗಿ ಇಲಾಖೆಯು ನಗರದಾದ್ಯಂತ ರಸ್ತೆಯ ಬದಿಯಲ್ಲಿ ಮಾರ್ಗಸೂಚಿ ಫಲಕಗಳನ್ನು ನೆಟ್ಟಿರುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗಿದೆ.ಕೆಲವು ಕಿಡಿಗೇಡಿಗಳು ಇಂತಹ ಫಲಕಗಳ ಮೇಲೆ ಭಿತ್ತಿಪತ್ರಗಳನ್ನು ಅಂಟಿಸುವ ಮೂಲಕ ವಿಕೃತಿ ಮೆರೆಯುತ್ತಿದ್ದಾರೆ.ಕ್ರಮ ಕೈಗೊಳ್ಳಬೇಕಾದ ಲೋಕೋಪಯೋಗಿ ಇಲಾಖೆ ಕೈ ಕಟ್ಟಿ ಕುಳಿತಿದೆ. ಮೈಸೂರಿನ ಕುವೆಂಪು ನಗರದ ಇಸ್ಕಾನ್ ಬಳಿ ಇಂತಹ ಒಂದು ಫಲಕವಿದೆ.ಈ ಫಲಕದ ಮೇಲೆ ಚಲನಚಿತ್ರ ಒಂದರ ಭಿತ್ತಿಪತ್ರವನ್ನು ಅಂಟಿಸಲಾಗಿದೆ. ಈ ಚಲನ ಚಿತ್ರದ ಹೆಸರು "ಶಭಾಷ್ ಬಡ್ಡಿಮಗ್ನೆ...!" ಇಂತಹ ಮಾರ್ಗಸೂಚಿ ಫಲಕಗಳ ಮೇಲೆ ಭಿತ್ತಿಪತ್ರಗಳನ್ನು ಅಂಟಿಸಿದರೆ ಲೋಕೋಪಯೋಗಿ ಇಲಾಖೆಯಾಗಲೀ ಕರ್ನಾಟಕ ಸರಕಾರವಾಗಲೀ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂಬ ಭಂಡ ಧೈರ್ಯದಿಂದ ಈ ಭಿತ್ತಿ ಅಂಟಿಸಿದ ಭೂಪನ ಧೈರ್ಯಕ್ಕೆ ಮೆಚ್ಚಿ "ಶಭಾಷ್ ಬಡ್ಡೀಮಗ್ನೆ....!" ಎನ್ನಲೇಬೇಕು!!

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು.

■ ಈ ಮಟ್ಟಿನ ಉನ್ಮಾದ, ಉತ್ಸಾಹ ಅರ್ಥಹೀನ

ಮಾನ್ಯರೆ,
ನಾನೂ ಒಬ್ಬ ಕಟ್ಟಾ ಕ್ರಿಕೆಟ್ ಅಭಿಮಾನಿಯೇ. ಭಾರತವು ಆಡುವ ಪ್ರತಿಯೊಂದು ಪಂದ್ಯದಲ್ಲೂ ಅದು ಜಿಂಬಾಬ್ವೆ, ನೇಪಾಳದ ಮೇಲೆ ಆದರೂ ಅದರಲ್ಲಿ ಭಾರತದ ಗೆಲುವನ್ನು ಹಾರೈಸಿದ್ದೇನೆ, ಸಂಭ್ರಮಿಸಿದ್ದೇನೆ. ದೇಶೀಯ ಪಂದ್ಯಾವಳಿಗಳಲ್ಲೂ ಕರ್ನಾಟಕದವರ ಗೆಲುವನ್ನು ಮನಸಾರೆ ಹಾರೈಸಿದ್ದೇನೆ. ಐಪಿಎಲ್‌ನಲ್ಲಿ ನನಗಿರುವ ಆಸಕ್ತಿ ಅದರಲ್ಲಿ ದೇಶೀಯ ಆಟಗಾರರು ಅವರು ಯಾವುದೇ ಕ್ಲಬ್‌ಗೆ ಆಡುತ್ತಿರಲಿ ಅವರು ಟೂರ್ನಮೆಂಟಿನ ಸ್ಪರ್ಧಾತ್ಮಕ ವಾತಾವರಣದಲ್ಲಿ ತಮ್ಮ ಪ್ರತಿಭೆಯನ್ನು ಹೆಚ್ಚಿಸಿಕೊಂಡು ದೇಶವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸುವ ಮಟ್ಟಕ್ಕೆ ಬೆಳೆಯಬಹುದು ಎಂಬುದಕ್ಕಷ್ಟೇ ಸೀಮಿತವಾದದ್ದು. ಇಲ್ಲಿ ಹರಿಯುವ ಹಣದ ಹೊಳೆ ದೇಶದ ಮೂಲೆ ಮೂಲೆಯ ಪ್ರತಿಭೆಗಳನ್ನು ಹೊರತರುವಲ್ಲಿ ಸಹಾಯಕ ಎಂಬುದಕ್ಕಾಗಿ ಮಾತ್ರ ಈ ಟೂರ್ನಮೆಂಟಿನಲ್ಲಿ ನನ್ನ ಆಸಕ್ತಿ ಇದ್ದು ಕಳೆದ 18 ವರ್ಷಗಳಲ್ಲಿ ಯಾವೊಂದು ನಿರ್ದಿಷ್ಟ ಕ್ಲಬ್‌ನ್ನೂ ಬೆಂಬಲಿಸಲಿಲ್ಲ, ಮೆಚ್ಚಿಲ್ಲ. ರಾಷ್ಟ್ರ ವಿರೋಧಿ ಶಾರೂಕ್ ಖಾನ್ ಒಡೆತನದ ಕಾರಣಕ್ಕಾಗಿ ಕೆಕೆಆರ್ ಅನ್ನು ಮನಸಾರೆ ದ್ವೇಷಿಸಿದ್ದೆ. ಐಪಿಎಲ್‌ನ ನೀತಿ ನಿಯಮಾವಳಿಗಳ ಕಾರಣದಿಂದಾಗಿ ಒಂದು ಕಾಲದ ಬಲಿಷ್ಠ ತಂಡವಾಗಿದ್ದ ಪಾಕಿಸ್ತಾನವನ್ನು ಹೇಳ ಹೆಸರಿಲ್ಲದಂತೆ ಮಾಡುವಲ್ಲಿ ಐಪಿಎಲ್ ಯಶಸ್ವಿಯಾಗಿರುವುದರ ಬಗ್ಗೆ ಹೆಮ್ಮೆ ಇದೆ. ಅದು ಬಿಟ್ಟರೆ ಇದು ನನ್ನ ಮಟ್ಟಿಗೆ ಇದು ಒಂದು passing event ಅಷ್ಟೇ. ಆ ಕ್ಷಣಕ್ಕೆ ನೋಡಿ ಮರೆಯುವಂತದ್ದು. ಈ ಮಟ್ಟಿನ ಉನ್ಮಾದ, ಉತ್ಸಾಹ ಅರ್ಥಹೀನ ಅನ್ನಿಸುತ್ತದೆ.

–ಆ. ಸು. ರವೀಂದ್ರ, ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

■ ಅಭಿಮಾನವಿರಲಿ ಅಂಧಾಭಿಮಾನ ಬೇಡ

ಮಾನ್ಯರೇ
18 ವರ್ಷದ ಬಳಿಕ ಆರ್‌ಸಿಬಿ ತಂಡ ಐಪಿಎಲ್ ಚಾಂಪಿಯನ್ನಾಗಿ ಹೊರ ಹೊಮ್ಮಿದೆ. ಈ ಸಂಭ್ರಮದ ಕೆಲವೇ ಗಂಟೆಗಳಲ್ಲಿ ಶೋಕವಾಗಿ ಮಾರ್ಪಟ್ಟಿದ್ದು ವಿಪರ್ಯಾಸ ಮಂಗಳವಾರ ರಾತ್ರಿ ಅಭಿಮಾನಿಗಳು, ರಸ್ತೆ, ಪಾರ್ಕುಗಳಲ್ಲೇ ಸಂಭ್ರಮ ಮುಗಿಲುಮುಟ್ಟಿತ್ತು. ಆದರೆ ಕೆಲವೇ ಗಂಟೆಗಳ ನಂತರ ಬುಧವಾರ ವಿಜಯೋತ್ಸವ ಸಂದರ್ಭದಲ್ಲಿ ಕಾಲ್ತುಳಿತಕ್ಕೆ 11 ಜನರ ಪ್ರಾಣ ಹಾರಿ ಹೋಯಿತು. ಹಲವು ಜನರು ಗಾಯಗೊಂಡರು. ಈ ಅಭಿಮಾನವನ್ನು ಏನೆಂದು ಹೇಳಬೇಕು. ಈ ಅಭಿಮಾನಿಗಳ ಸಾವಿಗೆ ಯಾರನ್ನು ಹೊಣೆಗಾರಿಕೆ ಮಾಡಬೇಕು!? ಇಲ್ಲ ಭದ್ರತಾ ವೈಫಲ್ಯವೇ? ಇಲ್ಲ ಅಭಿಮಾನಿಗಳು ತಮ್ಮ ನೆಚ್ಚಿನ ಕ್ರಿಕೆಟ್ ತಾರೆಯರನ್ನು ನೋಡಲು ನೂಕುನುಗ್ಗಲು ಕಾರಣವಾಗಿ ದುಃಖಕರ ಘಟನೆ ಸಂಭವಿಸಿದೆ ಎನ್ನಲೇ. ಏನೇ ಆಗಲಿ ಎಲ್ಲಾ ಕ್ರೀಡೆಗಳ ಬಗ್ಗೆ ಅಭಿಮಾನವಿರಬೇಕು. ಆದರೆ ಅಂದಾಭಿಮಾನವಾದಾಗ ಇಂತಹ ಘಟನೆಗಳು ಸಂಭವಿಸುತ್ತದೆ. ಕ್ರೀಡೆಯನ್ನು ಪ್ರೋತ್ಸಾಹಿಸುವ ಮತ್ತು ಸಂಭ್ರಮಿಸುವ ಈ ರೀತಿ ಸಂಭ್ರಮಾಚರಣೆಯಲ್ಲಿ ಶೋಕದ ಆಚರಣೆ ಮಾಡುವ ಸ್ಥಿತಿಗೆ ಹೋಗಬಾರದು. ಅಭಿಮಾನವಿರಲಿ ಆದರೆ ಅಂದಾಭಿಮಾನ ಬೇಡ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

ಸಂತಸ ಒಂದೆಡೆ ; ಸಂಕಟ ಮತ್ತೊಂದೆಡೆ...!





ಮಿರ್ಲೆ ಚಂದ್ರಶೇಖರ್
ಮೊ. 99161 29654

> ಆಟಗಾರರು ಯಾರಾದರೂ ಸತ್ತವರ ಮನೆಗೆ ಹೋಗಿ ಸಂತೈಸಿದ್ದಾರೆಯೇ?, ಇವರೇನು ದೇವಲೋಕದಿಂದ ಇಳಿದು ಬಂದಿದ್ದಾರೆಯೇ?, ನಿಮ್ಮ ಮಗನಿಗೂ ತರಬೇತಿ ನೀಡಿದರೆ ಆತನೂ ಇವರನ್ನೂ ಮೀರಿಸಬಲ್ಲ ಆಟಗಾರನಾಗಬಹುದು!. ನಡೆದ ಬೆಳವಣಿಗೆಯು ಜನ ಮರುಳೋ ಜಾತ್ರೆ ಮರುಳೋ ಎಂಬುದಕ್ಕೆ ಜೀವಂತ ಸಾಕ್ಷಿ. ಇಷ್ಟೆಲ್ಲಾ ಬೆಳವಣಿಗೆಯ ನಂತರವಷ್ಟೇ ಜನರು ಅಂತೂ ಒಂದು ತೀರ್ಮಾನಕ್ಕೆ ಬಂದಂತಿದೆ, ಅದೆಂದರೆ; ಇದು ಬೇಕಿತ್ತಾ..?

ತುಂಬಾ ಹಸಿವಾಗಿದ್ದಾಗ ಊಟ ಮಾಡಿದರೆ ಸಿಗುವಂತಹ ಆನಂದ, ಹಸಿವೆ ಇಲ್ಲದಾಗ ಮಾಡಿದ ಊಟದಲ್ಲಿ ಸಿಗದು. ಅದಕ್ಕೇ ಹೇಳೋದು 'ಹಸಿದವರಿಗೆ ಅನ್ನ ರುಚಿಸುತ್ತೆ' ಅಂತ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು 18ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯ ಗೆದ್ದಾಗ ಅಭಿಮಾನಿಗಳಿಗೆ ಹಸಿದು ಮಾಡಿದ ಊಟದ ಅನುಭವ ಆಗಿತ್ತು. ಹದಿನಾಲ್ಕು ವರ್ಷಗಳ ಕಾಲ ಕಷ್ಟದಲ್ಲಿಯೇ ಕಳೆದ ಶ್ರೀರಾಮನ ವನವಾಸದಂತೆ, ಹದಿನೆಂಟು ವರ್ಷ ಗಳು ಸೋಲಿನ ಹತಾಶೆಯದಲ್ಲಿದ್ದ ರಾಯಲ್ಸ್ ಚಾಲೆಂಜರ್ಸ್ ಬೆಂಗಳೂರು ತಂಡವು ಇದೀಗ ಗೆಲುವಿನ ಮೃಷ್ಟಾನ್ನ ಸವಿದು, ಸಂಭ್ರಮಿಸುತ್ತಿದೆ. ಈ ಸಂಭ್ರಮದಲ್ಲಿ ಗಡಿ ವ್ಯಾಪ್ತಿಯನ್ನು ಮೀರಿದವರು ಇದ್ದಾರೆ, ಸರ್ವಧರ್ಮೀಯರು ಇದ್ದಾರೆ, ಎಲ್ಲಾ ಭಾಷೆಗಳನ್ನು ಮಾತನಾಡುವ ಅಭಿಮಾನಿಗಳಿದ್ದಾರೆ. ತಂಡದಲ್ಲಿ ಆಡುವ ಆಟಗಾರರಿಗೂ ಇವುಗಳಲ್ಲಿ ಯಾವೊಂದು ಮಿತಿ ಇಲ್ಲ. ದೇಶದ ಮೂಲೆಮೂಲೆಗಳಿಂದ ಸಂಭ್ರಮಿಸುವ ಸುದ್ದಿ ಹರಿದು ಬರುತ್ತಿದೆ, ಇದೀಗ ಅಭಿಮಾನಿಗಳು ಆರ್‌ಸಿಬಿ ಧರ್ಮಕ್ಕೆ ಸೇರಿದವರಾಗಿದ್ದಾರೆ, ದ್ವೇಷ ಅಸೂಹೆ ಭಿನ್ನಾಭಿಪ್ರಾಯಗಳಿಲ್ಲದೆ ಸಂತೋಷ ಪಡುವುದಷ್ಟೇ ಇದರ ತತ್ವ.

ಮಹಾಭಾರತದಲ್ಲಿ ಕುರುಕ್ಷೇತ್ರ ಯುದ್ಧವು ಒಟ್ಟು 18 ದಿನಗಳ ಕಾಲ ನಡೆಯಿತು, ಯುದ್ಧದಲ್ಲಿ ಸತ್ತವರ ಲೆಕ್ಕವೇ ಸಿಗಲಿಲ್ಲ, ಅದೇ ರೀತಿಯಾಗಿ 18 ಸೋಲುಗಳ ನಂತರ ಆರ್‌ಸಿಬಿ ಗೆಲುವು. ಆದರೆ ಒಂದು ಚೇಂಜ್, ಇಲ್ಲಿ ಎಲ್ಲವಕ್ಕು ಲೆಕ್ಕವುಂಟು!.

ಕುವೆಂಪುರವರು ಹೇಳಿದಂತೆ ವಿಶ್ವಮಾನವನಾಗುವ ಕಡೆಗೆ ಕ್ರಿಕೆಟ್ ಅಭಿಮಾನಿಗಳು ಹೆಜ್ಜೆ ಇಟ್ಟು ವಿಶ್ವಕ್ಕೇ ಮಾದರಿಯಾಗಿದ್ದಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಅಭಿಮಾನಿಗಳು ಸಂಸ್ಕೃತಿಯ ರಿಯಲ್ ಚೇಂಜರ್ಸ್ ಆಗಿ ನಿಂತು ಏನೊಂದು ಭೇದಗಳಿಲ್ಲದೆ ಖುಷಿಯಲ್ಲಿ ಮುಳುಗಿದ್ದಾರೆ. ಆಟಕ್ಕೆ ಇಷ್ಟೊಂದು ಶಕ್ತಿ ಇದೆಯೇ ಎಂಬ ಪ್ರಶ್ನೆ ಕಾಡುತ್ತದೆ. ಹಿಂದೆ ನಮ್ಮ ಭಾರತ ತಂಡ ಶತ್ರು ದೇಶದ ಟೀಂ ವಿರುದ್ಧ ಆಡುವಾಗ ಯುದ್ಧವೇ ನಡೆಯುತ್ತಿರುವಂತೆ ಬಾಸವಾಗುತ್ತಿತ್ತು. ಅಷ್ಟೊಂದು ಮತ್ಸರದ ನಡುವೆ ಆಟ ನಡೆಯುತ್ತಿತ್ತು. ಯಾಕಾದರೂ ಈ ಆಟ ಆಡುತ್ತಾರೆ ಎನಿಸುತ್ತಿತ್ತು. ನಮ್ಮವರು ಸೋತಾಗ ಆಟಗಾರರನ್ನು ಮನಸೋ ಇಚ್ಛೆ ಬೈದು ಮನೆಯ ಮೇಲೆ ಅಂಧಾಭಿಮಾನಿಗಳು ಕಲ್ಲುಗಳನ್ನು ತೂರಿದ್ದಾರೆ.

ನನಗೆ ಕ್ರಿಕೆಟ್ ಎಂದರೆ ಸೋಮಾರಿಗಳ ಆಟವೆಂದೇ ಇಲ್ಲಿಯವರೆಗೂ ಅನ್ನಿಸುತ್ತಿತ್ತು. ಜನರೇಕೆ ಕ್ರಿಕೆಟ್‌ಗೆ ಇಷ್ಟೊಂದು ದಾಸರಾಗಿ ಸಮಯ ಹಾಳು ಮಾಡಿಕೊಂಡು ಟಿವಿಗಳ ಮುಂದೆ ಕುಳಿತಿರುತ್ತಾರೆ ಎಂದು ಬೇಸರವಾಗುತ್ತಿತ್ತು. ಆದರೆ ನೆನ್ನೆಯ ಆಟದ ಫಲಿತಾಂಶದಿಂದ ನನ್ನ ಅನಿಸಿಕೆಯು ಪೂರ್ಣವಾಗಿ ಬದಲಾಗಿದೆ. ಆಪರೇಷನ್ ಸಿಂಧೂರಕ್ಕೆ ಸಿಕ್ಕ ಜಯದಷ್ಟೇ ಅಭಿಮಾನಿಗಳು ಸಂಭ್ರಮಿಸಿದ್ದಾರೆ. ಯುದ್ಧದಲ್ಲಿ ವೈರಿಗಳನ್ನು ಸದೆಬಡಿದರೆ, ಐಪಿಎಲ್ ಆಟದಲ್ಲಿ ಸೌಹಾರ್ದತೆ ಬೆಳೆಯುವುದರ ಜೊತೆಗೆ, ಆರ್ಥಿಕವಾಗಿ ಅಭಿವೃದ್ಧಿ ಆಗಿದೆ ಮತ್ತು ನಮ್ಮವರಲ್ಲದಿದ್ದರೂ ಅನ್ಯರನ್ನು ನಮ್ಮವರೆಂದು ಜನರು ತಮ್ಮ ಭಾವನೆಗಳನ್ನು ಹೇಗೆಲ್ಲಾ ವ್ಯಕ್ತಪಡಿಸುತ್ತಾರೆ ಎನ್ನುವುದು.

ಭಾಷೆ, ಧರ್ಮ, ಗಡಿ ಮೀರಿದ ಅಭಿಮಾನದ ಕಾರಣ ಕ್ರಿಕೆಟ್ ತನ್ನತ್ತ ಜನರನ್ನು ಸೆಳೆದಿದ್ದು ಸುಳ್ಳಲ್ಲ. ಗೆಲುವಿಗೆ ತಂಡದ ಎಲ್ಲಾ ಆಟಗಾರರ ಉತ್ತಮ ಆಟ ಕಾರಣ ಇರಬಹುದು. ಎಲ್ಲರೂ ಅಭಿನಂದನಾರ್ಹರೇ. ಆದರೆ ನಮ್ಮ ರಾಜ್ಯಕ್ಕೆ ಅದರಲ್ಲೂ ಬೆಂಗಳೂರಿಗರಿಗೆ ಮಹಾನ್ ಆಟಗಾರನಾಗಿ, ಮೇರು ವ್ಯಕ್ತಿತ್ವ ಹಾಗೂ ಸಹಿಷ್ಣತೆಯುಳ್ಳ ಆಟಗಾರ ನಾಗಿ ಕಂಡಿದ್ದು ನಿರ್ಭಯಿ ನಾಯಕ, ಚೇಸ್ ಮಾಸ್ಟರ್, ರನ್ ಮೆಷಿನ್ ಎಂದೆಲ್ಲಾ ಕರೆಯಲ್ಪಡುವ ವಿರಾಟ್ ಕೊಹ್ಲಿ ಎಂಬ 36ನೇ ವಯಸ್ಸಿನ ವ್ಯ(ಶ)ಕ್ತಿ. ಬೆಂಗಳೂರೆಂದರೆ ಕೊಹ್ಲಿಗೆ ಬಲು ಇಷ್ಟ, ಕ್ರೀಡಾಂಗಣದಲ್ಲಿ ಗೆಲುವಿನ ಭಾಷಣ ಮಾಡುವಾಗ ಬೆಂಗಳೂರೆಂದರೆ ನನ್ನ ಆತ್ಮ ಮತ್ತು ಹೃದಯ ಎಂದಿದ್ದರು. ನನ್ನ ಯೌವ್ವನ, ಉತ್ತಮ ಆಟ, ಅನುಭವಗಳನ್ನು ಧಾರೆ ಎರೆದು 18 ವರ್ಷಗಳಿಂದ ಗೆಲುವಿಗಾಗಿ ಆಡುತ್ತಾ ಬಂದಿದ್ದೇನೆ. ನನ್ನಿಂದ ಏನೆಲ್ಲಾ ಸಾಧ್ಯವೋ ಎಲ್ಲವನ್ನೂ ಕೊಟ್ಟಿದ್ದೇನೆ, ಆ ಫಲ ಇಂದು ನನ್ನ ಆರ್‌ಸಿಬಿ ಅಭಿಮಾನಿಗಳ ಗೆಲುವು ಕೂಡ ಎಂದಿರು ವುದು ಅವರ ವ್ಯಕ್ತಿತ್ವವನ್ನು ತೋರಿಸುತ್ತದೆ. 36 ವರ್ಷ ವಯಸ್ಸಿನ ಕೊಹ್ಲಿಯು ತನ್ನ ವಯಸ್ಸಿನ ಅರ್ಧದಷ್ಟು ಕಾಲ ಸುದೀರ್ಘ 18 ವರ್ಷಗಳಿಂದಲೂ ಸೋಲುತ್ತಿದ್ದ ಟೀಂನಲ್ಲೇ ಆಡಿಕೊಂಡು ಬಂದಿರುವುದು ಶ್ಲಾಘನೀಯ.

ಬೆಂಗಳೂರೆಂದರೆ ಇವರಿಗೆ ಪ್ರೀತಿ, ಬಹುಶಃ ತನ್ನ ಪತ್ನಿ ಅನುಷ್ಕಾ ಶರ್ಮ ಆಯೋಧ್ಯೆಯಲ್ಲಿ ಹುಟ್ಟಿದರೂ ಬೆಂಗಳೂರಿನಲ್ಲಿ ವಿದ್ಯಾಬ್ಯಾಸ ಮಾಡುತ್ತಾ ಇಲ್ಲಿ ಬೆಳೆದ ಕಾರಣಕ್ಕೋ, ಒಟ್ಟಿನಲ್ಲಿ 18 ವರ್ಷಗಳಿಂದಲೂ ಮನಸ್ಸು ವಿಚಲಿತವಾಗದೆ ಸತತ ಸೋಲುಣ್ಣುತ್ತಿದ್ದ ತಂಡದೊಂದಿಗೆ ಇರುವುದೆಂದರೆ ದೃಢ ನಿರ್ಧಾರದ ಅಗಾಧತೆ ಎಷ್ಟಿತ್ತು ಎನ್ನುವುದು ಪ್ರಶ್ನೆಯಾಗಿ ಉಳಿಯುತ್ತದೆ. ಇದೇ ಕಾರಣಕ್ಕೆ ಕನ್ನಡಿಗರಿಗೆ ಇಷ್ಟವಾಗುತ್ತಾರೆ. ಇವರನ್ನು ಕನ್ನಡದ ದತ್ತು ಪುತ್ರ ಎಂದು ಸುದ್ದಿ ಮಾಧ್ಯಮಗಳಲ್ಲಿ ನೋಡಿ ಬೆರಗಾದೆ. ಮೊನ್ನೆ ಭಾಷಾ ಪರಿಣಿತ ಅಲ್ಲದಿದ್ದರೂ ಮೇರುನಟನೊಬ್ಬ ಕನ್ನಡದ ಬಗ್ಗೆ ಮಾತನಾಡಿ ಅದನ್ನೇ ಸಮರ್ಥಿಸಿಕೊಳ್ಳುತ್ತಿರುವ ಕಾರಣಕ್ಕೆ ನಟನೆಯಲ್ಲಿ ಸಂಪಾದಿಸಿದ ಗೌರವವನ್ನು ಕಳೆದುಕೊಂಡಿದ್ದಾರೆ.

ಹೊರಗಿನಿಂದ ಬಂದವರು ಸ್ಥಳೀಯರ ಭಾವನೆಗಳಿಗೆ ತಕ್ಕಂತೆ ಸ್ಪಂದಿಸಬೇಕು. ನೆಲ, ಜಲ ಹಾಗೂ ಭಾಷೆಯ ವಿಷಯಕ್ಕೆ ಸೆಲೆಬ್ರೆಟಿ ಎನ್ನುವ ಅರೆಬರೆ ತಿಳುವಳಿಕೆಯ ಅಹಂನಿಂದ ಕೈಹಾಕಿದರೆ ಸಂಪಾದಿಸಿದ ಗೌರವಕ್ಕೆ ಮೂರು ಕಾಸಿನ ಬೆಲೆಯೂ ಸಿಗದು.

ಆದರೆ ಕೊಹ್ಲಿಯ ನಡೆ–ನುಡಿಯೇ ಬೇರೆ ಇದೆ. 1988 ನವಂಬರ್ 5 ರಂದು ದೆಹಲಿಯಲ್ಲಿ ಪಂಜಾಬಿ ಹಿಂದೂ ಕುಟುಂಬದಲ್ಲಿ ಕ್ರಿಮಿನಲ್ ವಕೀಲರಾಗಿದ್ದ ಪ್ರೇಮನಾಥ್ ಮತ್ತು ಸರೋಜ್ ಕೊಹ್ಲಿ ದಂಪತಿಗಳ ಪುತ್ರನಾಗಿ ಜನಿಸಿದ ವಿರಾಟ್ ಕೊಹ್ಲಿಯು ಕ್ರಿಕೆಟ್‌ನಲ್ಲಿ ವಿಶ್ವಕ್ಕೇ ವಿರಾಟ ದರ್ಶನ ತೋರಿಸಿದರು. ಕನ್ನಡ ಗೊತ್ತಿಲ್ಲದ ಪಂಜಾಬಿ ಕುಟುಂಬದ ಹುಡುಗ, ಪಂಜಾಬ್ ಕಿಂಗ್ಸ್ ವಿರುದ್ಧದ ಜಯದಲ್ಲಿ ಕನ್ನಡದ ದತ್ತು ಪುತ್ರನಾಗಿ ಜನರು ಸ್ವೀಕರಿಸಿದ್ದಾರೆ, ಅವರ ಬಾಯಲ್ಲಿ ಕನ್ನಡದ ಒಂದೆರಡು ಪದಗಳು ಮುತ್ತಿನಂತೆ ಉದುರಿದಾಗ ಹಾಗೂ ಕಣ್ಣಲ್ಲಿ ನೀರು ತುಂಬಿಕೊಂಡಾಗ ಕನ್ನಡಿಗರು ಪೂರ್ಣವಾಗಿ ಆತನನ್ನು ನಮ್ಮವನೆಂದೇ ತೀರ್ಮಾನಿಸಿಬಿಟ್ಟರು.

ಕ್ರಿಕೆಟ್ ಜ್ಞಾನ ಅಷ್ಟಾಗಿ ಇಲ್ಲದ ನನಗೆ ಬಹಳ ವರ್ಷಗಳಿಂದಲೂ **'ಈ ಸಲ ಕಪ್ ನಮ್ದೇ....'** ಎನ್ನುವುದನ್ನು ಕೇಳಿಕೇಳೀ.. ಜನರ ಬಾಯಲ್ಲಿ ಒಂದು ರೀತಿಯ ಅಪಹಾಸ್ಯದ ನುಡಿಯಾಗಿತ್ತು, ಹೇಳುವುದಕ್ಕೆ ಮಜಾ ಎನಿಸುವ ವಾಕ್ಯವು ಗಾದೆ ಮಾತುಗಳಂತೆ ಎಲ್ಲರೊಳು ಬೆರೆತು ನಿತ್ಯವು ಆಡುಭಾಷೆಯಾಗಿ ಬಳಕೆ ಆಗುತ್ತಿದೆ. ಭಾಷೆಯ ಬೆಳವಣಿಗೆ ಅನ್ನಬಹುದೇ?.

•••

ಇದುವರೆಗೂ ಹೇಳಿದ್ದೆಲ್ಲ ಜೂನ್ 3 ಮಂಗಳವಾರ ಗೆಲುವಿನ ಸಮಯದಿಂದ ಬುಧವಾರ ಸಂಜೆಯವರೆಗೂ ಸರಿಯೆ, ಇಡೀ ರಾಜ್ಯ ಸಂಭ್ರಮಿಸುತ್ತಿತ್ತು. ಸರ್ಕಾರವು ಇದರಲ್ಲಿ ಭಾಗಿ ಆಗಲು ಅಥವಾ ಸಂದರ್ಭವನ್ನು ಲಾಭ ಮಾಡಿಕೊಳ್ಳುವುದಕ್ಕೋ ಎಂಬಂತೆ ವಿಧಾನಸೌಧದ ಮೆಟ್ಟಿಲು ಬಳಿ ಹಾಗೂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪೂರ್ವಸಿದ್ಧತೆ ಹಾಗೂ ದುರ್ಘಟನೆಗಳನ್ನು ನಿಭಾಯಿಸಲು ಮುನ್ನೆಚ್ಚರಿಕೆ ವಹಿಸದೆ ಸಮಾರಂಭ ಏರ್ಪಡಿಸಿತ್ತು, ಸಂಭ್ರಮಿಸಬೇಕಾಗಿದ್ದ ಜನತೆ ಶೋಕಸಾಗರದಲ್ಲಿ ಮುಳುಗಿತು. ಒಂದು ಗೆಲುವಿಗೆ 18 ವರ್ಷಗಳನ್ನು ತೆಗೆದುಕೊಂಡ ತಂಡವನ್ನು ಬೆಂಗಳೂರಿನಲ್ಲಿ ಅಂದಾಜು ಮೂರು ಲಕ್ಷದಷ್ಟು ಜನಸ್ತೋಮದ ನಡುವೆ ಸನ್ಮಾನಿಸಲು ಇವರೇನು ಯುದ್ಧ ಗೆದ್ದು ಬಂದಿದ್ದರೇ?, ಯಕಶ್ಚಿತ್ ಇದೊಂದು ಆಟ, ವರ್ಷವೆಲ್ಲಾ ನಡೆಯುವ ಪಂದ್ಯಗಳಲ್ಲಿ ಸೋಲು–ಗೆಲುವು ಇರುವಂತಹದ್ದೆ, ಸೋತಾಗ ಕುಗ್ಗದೆ, ಗೆದ್ದಾಗ ಹಿಗ್ಗದೆ ಇರಬೇಕು.

ಸನ್ಮಾನಿಸಲೇ ಬೇಕೆಂದಿದ್ದರೆ ಗಣ್ಯರ ಸಮ್ಮುಖದಲ್ಲಿ ವಿಧಾನಸೌಧದ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ಗೌರವಿಸಿ ಟಿವಿಗಳಲ್ಲಿ ಕಾರ್ಯಕ್ರಮವನ್ನು ಲೈವ್ ಕೊಡಬಹುದಿತ್ತು. ಸಿದ್ದತೆಗೆ ಸಮಯವನ್ನೇ ಕೊಡದೆ ಇಷ್ಟೊಂದು ಜನಸಾಗರ ಸೇರುವ ಕಾರ್ಯಕ್ರಮವನ್ನು ಮಾಡುವುದು ಹುಚ್ಚುತನವಲ್ಲದೆ ಬೇರೇನು?, ಇಲ್ಲಿ ಪೊಲೀಸ್ ವೈಫಲ್ಯ ಖಂಡಿತ ಕಾಣದು. ಜನರನ್ನು ರಕ್ಷಿಸಲು ಹೆಣಗಾಡುತ್ತಿದ್ದದ್ದು ಅವರ ಬದ್ದತೆಯನ್ನು ತೋರಿಸುತ್ತಿತ್ತು. ಆಟಗಾರರು ಜನರಿಗಾದರೂ ಕಾಣಿಸಿದರೆ, ಸ್ಟೇಜ್‌ನಲ್ಲಿ ರಾಜಕಾರಣಿಗಳ ಕುಟುಂಬದ ಕಾರ್ಯಕ್ರಮದಂತೆ ಮಕ್ಕಳು ಮೊಮ್ಮಕ್ಕಳೇ ತುಂಬಿದ್ದರು.

ಆಪರೇಷನ್ ಸಿಂಧೂರದಲ್ಲಿ ದೇಶಕ್ಕಾಗಿ ಕುಟುಂಬವನ್ನು ತೊರೆದು ಮಳೆ–ಚಳಿಗಾಳಿ ಎನ್ನದೆ, ನಿದ್ರೆ–ಆಹಾರ ಗಳಿಲ್ಲದೆ ಹೋರಾಡಿ ಗೆಲುವು ತಂದುಕೊಟ್ಟ ಯೋಧರಿಗೆ ನಾವು ಈ ಮಟ್ಟದಲ್ಲಿ ಸನ್ಮಾನಿಸಿ ಸಂಭ್ರಮಿಸಿದ್ದೇವೆಯೇ?. ಕ್ರಿಕೆಟಿಗರು ಪುಕ್ಕಟೆ ಆಡುವುದಿಲ್ಲ, ಸಂಭಾವನೆಯಾಗಿ ಕೋಟಿಕೋಟಿ ಹಣ ಇವರ ಖಾತೆಗೆ ಜಮೆ ಆಗುತ್ತದೆ. ರಾಜಕಾರಣಿಗಳ ಆಸ್ತಿಯ ಹಾಗೆ ಇವರ ಸಂಪತ್ತು ಕೂಡ ಅಲ್ಪ ಕಾಲದಲ್ಲೇ ವೃದ್ದಿಸಿಬಿಡುತ್ತದೆ. ಇಂದಿನ ಯುವಕರು ತಮ್ಮ ಜೀವನದ ದಾರಿಯನ್ನು ಕಂಡುಕೊಳ್ಳುವುದನ್ನು ಬಿಟ್ಟು ಸಿನಿಮಾ ನಾಯಕರು ಹಾಗೂ ಕ್ರಿಕೆಟಿಗರ ಹಿಂದೆ ಬೀಳುವುದು ನಿಲ್ಲಬೇಕು, ಕಾಲ್ತುಳಿತಕ್ಕೆ ಸಿಕ್ಕಿ ಸತ್ತ 11 ಜನರು ಯುವ ಜನಾಂಗವೇ ಆಗಿದ್ದಾರೆ. 40 ಕ್ಕೂ ಹೆಚ್ಚು ಯುವಮಕ್ಕಳು ಆಸ್ಪತ್ರೆಯ ಬೆಡ್‌ನಲ್ಲಿ ಮಲಗಿದ್ದಾರೆ. ಅವರ ಕುಟುಂಬ ಶೋಕದಲ್ಲಿ ಮುಳುಗಿದೆ. ಈಗ ನನಗೆ ಅನಿಸಿದ್ದು 18 ವರ್ಷ ಸೋತವರು 19ನೇ ವರ್ಷವೂ ಸೋತಿದ್ದರೆ ಕುಟುಂಬಗಳಿಗೆ ಇಂಥಹ ಪರಿಸ್ಥಿತಿ ಬರುತ್ತಿರಲಿಲ್ಲ ವೆಂದು. ಗೆದ್ದಿದ್ದೂ ಆಯ್ತು, ಮುಗಿಲು ಮುಟ್ಟುವಂತೆ ಜೈಕಾರ ಹಾಕಿ ಸಂಭ್ರಮಿಸಲು ಟೀಂನಲ್ಲಿ ಇದ್ದವರೆಲ್ಲರೂ ಕನ್ನಡಿಗರೇನು?.

ಕೊನೆಯಲ್ಲಿ ಒಂದು ಮಾತು; ಆಟಗಾರರು ಯಾರಾದರೂ ಸತ್ತವರ ಮನೆಗೆ ಹೋಗಿ ಸಂತೈಸಿದ್ದಾ ರೆಯೇ?, ಇವರೇನು ದೇವಲೋಕದಿಂದ ಇಳಿದು ಬಂದಿದ್ದಾರೆಯೇ?, ನಿಮ್ಮ ಮಗನಿಗೂ ತರಬೇತಿ ನೀಡಿದರೆ ಆತನೂ ಇವರನ್ನೂ ಮೀರಿಸಬಲ್ಲ ಆಟಗಾರ ಆಗಬಹುದು!. ನಡೆದ ಬೆಳವಣಿಗೆಯು ಜನ ಮರುಳೋ ಜಾತ್ರೆ ಮರುಳೋ ಎಂಬುದಕ್ಕೆ ಜೀವಂತ ಸಾಕ್ಷಿ.

ಸಿಎಂ ಮೊಮ್ಮಗ, ಸಚಿವರ ಮಕ್ಕಳ ಫೋಟೋಗ್ರಾಫ್; ಆಟೋಗ್ರಾಫ್‌ಗಷ್ಟೇ ಆರ್‌ಸಿಬಿ ಸಂಭ್ರಮಾಚರಣೆ

ಮಾಜಿ ಸಂಸದ ಪ್ರತಾಪ್ ಸಿಂಹ ಕಟು ಟೀಕಾಪ್ರಹಾರ

- ಸಿದ್ದರಾಮಯ್ಯ ಸಂವೇದನೆ ಇಲ್ಲದ ನಿರ್ಭಾವಕ ವ್ಯಕ್ತಿ
- ಭದ್ರತೆ ಪಾಠ ಮಾಡುತ್ತಿದ್ದ ಖರ್ಗೆ, ಲಾಡ್ ಈಗೆಲ್ಲಿ
- ಇವರಿಗೆ ವಿರಾಟ್ ಕೊಹ್ಲಿ ಫೋನ್ ಮಾಡಿದ್ರಾ
- ಈ ಘಟನೆಗೆ ಹೊಣೆ ಯಾರೆಂದು ಸರ್ಕಾರ ಹೇಳಲಿ



ಮೈಸೂರು, ಜೂ.5(ಬಿಎಲ್‌ಯು)– ಸಿಎಂ ಮೊಮ್ಮಗ, ಸಚಿವರು, ಅಧಿಕಾರಿಗಳ ಮಕ್ಕಳು, ಮೊಮ್ಮಕ್ಕಳ ಫೋಟೋಗ್ರಾಫ್ ಆಟೋಗ್ರಾಫ್‌ಗಾಗಿ ವಿಧಾನಸೌಧದ ಮುಂದೆ ಆರ್‌ಸಿಬಿ ವಿಜಯೋತ್ಸವದ ಸಂಭ್ರಮಾಚರಣೆ ಆಯೋಜಿಸಿದಂತಿತ್ತು ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ರಾಜ್ಯ ಸರ್ಕಾರದ ವಿರುದ್ಧ ಟೀಕಾಪ್ರಹಾರ ನಡೆಸಿದ್ದಾರೆ.

ಮೈಸೂರಿನಲ್ಲಿ ಬುಧವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಸಿಎಂ ಮೊಮ್ಮಗ, ಸಚಿವ ಜಮೀರ್ ಮಗ, ಶಾಸಕ ರಿಜ್ವಾನ್ ಮಗ, ಮುಖ್ಯ ಕಾರ್ಯದರ್ಶಿ ಮಗಳಿಗಾಗಿ ಈ ಕಾರ್ಯಕ್ರಮ ಆಯೋಜಿಸಿ 11 ಜನರ ಸಾವಿಗೆ ಕಾರಣರಾಗಿದ್ದಾರೆ ಎಂದು ಆರೋಪಿಸಿದರು.

ಸಿಎಂ ನಿರ್ಭಾವಕ ವ್ಯಕ್ತಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಒರಟು ವ್ಯಕ್ತಿ ಎಂದು ತಿಳಿದಿದ್ದೆ. ಆದರೆ ಸಂವೇದನೆ ಇಲ್ಲದ ನಿರ್ಭಾವಕ ವ್ಯಕ್ತಿ ಎಂಬುದು ನಿನ್ನೆ ಅರಿವಾಯಿತು ಎಂದು ಹೇಳಿದರು.

ಉತ್ತರ ಪ್ರದೇಶದಲ್ಲಿ ನಡೆದ ಕುಂಭ ಮೇಳದಲ್ಲಿ ಕಾಲ್ತುಳಿತವಾದಾಗ ಸಂತೋಷ್ ಲಾಡ್, ಪ್ರಿಯಾಂಕ್ ಖರ್ಗೆ ಅಲ್ಲಿನ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರಿಗೆ ಭದ್ರತೆಯ ಪಾಠ ಮಾಡಿದ್ದರು. ಈಗ ಇವರೆಲ್ಲಾ ಎಲ್ಲಿ ಹೋಗಿದ್ದಾರೆ ಎಂದು ಪ್ರತಾಪ್ ಸಿಂಹ ಪ್ರಶ್ನಿಸಿದರು.

ಕುಂಭಮೇಳದಲ್ಲಿ 60 ಕೋಟಿ ಜನರನ್ನು ಸಂಭಾಳಿಸಿದ್ದಾರೆ. ಆದರೆ ಕರ್ನಾಟಕದ ಕಾಂಗ್ರೆಸ್ ಸರ್ಕಾರಕ್ಕೆ 60 ಸಾವಿರ ಜನರನ್ನು ಸಂಭಾಳಿಸಲು ಸಾಧ್ಯವಾಗಲಿಲ್ಲ. ಆರ್‌ಸಿಬಿ ವಿಜಯೋತ್ಸವದ ಸಂಭ್ರಮಾಚರಣೆ ಮೂಲಕ ಪ್ರಚಾರ ಪಡೆಯುವ ದರಿದ್ರ ಕಾಂಗ್ರೆಸ್ ಸರ್ಕಾರಕ್ಕೆ ಬಂದಿದೆ. ಇವರ ಪ್ರಚಾರಕ್ಕೆ 11 ಜನ ಅಮಾಯಕರು ಬಲಿಯಾಗಿದ್ದಾರೆ ಎಂದು ದೂರಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶಲ್ಯ, ಕೂಲಿಂಗ್ ಗ್ಲಾಸ್ ಹಾಕಿ ಕೊಂಡು ಪೋಸ್ ಕೊಟ್ಟರು. ಇದು ಬಿಟ್ಟು ಯಾವ ಪೂರ್ವ ತಯಾರಿ ಮಾಡದ ಕಾರಣ ಈ ದುರಂತ ಸಂಭವಿಸಿದೆ ಎಂದು ಪ್ರತಾಪ್ ಸಿಂಹ ಆಪಾದಿಸಿದರು.

ಕೊಹ್ಲಿ ಫೋನ್ ಮಾಡಿ ಹೇಳಿದ್ರಾ: ಸಂಭ್ರಮಾಚರಣೆ ಕಾರ್ಯಕ್ರಮವನ್ನು ಇವತ್ತೆ ನಿಗದಿ ಮಾಡಿ ಎಂದು ವಿರಾಟ್ ಕೊಹ್ಲಿ ಏನಾದರೂ ಫೋನ್ ಮಾಡಿದ್ರಾ ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಮ್ಯಾಚ್ ಗೆದ್ದ ಮರು ದಿನವೇ ಈ ಕಾರ್ಯಕ್ರಮ ಮಾಡುವ ತರಾತುರಿ ಇವರಿಗೇನಿತ್ತು ಎಂದು ಪ್ರಶ್ನಿಸಿದರು. ರೋಡ್ ಶೋ ಮಾಡಿದ್ದರೆ ಲಕ್ಷಾಂತರ ಜನರು ನೋಡುತ್ತಿದ್ದರು. ಆದರೆ ಸ್ಟೇಡಿಯಂನಲ್ಲಿ ಸಂಭ್ರಮಾಚರಣೆ ಮಾಡಿದರೆ ಅವ ಘಡ ಸಂಭವಿಸುತ್ತದೆ ಎಂಬ ಸಾಮಾನ್ಯ ಜ್ಞಾನ ಈ ಸರ್ಕಾರಕ್ಕಿಲ್ಲವೆ ಎಂದು ಮರು ಪ್ರಶ್ನಿಸಿದರು.

ಆಂಧ್ರಪ್ರದೇಶದಲ್ಲಿ ನಟ ಅಲ್ಲು ಅರ್ಜುನ್ ಥಿಯೇಟರ್‌ಗೆ ಬಂದಾಗ ಕಾಲ್ತುಳಿತ ಸಂಭವಿಸಿದ ಹಿನ್ನೆಲೆಯಲ್ಲಿ ಅಲ್ಲು ಅರ್ಜುನ್ ಬಂಧಿಸಲಾಗಿತ್ತು. ಅದೇ ಮಾದರಿಯ ದುರ್ಘಟನೆ ಇಲ್ಲಿ ಸಂಭವಿಸಿದೆ. ಇಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಬಂಧಿಸಲು ಸಾಧ್ಯವೇ? ಗೃಹ ಸಚಿವ ಡಾ.ಪರಮೇಶ್ವರ್ ಅವರ ತಲೆದಂಡ ವಾಗುವುದೇ. ಈ ಘಟನೆಗೆ ಯಾರು ಹೊಣೆ ಎಂದು ಸರ್ಕಾರ ರಾಜ್ಯದ ಜನತೆಗೆ ಹೇಳಲಿ ಎಂದು ಒತ್ತಾಯಿಸಿದರು.

ಪ್ರಕರಣ ಮುಚ್ಚಿ ಹಾಕಲು ತನಿಖೆಗೆ ಆದೇಶಿಸಿದ್ದಾರೆ. ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಇವರು ಮಾಡಿದ ತಪ್ಪಿಗೆ ಕರ್ನಾಟಕ ಪೊಲೀಸ್ ಇಲಾಖೆಗೆ ಕಳಂಕ ತಂದಿದ್ದಾರೆ. ಈ ಘಟನೆಗೆ ರಾಜ್ಯ ಸರ್ಕಾರವೇ ಹೊಣೆ ಹೊರತು ಬೇರೆ ಯಾರು ಅಲ್ಲ ಎಂದು ವಾಗ್ದಾಳಿ ನಡೆಸಿದರು.

ಆರ್‌ಸಿಬಿ ಸಂಭ್ರಮಾಚರಣೆ ವೇಳೆ ನಡೆದ ದುರ್ಘಟನೆಗೆ ಗುಪ್ತಚರ ವೈಫಲ್ಯ ಕಾರಣ

ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸ್ಪಷ್ಟನೆ



ಮೈಸೂರು, ಜೂ.5(ಬಿಎಲ್‌ಯು)– ಆರ್‌ಸಿಬಿ ವಿಜಯೋತ್ಸವ ಸಂಭ್ರಮಾಚರಣೆ ವೇಳೆ ನಡೆದ ಘಟನೆಗೆ ಇಂಟಲಿಜೆನ್ಸ್ ಫೆಲ್ಯೂರ್ (ಗುಪ್ತಚರ ಇಲಾಖೆ) ಕಾರಣ ಎಂದು ಒಪ್ಪಿಕೊಳ್ಳುತ್ತೇನೆ ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಬಂದೋಬಸ್ತ್ ಮಾಡುವ ಜವಾಬ್ದಾರಿಯನ್ನು ಪೊಲೀಸ್ ಇಲಾಖೆಗೆ ನೀಡಲಾಗಿತ್ತು. ಆದರೆ ನಿರೀಕ್ಷೆಗೂ ಹೆಚ್ಚು ಜನರು ಬಂದಿದ್ದ ಕಾರಣ ಈ ಘಟನೆ ಸಂಭವಿಸಿದೆ. ಇದರಿಂದ ಅಭಿಮಾನಿಗಳನ್ನು ನಿಯಂತ್ರಣ ಮಾಡಲು ಆಗಲಿಲ್ಲ ಎಂದರು.

ಆಗಿರುವ ಪ್ರಮಾದವನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಹಿನ್ನೆಲೆಯಲ್ಲಿ ಸರ್ಕಾರ ಮ್ಯಾಜಿಸ್ಟೀರಿಯಲ್ ತನಿಖೆಗೆ ಆದೇಶಿಸಿದೆ. ಆದರೆ ಈ ಘಟನೆಗೆ ಸಿಎಂ, ಡಿಸಿಎಂ ಕಾರಣರಲ್ಲ ಎಂದು ಸ್ಪಷ್ಟನೆ ನೀಡಿದರು.

ಆರ್‌ಸಿಬಿ ಆಯೋಜಕರು ಸಂಭ್ರಮಾಚರಣೆ ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಸರ್ಕಾರ ಸಮ್ಮತಿಸಿತು. ಆದರೆ ಏಕ ಕಾಲಕ್ಕೆ ನಿರೀಕ್ಷೆಗೂ ಮೀರಿ ಜನರು ಬಂದಿದ್ದರು. ಇದರಿಂದ ಈ ಘಟನೆ ಸಂಭವಿಸಿತು ಎಂದರು.

ಈ ಘಟನೆಗೆ ರಾಜ್ಯ ಸರ್ಕಾರ ನೇರ ಹೊಣೆ ಎಂಬ ಬಿಜೆಪಿಯವರ ವಾದ ಸರಿಯಲ್ಲ. ಬಿಜೆಪಿ ನಾಯಕರು ಸಾವಿನಲ್ಲೂ ರಾಜಕಾರಣ ಮಾಡುತ್ತಿದ್ದಾರೆ. ವಿರೋಧ ಪಕ್ಷವಾಗಿ ನಮ್ಮನ್ನು ತಿದ್ದುವ ಬದಲು ರಾಜಕೀಯ ಮಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ರಾಜಕಾರಣಿಗಳ ಕುಟುಂಬಕ್ಕಾಗಿ ವಿಧಾನಸೌಧದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು ಎಂಬ ಬಿಜೆಪಿ ಆರೋಪ ನಿರಾಧಾರ ಎಂದು ಡಾ.ಯತೀಂದ್ರ ತಿಳಿಸಿದರು.

ಇದು ಹಣ ಲೂಟಿ ಮಾಡುವ, ಹೆಣ ಬೀಳಿಸುವ ಸರ್ಕಾರ

ಬಿಜೆಪಿ ವಕ್ತಾರ ಮೋಹನ್ ಟೀಕೆ



ಮೈಸೂರು, ಜೂ.5(ಬಿಎಲ್‌ಯು)– ರಾಜ್ಯ ಕಾಂಗ್ರೆಸ್ ಸರ್ಕಾರ ಹಣ ಲೂಟಿ ಮಾಡುವ ಹೆಣ ಬೀಳಿಸುವ ಸರ್ಕಾರ ಎಂದು ಮೈಸೂರು ನಗರ ಬಿಜೆಪಿ ವಕ್ತಾರ ಎಂ.ಮೋಹನ್ ಟೀಕಿಸಿದರು.


ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್‌ಸಿಬಿ ಮ್ಯಾಚ್ ಗೆದ್ದ ದಿನ ನಡೆದ ಸಂಭ್ರಮಾಚರಣೆ ವೇಳೆ ಬಂದೋಬಸ್ತ್‌ಗೆ ನಿಯೋಜನೆಗೊಂಡಿದ್ದ ಪೊಲೀಸರು ಸುಸ್ತಾಗಿದ್ದರು. ಮಾರನೆ ದಿನ ಮತ್ತೆ ಕರ್ತವ್ಯ ನಿರ್ವಹಿಸಲು ಪೊಲೀಸರಿಗೆ ಸಾಧ್ಯವಾಗಲಿಲ್ಲ. ಇದರಿಂದ ಈ ಘಟನೆ ನಡೆಯಿತು ಎಂದು ಆರೋಪಿಸಿದರು.


ಲಕ್ಷಾಂತರ ಜನರು ಬರುತ್ತಾರೆ ಎಂಬ ನಿರೀಕ್ಷೆ ಇದ್ದರೂ ಸರ್ಕಾರ ಹೆಚ್ಚಿನ ಪೊಲೀಸರನ್ನು ಏಕೆ ನಿಯೋಜನೆ ಮಾಡಲಿಲ್ಲ ಎಂದು ಪ್ರಶ್ನಿಸಿದ ಮೋಹನ್, ಈ ಘಟನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಾರಣರಾಗಿದ್ದು, ಇವರು ಈ ಕೂಡಲೇ ರಾಜಿನಾಮೆ ನೀಡಬೇಕೆಂದು ಒತ್ತಾಯಿಸಿದರು.

ಕ್ರಿಕೆಟ್ ಪಂದ್ಯಾವಳಿಯಲ್ಲಿ ಆರ್‌ಸಿಬಿ ತಂಡ ಶ್ರಮವಹಿಸಿ ಗೆಲುವು ಸಾಧಿಸಿದರೆ ಅದರ ಲಾಭವನ್ನು ರಾಜ್ಯ ಸರ್ಕಾರ ಪಡೆಯಲು ಹೋಗಿ ಈ ದುರಂತ ಸಂಭವಿಸಿದೆ ಎಂದು ಮೋಹನ್ ಆಪಾದಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಜಮ್ಮು ಮತ್ತು ಕಾಶ್ಮೀರದಲ್ಲಿ
ಪ್ರಗತಿಯ ಹೊಸ ಶಕೆ











ಸುಮಾರು ರೂ. 44,000 ಕೋಟಿ ಮೌಲ್ಯದ ರೈಲ್ವೆ ಯೋಜನೆಗಳ ಉಡುಗೊರೆ

ಉದ್ಘಾಟನೆ

ಚೆನಾಬ್ ಬ್ರಿಡ್ಜ್

(ವಿಶ್ವದ ಅತ್ಯಂತ ಎತ್ತರದ ರೈಲ್ವೆ ಆರ್ಚ್ ಬ್ರಿಡ್ಜ್)

- 359 ಮೀಟರ್ ಎತ್ತರ, 1315 ಮೀಟರ್ ಉದ್ದ ಮತ್ತು 467 ಮೀಟರ್ ಆರ್ಚ್ ವ್ಯಾಪ್ತಿ.
- ಈ ಸೇತುವೆ ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಜಿಲ್ಲೆಯ ಕೌರಿ ಮತ್ತು ಬಕ್ಕಲ್ ಪ್ರದೇಶಗಳ ಸಂಪರ್ಕಿಸುತ್ತದೆ.

ಅಂಜಿ ಬ್ರಿಡ್ಜ್

(ಭಾರತದ ಮೊದಲ ಕೇಬಲ್ ಸ್ಟೇಯ್ಡ್ ರೈಲ್ವೆ ಬ್ರಿಡ್ಜ್)

- 725 ಮೀಟರ್ ಉದ್ದ, 290 ಮೀಟರ್ ಪ್ರಮುಖ ವ್ಯಾಪ್ತಿ
- ಈ ಬ್ರಿಡ್ಜ್ ಜಮ್ಮು ಮತ್ತು ಕಾಶ್ಮೀರದ ಕಟ್ರ ಮತ್ತು ರಿಯಾಸಿ ಜಿಲ್ಲೆಗಳ ಸಂಪರ್ಕಿಸುತ್ತದೆ.
- 96 ಕೇಬಲ್‌ಗಳ ಒಳಗೊಂಡ ಏಕೈಕ ದೈತ್ಯ ಪೈಲಾನ್, 193 ಮೀಟರ್ ಎತ್ತರ.

ದೇಶಕ್ಕೆ ಸಮರ್ಪಣೆ

ಉದಾಂಪುರ್ - ಶ್ರೀನಗರ - ಬಾರಮುಲ್ಲಾ

ರೈಲ್ ಲಿಂಕ್ ಪ್ರಾಜೆಕ್ಟ್ (ಯುಎಸ್‌ಬಿಆರ್‌ಎಲ್)

- ಅತ್ಯಾಧುನಿಕ ಎಲ್ಲಾ ಹವಾಮಾನದಲ್ಲೂ ಜಮ್ಮು ಮತ್ತು ಕಾಶ್ಮೀರದೊಂದಿಗೆ ಭಾರತದ ಉಳಿದ ಭಾಗಗಳಿಗೆ ಪ್ರಮುಖ ಸಂಪರ್ಕ ಜಾಲ.
- ಟಿ-50 ಸೇರಿದಂತೆ 36 ಟನಲ್‌ನೊಂದಿಗೆ ಒಟ್ಟು 272 ಕಿಲೋಮೀಟರ್ ಉದ್ದ (ಭಾರತದಲ್ಲಿ ಅತ್ಯಂತ ಉದ್ದದ ಟನಲ್ ಕಾರ್ಯಾಚರಣೆ) ಮತ್ತು 943 ಬ್ರಿಡ್ಜ್‌ಗಳು

ಉದ್ಘಾಟನೆ

2 ವಂದೇ ಭಾರತ್ ರೈಲುಗಳು

ಶ್ರೀ ಮಾತಾ ವೈಷ್ಣೋದೇವಿ ಕಟ್ರ - ಶ್ರೀನಗರ ಮತ್ತು ಶ್ರೀನಗರ - ಶ್ರೀ ಮಾತಾ ವೈಷ್ಣೋದೇವಿ ಕಟ್ರ

- ಶ್ರೀನಗರಕ್ಕೆ ಪ್ರಥಮ ಸೆಮಿ-ಹೈ-ವೇಗದ ರೈಲು
- ಪ್ರವಾಸೋದ್ಯಮ ಮತ್ತು ಪ್ರಾದೇಶಿಕ ಸಂಪರ್ಕ ಕ್ರಾಂತಿ.
- ಕಟ್ರದಿಂದ ಶ್ರೀನಗರಕ್ಕೆ ಸುಮಾರು 3 ಗಂಟೆ ಪ್ರಯಾಣ ಸಾಧ್ಯತೆ

ನರೇಂದ್ರ ಮೋದಿ

ಪ್ರಧಾನ ಮಂತ್ರಿ

ಅವರಿಂದ

ಘನ ಉಪಸ್ಥಿತಿ

ನಿತಿನ್ ಜೈರಾಂ ಗಡ್ಕರಿ
ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ

ಅಶ್ವಿನಿ ವೈಷ್ಣವ್
ಕೇಂದ್ರ ರೈಲ್ವೆ, ವಾರ್ತಾ ಮತ್ತು ಪ್ರಸಾರ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ

ಡಾ. ಜಿತೇಂದ್ರ ಸಿಂಗ್
ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭೂ ವಿಜ್ಞಾನಗಳ (ಸ್ವತಂತ್ರ) ಸಚಿವ ಮತ್ತು ಪ್ರಧಾನ ಮಂತ್ರಿಗಳ ರಾಜ್ಯ ಖಾತೆ ಸಚಿವ, ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ, ಪಿಂಚಣಿ, ಆಟೋಮಿಕ್ ಎನರ್ಜಿ ಇಲಾಖೆ ಮತ್ತು ಬಾಹ್ಯಕಾಶ ಇಲಾಖೆ.

ವಿ. ಸೋಮಣ್ಣ
ಕೇಂದ್ರದ ರೈಲ್ವೆ ಹಾಗೂ ಜಲ್‌ಶಕ್ತಿ ರಾಜ್ಯ ಸಚಿವ

ರವನೀತ್ ಸಿಂಗ್
ಕೇಂದ್ರದ ರೈಲ್ವೆ ಮತ್ತು ಆಹಾರ ಸಂಸ್ಕರಣ ಉದ್ಯಮಗಳ ರಾಜ್ಯ ಸಚಿವ

ಮನೋಜ್ ಸಿನ್ಹಾ
ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ಲೆಫ್ಟಿನೆಂಟ್ ಗವರ್ನರ್ ಮತ್ತು ಅಧ್ಯಕ್ಷರು ಶ್ರೀ ಮಾತಾ ವೈಷ್ಣೋದೇವಿ ಮಂದಿರ ಮಂಡಳಿ, ಜಮ್ಮು ಮತ್ತು ಕಾಶ್ಮೀರ

ಓಮರ್ ಅಬ್ದುಲ್ಲಾ
ಮುಖ್ಯಮಂತ್ರಿ, ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶ

ಸುರೀಂದರ್ ಕುಮಾರ್ ಚೌಧರಿ
ಉಪ ಮುಖ್ಯ ಮಂತ್ರಿ, ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶ

ಜುಗಲ್ ಕಿಶೋರ್
ಸಂಸದ (ಲೋಕಸಭಾ), ಜಮ್ಮು

ಆಗ ಸೈಯದ್ ರುಹುಲ್ಲಾ ಮೆಥಿ
ಸಂಸದ (ಲೋಕಸಭಾ), ಶ್ರೀನಗರ

ಗುಲಾಮ್ ಅಲಿ
ಸಂಸದ, ರಾಜ್ಯಸಭಾ

ಶುಕ್ರವಾರ 6ನೇ ಜೂನ್, 2025 | ಬೆಳಿಗ್ಗೆ 11-00 | ಶ್ರೀ ಮಾತಾ ವೈಷ್ಣೋದೇವಿ ಮಂದಿರ ಮಂಡಳಿ ಕ್ರೀಡಾ ಸಮುಚ್ಚಯ ಕಟ್ರ (ಸ್ಟೇಡಿಯಂ)

ಭಾರತೀಯ ರೈಲ್ವೆ

DD NEWS ಡಿಡಿ ನ್ಯೂಸ್‌ನಲ್ಲಿ ಕಾರ್ಯಕ್ರಮ ವೀಕ್ಷಿಸಿ | www.indianrailways.gov.in | ನಮ್ಮನ್ನು ಹಿಂಬಾಲಿಸಿ /RailMinIndia

ಪ್ಲಾಸ್ಟಿಕ್ ಮಾಲಿನ್ಯ ಅಂತ್ಯಗೊಳಿಸೋಣ



ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಪ್ರೌಢಶಾಲೆಯ ಪಂಚತಾರಣ ಸ್ಕೌಟ್ ಟ್ರೂಪ್ ವತಿಯಿಂದ ವಿಶ್ವ ಪರಿಸರ ದಿನ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸ್ಕೌಟ್‌ಗಳು ಸರಸ್ವತಿಪುರಂ ಹಾಗೂ ಕುಕ್ಕರಹಳ್ಳಿ ಕೆರೆಯ ಭಾಗಗಳಲ್ಲಿ ಸಂಚರಿಸಿ ಪ್ಲಾಸ್ಟಿಕ್ ಮಾಲಿನ್ಯ ಅಂತ್ಯಗೊಳಿಸೋಣ ಘೋಷಣೆ ಕೂಗುತ್ತಾ ನಾಗರಿಕರಲ್ಲಿ ಪ್ಲಾಸ್ಟಿಕ್‌ನಿಂದ ಪರಿಸರದ ಮೇಲಾಗುತ್ತಿರುವ ದುಷ್ಪರಿಣಾಮಗಳು ಹಾಗೂ ನಾವು ಅನುಸರಿಸಬೇಕಾದ ಪ್ಲಾಸ್ಟಿಕ್ ಮುಕ್ತ ಕ್ರಮಗಳ ಬಗ್ಗೆ ಅರಿವು ಮೂಡಿಸಿದರು. ಶಾಲೆ ಮುಖ್ಯೋಪಾಧ್ಯಾಯಿನಿ ಡಿ.ಆರ್.ಕವಿತಾ ಗಿಡ ನೆಡುವ ಮೂಲಕ ಪರಿಸರ ಸಂರಕ್ಷಿಸುವಂತೆ ಕರೆ ನೀಡಿದರು. ಸ್ಕೌಟ್, ಎನ್.ಸಿ.ಸಿ., ಶಾಲಾ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.



ಮೈಸೂರು ತಾಲೂಕು ಡಿಎಂಜಿ ಹಳ್ಳಿ ಗ್ರಾಮ ಪಂಚಾಯ್ತಿ ವತಿಯಿಂದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು. ಈ ಸಂದರ್ಭದಲ್ಲಿ ಪಿಡಿಓ ರುಕ್ಮಾಂಗದ, ಅಧ್ಯಕ್ಷೆ ಶ್ರೀಮತಿ ವನಿತಾ, ಮುಖ್ಯ ಶಿಕ್ಷಕಿ ಉಮಾ, ಸದ್ಯಸರಾದ ಟಿ.ಕೃಷ್ಣಪ್ಪ, ಶಂಕರ್, ಶಿವಕುಮಾರ್, ಅರಣ್ಯ ಅಧಿಕಾರಿ ಆನಂದಗೌಡ ಇತರರು ಉಪಸ್ಥಿತರಿದ್ದರು.

ಪ್ಲಾಸ್ಟಿಕ್ ಬ್ಯಾಗ್ ತ್ಯಜಿಸಿ ಬಟ್ಟೆ ಬ್ಯಾಗ್ ಬಳಸಿ ಜಾಗೃತಿ ಅಭಿಯಾನ ಇಂದು

ಮೈಸೂರು: ಕೆಎಂಪಿಕೆ ಟ್ರಸ್ಟ್ ಹಾಗೂ ಜೀವಧಾರ ರಕ್ತನಿಧಿ ಕೇಂದ್ರದ ವತಿಯಿಂದ ಪರಿಸರ ದಿನಾಚರಣೆ ಅಂಗವಾಗಿ ಪ್ಲಾಸ್ಟಿಕ್ ಬ್ಯಾಗ್ ತ್ಯಜಿಸಿ, ಬಟ್ಟೆ ಬ್ಯಾಗ್ ಬಳಸಿ ಅಭಿಯಾನದಡಿ ಗ್ರಾಹಕರಿಗೆ ಬಟ್ಟೆ ಬ್ಯಾಗ್ ವಿತರಿಸುವ ಕಾರ್ಯಕ್ರಮವನ್ನು ದೊಡ್ಡ ಮಾರ್ಕೆಟ್ ಮುಂಭಾಗ ಜೂ.6ರಂದು ಬೆಳಗ್ಗೆ 8.30ಕ್ಕೆ ಹಮ್ಮಿಕೊಳ್ಳಲಾಗಿದೆ. ಜಾಗೃತಿ ಅಭಿಯಾನದಲ್ಲಿ ಶಾಸಕ ಹರೀಶ್‌ಗೌಡ, ಮೈಸೂರು ಪಾಲಿಕೆ ಆರೋಗ್ಯ ಅಧಿಕಾರಿ ಡಾ.ವೆಂಕಟೇಶ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ ಗೌಡ, ಮಾಜಿ ಕಾರ್ಪೊರೇಟರ್ ಪ್ರಮೀಳಾ ಭರತ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳೀಯ ಆರೋಗ್ಯಾಧಿಕಾರಿಗಳು ಭಾಗವಹಿಸಲಿದ್ದಾರೆ.

ಸಂತ ಫಿಲೋಮಿನಾ ಕಾಲೇಜಲ್ಲಿ ಪರಿಸರ ದಿನಾಚರಣೆ



ಸಂತ ಫಿಲೋಮಿನಾ ಕಾಲೇಜಿನಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಮೈಸೂರು, ಜೂ. 5– ಮೈಸೂರಿನ ಸಂತ ಫಿಲೋಮಿನಾ ಕಾಲೇಜಿನಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಕಾರ್ಯಕ್ರಮವನ್ನು ರೆಕ್ಟರ್ ರೆವ. ಡಾ. ಲೋರ್ಡು ಪ್ರಸಾದ್ ಜೋಸಫ್ ಸಸಿಗಳಿಗೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ಪ್ರಾಂಶುಪಾಲರಾದ ಡಾ. ರವಿ ಜೆ.ಡಿ. ಸಾಲ್ಡಾನ್ಹಾ ಮಾತನಾಡಿ, ಪರಿಸರ ಸಂರಕ್ಷಣೆಯ ಮಹತ್ವವನ್ನು ಅರ್ಥ ಮಾಡಿಕೊಳ್ಳಿ ಮತ್ತು ಪರಿಸರವನ್ನು ಕಾಪಾಡಲು ಪ್ರತಿಯೊಬ್ಬರೂ ಶ್ರಮಿಸಬೇಕು ಎಂದು ಕರೆ ನೀಡಿದರು.

ಇದರ ಅಂಗವಾಗಿ 300 ಹಣ್ಣು ನೀಡುವ ಸಸಿಗಳನ್ನು ಕಾಲೇಜು ಆವರಣದಲ್ಲಿ ನೆಡಲಾಯಿತು. ಕಾರ್ಯಕ್ರಮದಲ್ಲಿ ರೆವ. ಫಾ. ಜ್ಞಾನಪ್ರಕಾಶಂ (ನಿರ್ವಾಹಕ), ರೆವ. ಫಾ. ಡೇವಿಡ್ ಸಗಾಯ ರಾಜ್ ಎಸ್. (ರೆಕ್ಟರ್ ಸಹಾಯಕ), ನಾಗರಾಜ್ ಅರಸ್ (ಉಪಪ್ರಾಂಶುಪಾಲರು – ಅಕಾಡೆಮಿಕ್), ಡಾ. ನೂರ ಮುಬಾಶೀರ್ ಸಿ.ಎ. (ಸಹ ಸಂಯೋಜಕರು), ಎ.ಥಾಮಸ್ ಗುಣಸೀಲನ್ (ಸಹ–ಸಂಯೋಜಕರು), ಡಾ. ದೀಪಾ (ಸಹ–ಸಂಯೋಜಕರು), ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಮಾತೃಮಂಡಳಿ ವಿದ್ಯಾಸಂಸ್ಥೆಯಲ್ಲಿ ಏರ್ಪಡಿಸಿದ್ದ ಪರಿಸರ ದಿನವನ್ನು ಪರಿಸರವಾದಿ ವಸಂತಕುಮಾರ್ ಮೈಸೂರುಮಠ್ ಉದ್ಘಾಟಿಸಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಂಸ್ಥೆಯ ಅಧ್ಯಕ್ಷೆ ವಿಜಯಲಕ್ಷ್ಮಿ ಅರಸ್, ಸಹಾಯಕ ಕಾರ್ಯದರ್ಶಿ ಹೇಮಾ ಬಾಲಚಂದ್ರನ್, ಪ್ರಾಂಶುಪಾಲೆ ಗಿರಿಜಮ್ಮ, ಮುಖ್ಯ ಶಿಕ್ಷಕಿಯರಾದ ಅನಿತಾ, ಸುಮಿತ್ರಾ, ಶಿಕ್ಷಕಿಯರಾದ ಶೋಭಾ, ರಮ್ಯಾ ಶ್ವೇತಾ ಚಿತ್ರದಲ್ಲಿದ್ದಾರೆ.



ಮೈಸೂರು ನಗರ ಶ್ರೀರಾಂಪುರದ ನವಚೇತನ ಬಸವೇಶ್ವರ ಟ್ರಸ್ಟ್‌ನ ವಿಶೇಷ ಮಕ್ಕಳ ಶಾಲಾ ಆವರಣದಲ್ಲಿ ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು. ಈ ವೇಳೆ ಸಮಾಜ ಸೇವಕರಾದ ಎಸ್.ಶ್ರೀಕಾಂತ್, ನವಚೇತನ ಬಸವೇಶ್ವರ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಮರೀಗೌಡ, ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ವಿಶ್ವ ಪರಿಸರ ದಿನಾಚರಣೆ

ಅಭಿವೃದ್ಧಿ ಜೊತೆಗೆ ಭಾರತ ಪರಿಸರ ಸಂರಕ್ಷಣೆಯಲ್ಲಿ ಸುಸ್ಥಿರತೆ ಸಾಧಿಸಬೇಕು; ಸಂಸದ ಯದುವೀರ್ ಒಡೆಯರ್ ಅಭಿಮತ

ಮೈಸೂರು, ಜೂ.5(ಬಿಎಲ್‌ಯು)– ಭಾರತ ಅಭಿವೃದ್ಧಿಯ ಜೊತೆಗೆ ಪರಿಸರ ಸಂರಕ್ಷಣೆಯಲ್ಲಿ ಸುಸ್ಥಿರತೆ ಸಾಧಿಸಬೇಕಿದೆ ಎಂದು ಮೈಸೂರು ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಲಹೆ ನೀಡಿದರು.

ಮೈಸೂರು ಸಿಎಫ್‌ಟಿಆರ್‌ಐ (ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾ ಸಂಸ್ಥೆ)ನ ಐಎಫ್‌ಟಿಟಿಸಿ ಸಭಾಂಗಣದಲ್ಲಿ ಇಂದು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಪರಿಸರ ಜಾಗೃತಿ ವಸ್ತುಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಅಭಿವೃದ್ಧಿಯ ಜೊತೆ ಜೊತೆಯಾಗಿ ಪರಿಸರದಲ್ಲಿ ಸುಸ್ಥಿರತೆ ಕಾಣುವುದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕನಸು. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಹಲವು ಯೋಜನೆ ರೂಪಿಸಿದೆ ಎಂದರು.

ಸ್ವಚ್ಛ ಭಾರತ ಸರ್ವೇಕ್ಷಣೆಯಲ್ಲಿ ಮೈಸೂರು ಅಗ್ರ ಸ್ಥಾನ ಪಡೆಯುವ ಬಗ್ಗೆ ಪ್ರತಿಕ್ರಿಯೆ ನೀಡಿದ ಯದುವೀರ್ ಅವರು, ಸ್ವಚ್ಛ ಸರ್ವೇಕ್ಷಣೆಯಲ್ಲಿ ಮೊದಲ ರ‍್ಯಾಂಕಿಂಗ್ ಪಡೆಯಲು ಹಲವು ಮಾನದಂಡವಿದೆ. ಕಸ ಸಂಗ್ರಹಣೆ, ತ್ಯಾಜ್ಯ ವಿಲೇವಾರಿ ಸೇರಿದಂತೆ ಪರಿಸರ ಸಂರಕ್ಷಣೆ ಹಲವು ಮಾನದಂಡ ಅನುಸರಿಸಬೇಕು. ಈ ಎಲ್ಲಾ ಮಾನದಂಡ ಪಾಲಿಸುತ್ತಿರುವ ಮೈಸೂರು ಸ್ವಚ್ಛ ಸರ್ವೇಕ್ಷಣೆಯಲ್ಲಿ ಅಗ್ರ ಸ್ಥಾನ ಪಡೆಯುವ ವಿಶ್ವಾಸವಿದೆ ಎಂದು ಹೇಳಿದರು.

ಪರಿಸರ ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಜನರಲ್ಲಿ ಜಾಗೃತಿ ಮೂಡಿಸಲು ಇಲ್ಲಿ ವಸ್ತುಪ್ರದರ್ಶನ ಆಯೋಜಿಸಲಾಗಿದೆ. ಪರಿಸರ ಸಂರಕ್ಷಣೆ ಮಾಡದಿದ್ದರೆ ಯಾವ ರೀತಿಯ ದುಷ್ಪರಿಣಾಮ ಎದುರಿಸಬೇಕಾಗುತ್ತದೆ ಎಂಬ ಎಚ್ಚರಿಕೆಯ ಸಂದೇಶವನ್ನು ಇಲ್ಲಿ ನೀಡಲಾಗಿದೆ. ಇಂತಹ ವಸ್ತುಪ್ರದರ್ಶನ ವೀಕ್ಷಣೆ ಮೂಲಕ ಜನರು ಪರಿಸರ ಸಂರಕ್ಷಣೆಯಲ್ಲಿ ಕೈ ಜೋಡಿಸಬೇಕು ಎಂದು ಯದುವೀರ್ ಸಲಹೆ ನೀಡಿದರು.

ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣಸಿಂಗ್, ಡಾ.ಉಮೇಶ್ ಹೆಬ್ಬಾರ್, ಡಾ.ಸಿ.ಎಸ್.ವಿವೇಕ್‌ಬಾಬು, ಡಾ.ವಿಕಾಸ್ ಸಿಂಗ್ ಚೌಹಾಣ್ ಈ ವೇಳೆ ಹಾಜರಿದ್ದರು.



ಸಿಎಫ್‌ಟಿಆರ್‌ಐನಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಪರಿಸರ ವಸ್ತುಪ್ರದರ್ಶನ ಉದ್ಘಾಟಿಸಿದ ಸಂಸದ ಯದುವೀರ್ ಅವರಿಗೆ ಪುನರ್ ಬಳಕೆ ಮಾಡಬಹುದಾದ ತ್ಯಾಜ್ಯದಿಂದ ತಯಾರಿಸಿರುವ ವಸ್ತುಗಳ ಬಗ್ಗೆ ವಿವರಣೆ ನೀಡಲಾಯಿತು.

ಕಸದಿಂದ ರಸ; ಅತ್ಯಾಕರ್ಷಕ ವಸ್ತುಗಳ ಪ್ರದರ್ಶನ

ಪ್ಲಾಸ್ಟಿಕ್, ಪೇಪರ್, ಕಬ್ಬಿಣ, ಕಾಗದ ಸೇರಿದಂತೆ ಹಲವು ಪುನರ್ ಬಳಕೆ ಮಾಡಬಹುದಾದ ತ್ಯಾಜ್ಯದಿಂದ ತಯಾರಿಸಿರುವ ವಸ್ತುಗಳನ್ನು ಪ್ರದರ್ಶನದಲ್ಲಿ ಇಡಲಾಗಿತ್ತು. ಈ ಮೂಲಕ ಕಸದಿಂದ ರಸ ಮಾಡುವ ವಿಧಾನದ ಬಗ್ಗೆ ಮಾಹಿತಿ ನೀಡಲಾಗಿತ್ತು.

ವಸ್ತುಪ್ರದರ್ಶನ ಉದ್ಘಾಟನೆ ಮಾಡಿದ ಯದುವೀರ್ ಅವರಿಗೆ ಪುಣೆ ಮೂಲದ ಎಕೋ ಫ್ಯಾಕ್ಟು ಫೌಂಡೇಷನ್‌ನ ಆನಂದ್ ಚೋರ್ಡಿಯಾ ಅವರು ಪುನರ್ ಬಳಕೆ ಮಾಡಬಹುದಾದ ತ್ಯಾಜ್ಯದಿಂದ ತಯಾರಿಸಿರುವ ವಸ್ತುಗಳ ಬಗ್ಗೆ ವಿವರಿಸಿದರು. ಜೊತೆಗೆ ಪರಿಸರ ಸಂರಕ್ಷಣೆ ಮಾಡದಿದ್ದರೆ ಜಾಗತಿಕ ತಾಪಮಾನದಿಂದ ಹವಾಮಾನ ಬದಲಾವಣೆಯಾಗಿ ಏನೆಲ್ಲಾ ದುಷ್ಪರಿಣಾಮ ಎದುರಿಸಬೇಕಾಗುತ್ತದೆ ಎಂದರು.

ಪ್ಲಾಸ್ಟಿಕ್ ತ್ಯಾಜ್ಯದಿಂದ ತಯಾರಿಸಿರುವ ಟೈಲ್ಸ್, ಮೇಜು, ಕುರ್ಚಿ ಸೇರಿದಂತೆ ಹಲವು ಗೃಹೋಪಯೋಗಿ ವಸ್ತುಗಳು, ಹಸಿ ತ್ಯಾಜ್ಯದಿಂದ ತಯಾರಿಸಿರುವ ಗೊಬ್ಬರ, ತೆಂಗಿನಕಾಯಿ ಕರಟದಿಂದ ತಯಾರಿಸಿರುವ ಅಲಂಕಾರಿಕ ವಸ್ತುಗಳು, ಕಬ್ಬಿಣದ ತ್ಯಾಜ್ಯದಿಂದ ತಯಾರಿಸಿರುವ ವಸ್ತುಗಳು, ಬಟ್ಟೆ ತ್ಯಾಜ್ಯದಿಂದ ತಯಾರಿಸಿರುವ ಟೀ–ಶರ್ಟ್‌ಗಳ ಬಗ್ಗೆ ಆನಂದ್ ಚೋರ್ಡಿಯಾ ವಿವರಣೆ ನೀಡಿದರು. ಮೈಸೂರು ಸೇರಿದಂತೆ ಭಾರತದ 10 ಹಸಿರು ನಗರಗಳ ಕುರಿತ ಮಾಹಿತಿ, ಸ್ವಚ್ಛ ಸರ್ವೇಕ್ಷಣೆಯಲ್ಲಿ ಅಗ್ರ ಸ್ಥಾನ ಪಡೆದಿದ್ದ ಮೈಸೂರು ಸ್ವಚ್ಛತೆಯನ್ನು ಯದುವೀರ್ ಅವರಿಗೆ ವಿವರಿಸಿ ಹೇಳಲಾಯಿತು. ಇಂದಿನಿಂದ 3 ದಿನಗಳ ಕಾಲ ವಸ್ತುಪ್ರದರ್ಶನ ವೀಕ್ಷಣೆಗೆ ಅವಕಾಶ ನೀಡಲಾಗಿದೆ. ಶಾಲಾ ಕಾಲೇಜು ವಿದ್ಯಾರ್ಥಿಗಳು ಬೆಳಿಗ್ಗೆ 10ರಿಂದ 5 ಗಂಟೆ ತನಕ ಪ್ರದರ್ಶನ ವೀಕ್ಷಣೆ ಮಾಡಬಹುದು.

ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ



ಮೈಸೂರು: ಮೈಸೂರಿನ ಜೆ.ಪಿ.ನಗರ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು.

ವಿದ್ಯಾರ್ಥಿಗಳು ಜೆ.ಪಿ.ನಗರದ ಪ್ರಮುಖ ರಸ್ತೆಗಳಲ್ಲಿ ಪರಿಸರ ಜಾಗೃತಿಯ ಘೋಷಣೆಗಳ ಕೂಗಿ, ರಸ್ತೆಗಳಲ್ಲಿ ಪರಿಸರದ ಮಹತ್ವ ಕುರಿತ ಬೀದಿ ನಾಟಕ ಪ್ರದರ್ಶಿಸಿ, ಪರಿಸರದ ಬಗ್ಗೆ ಅರಿವು ಮೂಡಿಸಲಾಯಿತು. ಇದೇ ವೇಳೆ ಒಂದರಿಂದ 10ನೇ ತರಗತಿವರೆಗಿನ ಹಲವಾರು ಮಕ್ಕಳು ಪರಿಸರ ಕುರಿತಂತೆ ರಚಿಸಿದ ಹಲವು ಚಿತ್ರ ಕಲಾಕೃತಿಗಳನ್ನು ಪ್ರದರ್ಶಿಸಲಾಯಿತು. ಪರಿಸರ ಜಾಗೃತಿ ಜಾಥಾ ಮತ್ತು ಸಂರಕ್ಷಣೆ ಬಗ್ಗೆ ಅರಿವು ಮೂಡಿಸುವ ನಾಟಕ ಪ್ರದರ್ಶನದಲ್ಲಿ ಶಾಲೆಯ ಪ್ರಾಂಶುಪಾಲರಾದ ಅರ್ಚನಾ, ಉಪಪ್ರಾಂಶುಪಾಲರಾದ ಸುನಿತಾ ಮತ್ತು ಶಿಕ್ಷಕ ವೃಂದದವರು ಪಾಲ್ಗೊಂಡಿದ್ದರು.



ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮೈಸೂರಿನ ವಿಜಯನಗರದ ಉದ್ಯಾನವನದಲ್ಲಿ ಕರ್ನಾಟಕ ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಮಂಜುನಾಥ್‌ಗೌಡ ನೇತೃತ್ವದಲ್ಲಿ ಗಿಡ ನೆಡಲಾಯಿತು. ಈ ವೇಳೆ ಚಾಮರಾಜ ಕ್ಷೇತ್ರದ ಅಧ್ಯಕ್ಷ ನಿಶಾಂತ ಪಟೇಲ್ ಡಿ.ಎಂ., ಪ್ರಧಾನ ಕಾರ್ಯದರ್ಶಿ ವಿಷ್ಣುಪ್ರಿಯ, ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ವಿನಯ್, ಪಡುವಾರಳ್ಳಿ ಯುವ ಮುಖಂಡ ನಿತಿನ್ ಪುಟ್ಟಸ್ವಾಮಿ, ವಿಜಯನಗರ ವಾರ್ಡ್ ಅಧ್ಯಕ್ಷ ದಿಲೀಪ್, ಮುಖಂಡರಾದ ವಿನೋದ್, ಪ್ರವೀಣ್, ತರುಣ್, ನಿತಿನ್, ದರ್ಶನ್, ಅಪ್ಪು, ಚಂದ್ರು, ಅಭಿ, ವರುಣ್, ಸಾಗರ್, ಆದರ್ಶ ಇನ್ನಿತರರು ಉಪಸ್ಥಿತರಿದ್ದರು.



ನಂಜನಗೂಡು ತಾಲೂಕು ಕಳಲೆ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.



ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ವತಿಯಿಂದ ಪರಿಸರ ದೀವಿಗೆ ಸಖಿ ಸಸಿ ಕಾರ್ಯಕ್ರಮ ನೆರವೇರಿತು. ಈ ವೇಳೆ ಹಿರಿಯ ಸಮಾಜ ಸೇವಕ ರಘುರಾಂ ವಾಜಪೇಯಿ, ವಕೀಲರಾದ ಶ್ರೀಮತಿ ರೂಪಶ್ರೀ, ಹೇಮಂತ್, ಫೌಂಡೇಶನ್‌ನ ಸಂಸ್ಥಾಪನಾ ಕಾರ್ಯದರ್ಶಿ ಗಾಯತ್ರಿ ಸುಂದರೇಶ್, ನಂದಿನಿ ಚಂದ್ರಶೇಖರ್, ಕೆ.ಟಿ.ಶ್ರೀಮತಿ, ಬಿ.ಆರ್.ನಾಗರತ್ನ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ಕುವೆಂಪುನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಪರಿಸರ ದಿನ ಕಾರ್ಯಕ್ರಮದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮೈಸೂರು ವಿಭಾಗೀಯ ಜನರಲ್ ಮ್ಯಾನೇಜರ್ ಅರುಣ್‌ಕುಮಾರ್ ಪಾಣಿಗ್ರಾಹಿ ಗಿಡ ನೆಟ್ಟು ನೀರೆರೆದರು. ಈ ವೇಳೆ ಕಾಲೇಜಿನ ಪ್ರಾಂಶುಪಾಲರಾದ ಚಿದಾನಂದ ಕುಮಾರ್, ಉಪನ್ಯಾಸಕರಾದ ವಾಸು, ಮಹೇಶ್, ಶ್ರೀನಿವಾಸ, ಸದಾನಂದ ಹಾಗೂ ಮಹೇಶ್ ಹಾಜರಿದ್ದರು.



ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು. ಈ ವೇಳೆ ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ.ಆರ್.ಲತಾಮಣಿ, ಪ್ರಾಂಶುಪಾಲರಾದ ಡಾ.ದೀಪು, ಮೋಹನ್‌ಕುಮಾರ್, ದೇವಾನಂದ್, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪ್ಲಾಸ್ಟಿಕ್ ಬಳಕೆ, ಅದರಿಂದಾಗುವ ಮಾಲಿನ್ಯ ಕೊನೆಗಾಣಿಸಲೇ ಬೇಕಿದೆ

- ರಾಜ್ಯ ಮಾಹಿತಿ ಹಕ್ಕು ಆಯೋಗದ ನಿವೃತ್ತ ಆಯುಕ್ತ ಕೆ.ಎಂ.ಚಂದ್ರೇಗೌಡ ಪ್ರತಿಪಾದನೆ
- ಪರಿಸರ ಸಂರಕ್ಷಣೆ ಜಾಗೃತಿ ಜಾಥಾ





ಮೈಸೂರಿನ ಹೈದರಾಲಿ ರಸ್ತೆಯಲ್ಲಿ ಆರ್‌ಎಲ್‌ಹೆಚ್‌ಪಿ ಸಂಸ್ಥೆ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಪರಿಸರ ಜಾಗೃತಿ ಜಾಥಗೆ ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ಆಯೋಗದ ನಿವೃತ್ತ ಆಯುಕ್ತ ಕೆ.ಎಂ.ಚಂದ್ರೇಗೌಡ ಚಾಲನೆ ನೀಡಿ, ಮಾತನಾಡಿದರು. (ಎಡಚಿತ್ರ). ಜಾಥಾದಲ್ಲಿ ಪಾಲ್ಗೊಂಡಿರುವ ವಿದ್ಯಾರ್ಥಿಗಳನ್ನು ಬಲ ಚಿತ್ರದಲ್ಲಿ ಕಾಣಬಹುದು.

ಮೈಸೂರು,ಜೂ.5(ಎಂಟಿವೈ)–ಪರಿಸರ ಸಮತೋಲನ ಕಾಪಾಡಿಕೊಳ್ಳಲು ತುರ್ತಾಗಿ ಜಾಗತಿಕ ಮಟ್ಟದಲ್ಲಿ ಪ್ಲಾಸ್ಟಿಕ್ ಬಳಕೆ, ಅದರಿಂದಾಗುತ್ತಿರುವ ಮಾಲಿನ್ಯ ಕೊನೆಗಾಣಿಸಬೇಕಾಗಿದೆ ಎಂದು ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ಆಯೋಗದ ನಿವೃತ್ತ ಆಯುಕ್ತ ಕೆ.ಎಂ.ಚಂದ್ರೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಹೈದರಾಲಿ ರಸ್ತೆ ಬಳಿ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ(ಆರ್‌ಎಲ್‌ಹೆಚ್‌ಪಿ) ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಪರಿಸರ ಸಂರಕ್ಷಣೆ ಜಾಗೃತಿಗಾಗಿ ಜಾಥಗೆ ಚಾಲನೆ ನೀಡಿ ಮಾತನಾಡಿದ ಅವರು, ಈ ಸಾಲಿನ ವಿಶ್ವ ಪರಿಸರ ದಿನವನ್ನು ಪ್ಲಾಸ್ಟಿಕ್ ಮಾಲಿನ್ಯವನ್ನು ಕೊನೆಗೊಳಿಸುವ ಧ್ಯೇಯವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. ಪ್ಲಾಸ್ಟಿಕ್ ಬಳಕೆ ಮತ್ತು ತ್ಯಾಜ್ಯ ಉತ್ಪಾದನೆ ಕಡಿಮೆ ಮಾಡುವುದು, ಪರಿಸರ ಸಂರಕ್ಷಣೆಗೆ ಬೇಕಾದ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಜಾಗತಿಕ ಮಟ್ಟದಲ್ಲಿ ತುರ್ತು ಕಾರ್ಯಕ್ರಮ ರೂಪಿಸುವ ಅಗತ್ಯವಿದೆ ಎಂದರು.

ಮೈಸೂರಿನ ಹೈದರಾಲಿ ರಸ್ತೆಯಲ್ಲಿ ಇತ್ತೀಚೆಗೆ 40ಕ್ಕೂ ಹೆಚ್ಚು ಮರಗಳನ್ನು ಕಡಿಯಲಾಗಿದ್ದು, ಅದಕ್ಕೆ ಪರ್ಯಾಯವಾಗಿ ಗಿಡಗಳನ್ನು ನೆಡಬೇಕು. ಯುವ ಜನತೆ ಪರಿಸರದ ಬಗ್ಗೆ ಕಾಳಜಿ ವಹಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಹವಾಮಾನ ಬದಲಾವಣೆ, ಜೀವವೈವಿಧ್ಯತೆಗೆ ಧಕ್ಕೆ, ಪರಿಸರ ಸಮಸ್ಯೆಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಅನಿವಾರ್ಯತೆ ಇದೆ. ರಾಷ್ಟ್ರೀಯ ಗಡಿಗಳನ್ನು ಮೀರಿದ ಪರಿಸರ ಸವಾಲುಗಳನ್ನು ಪರಿಹರಿಸುವಲ್ಲಿ ಅಂತರರಾಷ್ಟ್ರೀಯ ಸಹಕಾರ ಅತ್ಯಗತ್ಯ ಎಂದು ತಿಳಿಸಿದರು.

ಪ್ಲಾಸ್ಟಿಕ್‌ಗೆ ಸುರಕ್ಷಿತ ಪರ್ಯಾಯ ವಸ್ತುವಿನ ಅವಶ್ಯಕತೆ ಇದೆ. ಸಮುದ್ರದಲ್ಲಿನ ಜಲಚರಗಳು, ವನ್ಯಜೀವಿಗಳು ಮತ್ತು ಮಾನವನ ಆರೋಗ್ಯದ ಮೇಲೆ ಆಗಬಹುದಾದ ಹಾನಿಕಾರಕ ಪರಿಣಾಮಗಳನ್ನು ತಗ್ಗಿಸುವ ಗುರಿ ಹೊಂದಿದೆ ಎಂದರು.

ಆರ್‌ಎಲ್‌ಹೆಚ್‌ಪಿ ಸಂಸ್ಥೆಯ ನಿರ್ದೇಶಕರಾದ ಸರಸ್ವತಿ ಮಾತನಾಡಿ, ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯಾಗಿರುವ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಯು ಕಳೆದ 40 ವರ್ಷಗಳಿಂದಲೂ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ 56 ಕೊಳಚೆ ಪ್ರದೇಶಗಳು ಮತ್ತು ಉತ್ತರ ಕರ್ನಾಟಕದ 5 ಹಿಂದುಳಿದ ಜಿಲ್ಲೆಗಳಲ್ಲಿ ಜನರ ಆರೋಗ್ಯ ಕಾಪಾಡುವ ಹಾಗೂ ಪರಿಸರ ಸಮತೋಲನ ಕಾಪಾಡುವ ಕಾರ್ಯಕ್ರಮವನ್ನು ನಡೆಸುತ್ತಾ ಬಂದಿದೆ. ಪ್ರತಿ ವರ್ಷದಂತೆ ಈ ಬಾರಿ ವಿಶ್ವ ಪರಿಸರ ದಿನದ ಹಿನ್ನೆಲೆಯಲ್ಲಿ ಪರಿಸರ ಜಾಗೃತಿ ಜಾಥ ಹಮ್ಮಿಕೊಳ್ಳುವ ಮೂಲಕ ಜನರಲ್ಲಿ ಪರಿಸರ ಸಂರಕ್ಷಣೆಯ ಕಾಳಜಿ ಮೂಡಿಸಲಾಗಿದೆ ಎಂದರು.

ಜಾಗೃತಿ ಜಾಥ: ಹೈದರಾಲಿ ರಸ್ತೆಯಿಂದ ಆರಂಭವಾದ ಪರಿಸರ ಜಾಗೃತಿ ಜಾಥ ಚಾಮುಂಡಿವಿಹಾರ ಕ್ರೀಡಾಂಗಣ, ನಜ಼ರ್‌ಬಾದ್ ವೃತ್ತ, ಹಾಲಿನ ಡೈರಿ ಮೂಲಕ ಸಾಗಿ ಸಿದ್ದಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಬಂದು ಪರಿಸರ ಸಂರಕ್ಷಣೆಗೆ ಮನವಿಯನ್ನು ಸಲ್ಲಿಸಲಾಯಿತು. ಜಾಥದಲ್ಲಿ ಹಲವು ವಿದ್ಯಾರ್ಥಿಗಳು ಪಾಲ್ಗೊಂಡು ಗಮನ ಸೆಳೆದರು. ಆರ್‌ಎಲ್‌ಹೆಚ್‌ಪಿ ಕಾರ್ಯದರ್ಶಿ ಪ್ರೊ.ವಿ.ಕೆ.ಜೋಸ್ ಇನ್ನಿತರರು ಪಾಲ್ಗೊಂಡಿದ್ದರು.

ಅಲಂಕಾರ, ನಾಜೂಕಿನ ಹೆಸರಲ್ಲಿ ಮನುಜನಿಂದ ಮರಗಳ ಮಾರಣಹೋಮ!

- ಅನಾವಶ್ಯಕವಾಗಿ ಫುಟ್‌ಪಾತ್‌ಗಳು ಕಾಂಕ್ರೀಟ್ ಹಾದಿಗಳಾಗುತ್ತಿವೆ
- ಇದೇನು ಜನರ ಅನುಕೂಲಕ್ಕಾಗಿಯಲ್ಲ; ಬರೀ ಕಮಿಷನ್‌ಗಾಗಿ...!




ಮೈಸೂರಿನ ಹಲವು ಬಡಾವಣೆಗಳಲ್ಲಿ ಮರಗಳ ಬುಡಗಳಿಗೆ ಇಂಟರ್‌ಲಾಕ್ ಸ್ಲಾಬ್ ಅಳವಡಿಸಿರುವುದು.

ಮೈಸೂರು, ಜೂ.5(ಎಸ್‌ಬಿಡಿ)–ಮೈಸೂರಿನಲ್ಲಿ ಪಾದಚಾರಿ ಮಾರ್ಗಗಳ ನವೀಕರಣ ಪರಿಸರಕ್ಕೆ ಮಾರಕವಾಗಿ ಪರಿಣಮಿಸಿದೆ.

ನಗರದೆಲ್ಲೆಡೆ ಫುಟ್‌ಪಾತ್‌ಗಳನ್ನು ನವೀಕರಿಸಿ, ಅಂದಗೊಳಿಸುವ ಕಾಮಗಾರಿ ವ್ಯಾಪಕವಾಗಿ ನಡೆದಿದ್ದು, ಇದರಿಂದ ಅನುಕೂಲಕ್ಕಿಂತ ಅಪಾಯವೇ ಹೆಚ್ಚು. ಅವೈಜ್ಞಾನಿಕ ಕಾಮಗಾರಿಗಳಿಂದ ಮರಗಳಿಗೆ ಸಂಚಕಾರ ತಂದೊಡ್ಡುವುದರ ಜೊತೆಗೆ ಭೂಮಿಯ ಒಡಲನ್ನೂ ಬರಿದು ಮಾಡಲಾಗುತ್ತಿದೆ.

ಮೈಸೂರು ಸಂಸ್ಥಾನದ ಮಹಾರಾಜರು ವೈಜ್ಞಾನಿಕ ನೆಲೆಗಟ್ಟಿನಲ್ಲಿ ವ್ಯವಸ್ಥಿತವಾಗಿ ಕಟ್ಟಿದ ನಗರವನ್ನು ಅಭಿವೃದ್ಧಿ ನೆಪದಲ್ಲಿ ಹಂತ ಹಂತವಾಗಿ ಹಾಳು ಮಾಡಲಾಗುತ್ತಿದೆ ಎಂಬುದು ಸಾರ್ವಜನಿಕರ ಆಕ್ರೋಶಭರಿತ ನಿತ್ಯ ನುಡಿ. ಇದಕ್ಕೆ ಸಾಕ್ಷಿ ಎಂಬಂತೆ ಅವೈಜ್ಞಾನಿಕವಾಗಿ ಎಲ್ಲೆಡೆ ಫುಟ್‌ಪಾತ್ ಕಾಮಗಾರಿ ನಡೆಸಲಾಗುತ್ತಿದೆ. ಹಿಂದೆ ಹಾಸಿದ್ದ ಕಲ್ಲುಚಪ್ಪಡಿಗಳನ್ನು ಕಿತ್ತೊಗೆದು ಇಂಟರ್‌ಲಾಕಿಂಗ್ ನೆಲಹಾಸುಗಳನ್ನು ಅಳವಡಿಸಲಾಗುತ್ತಿದೆ. ಮರಗಳ ಬುಡಕ್ಕೂ ಕಾಂಕ್ರೀಟ್ ತುಂಬಿ ಅದರ ಮೇಲೆ ಇಂಟರ್‌ಲಾಕ್ ಜೋಡಿಸಲಾಗುತ್ತಿದೆ.

ನೆಲಕ್ಕುರುಳಲು ಇದೇ ಕಾರಣ: ಪ್ರತೀ ಮಳೆಯಲ್ಲೂ ಮೈಸೂರು ನಗರದಲ್ಲಿ ಮೂರ್‍ನಾಲ್ಕು ಮರಗಳು ನೆಲಕ್ಕುರುಳಲು ಇದೇ ಪ್ರಮುಖ ಕಾರಣವಾಗಿದೆ. ಇಂಟರ್‌ಲಾಕ್‌ಗಳನ್ನು ಸಮತಟ್ಟಾಗಿ ಜೋಡಿಸಲು ಅನುವಾಗುವಂತೆ ಮರಗಳ ಸುತ್ತಲೂ ಬೇರುಗಳನ್ನು ಕತ್ತರಿಸಲಾಗುತ್ತದೆ. ಕೆಲವೆಡೆ ಮರದ ಬುಡಕ್ಕೆ ಜಲ್ಲಿ–ಸಿಮೆಂಟ್ ಕಾಂಕ್ರೀಟ್ ಅನ್ನು ತುಂಬಿ, ಉಸಿರುಗಟ್ಟಿಸಲಾಗುತ್ತಿದೆ. ಇದರಿಂದ ಮರದ ಬೇರಿಗೆ ಒಂದು ಹನಿ ನೀರು ಇಳಿಯುವುದಿಲ್ಲ. ಪರಿಣಾಮ ಮರಗಳು ಶಕ್ತಿ ಕಳೆದು ಕೊಂಡು ಸಣ್ಣ ಮಳೆ–ಗಾಳಿಯಾದರೂ ಬುಡಸಮೇತ ನೆಲಕ್ಕುರುಳುತ್ತವೆ.

ಭೂಮಿಯ ಒಡಲಿಗೂ ಬರೆ: ರಸ್ತೆಗಳಿಗೆ ಫುಟ್‌ಪಾತ್‌ವರೆಗೂ ಡಾಂಬರ್ ಅಥವಾ ಕಾಂಕ್ರೀಟ್ ಹಾಕಲಾಗಿದೆ. ಈಗ ಫುಟ್‌ಪಾತ್‌ಗಳನ್ನೂ ಇಂಟರ್‌ಲಾಕ್‌ಗಳಿಂದ ಮುಚ್ಚುತ್ತಿರುವುದರಿಂದ ಮಳೆ ನೀರು ಸರಾಗವಾಗಿ ಚರಂಡಿಗೆ ಹರಿದುಹೋಗುತ್ತಿದೆ. ಭೂಮಿಯೊಳಗೆ ನೀರು ಇಂಗುವುದಕ್ಕೆ ಅವಕಾಶವಿಲ್ಲದ ಕಾರಣ ಅಂತರ್ಜಲ ಮಟ್ಟವೂ ಕುಸಿಯುತ್ತಿದೆ. ಹೀಗೆಯೇ ಮುಂದುವರೆದರೆ ಭೂಮಿಯ ಒಡಲು ಬರಿದಾಗುವ ಆತಂಕ ಸೃಷ್ಟಿಯಾಗಿದೆ.

ಕೇಳಿಸೋಲ್ಲ, ಕಾಣಿಸೋಲ್ಲ: ಅವೈಜ್ಞಾನಿಕ ಫುಟ್‌ಪಾತ್ ಕಾಮಗಾರಿ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾದರೂ, ಸಾರ್ವಜನಿಕರು ಪ್ರತಿಭಟಿಸಿದರೂ ಅಧಿಕಾರಿಗಳಿಗೆ ಯಾವುದೂ ಕೇಳಿಸುವುದೂ ಇಲ್ಲ, ಕಾಣಿಸುವುದೂ ಇಲ್ಲ. ನಗರಪಾಲಿಕೆ ಅಧಿಕಾರಿಗಳು, ಲೋಕೋಪಯೋಗಿ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ತಲೆಕೆಡಿಸಿಕೊಳ್ಳುತ್ತಿಲ್ಲ. ಇಡೀ ವ್ಯವಸ್ಥೆಗೆ ಪರಿಸರದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ. ಕಣ್ಮುಂದೆಯೇ ಪರಿಸರ ಹಾಳಾಗುತ್ತಿದ್ದರೂ ನಮಗೇನಾಗ ಬೇಕು ಎಂಬ ಧೋರಣೆಯಿಂದ ಯಾವುದೇ ಕ್ರಮ ಕೈಗೊಳ್ಳದೆ ಮೌನವಾಗಿದ್ದಾರೆ. ಹಣ ಲೂಟಿ ಮಾಡುವ ಏಕೈಕ ಉದ್ದೇಶದಿಂದ ಮಾತ್ರ ಅವೈಜ್ಞಾನಿಕವಾಗಿ ಫುಟ್‌ಪಾತ್ ನವೀಕರಣ ಕಾಮಗಾರಿ ನಡೆಸಲಾಗುತ್ತಿದೆ. ಇದರ ಪರಿಣಾಮವನ್ನು ಮುಂದಿನ ದಿನಗಳಲ್ಲಿ ಇಡೀ ಮೈಸೂರಿನ ಜನ ಎದುರಿಸಬೇಕಾಗುತ್ತದೆ ಎಂದು ಸಾರ್ವಜನಿಕರು ವಿಷಾದ ವ್ಯಕ್ತಪಡಿಸಿದ್ದಾರೆ.

ಹಾರೆ ಹಿಡಿದ ಜನ: ಮರಗಳ ಹನನಕ್ಕೆ ಕಾರಣವಾಗಿರುವ ಇಂಟರ್‌ಲಾಕ್ ಹಾಸುಗಳನ್ನು ತೆರವುಗೊಳಿಸುವಂತೆ ಎಷ್ಟು ಬಾರಿ ದೂರು ನೀಡಿದರೂ ಯಾವ ಅಧಿಕಾರಿಗಳೂ ಕ್ರಮ ವಹಿಸದ ಕಾರಣ ಜನರೇ ಆ ಕೆಲಸಕ್ಕೆ ಮುಂದಾಗಿದ್ದಾರೆ. ತಾವೇ ಹಾರೆ ಹಿಡಿದು ಮರದ ಬುಡಗಳಲ್ಲಿ ಅಳವಡಿಸಿದ್ದ ಇಂಟರ್‌ಲಾಕ್‌ಗಳನ್ನು ಕಿತ್ತುಹಾಕುತ್ತಿದ್ದಾರೆ. ಆದರೂ ನಿದ್ದೆ ಮಂಪರಿನಲ್ಲಿರುವ ವ್ಯವಸ್ಥೆಗೆ ಎಚ್ಚರವಾಗಿಲ್ಲ.

ಯಾರಿಗಾಗಿ ಈ ಅಲಂಕಾರ: ಬಹುತೇಕ ಫುಟ್ ಪಾತ್‌ಗಳು ಕೆಲ ಮಳಿಗೆಯವರು, ಬೀದಿಬದಿ ವ್ಯಾಪಾರಿಗಳು ಹಾಗೂ ಫಾಸ್ಟ್‌ಫುಡ್‌ನವರ ಪಾಲಾಗಿವೆ. ಯಾವ ರಸ್ತೆಯಲ್ಲೂ ಫುಟ್‌ಪಾತ್‌ಗಳು ಪಾದಚಾರಿಗಳ ಸಂಚಾರಕ್ಕೆ ಮುಕ್ತವಾಗಿಲ್ಲ. ಜನರ ತೆರಿಗೆ ಹಣದಲ್ಲಿ ಫುಟ್‌ಪಾತ್ ನವೀಕರಿಸಿ ಅಂದಗೊಳಿಸುವುದಾದರೂ ಯಾರಿಗಾಗಿ? ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ.



ಕಾಂಕ್ರೀಟ್ ಸ್ಲಾಬ್ ಪರಿಸರ ಮಾರಕ

“ಫುಟ್‌ಪಾತ್‌ಗಳಿಗೆ ಅವೈಜ್ಞಾನಿಕವಾಗಿ ಕಾಂಕ್ರೀಟ್ ಸ್ಲಾಬ್ ಹಾಕುವುದರಿಂದ ಭೂಮಿಗೆ ನೀರು ಇಳಿಯುವುದಿಲ್ಲ ಪ್ರತೀ 10 ಅಡಿಗೆ ಕನಿಷ್ಟ 3 ಅಡಿ ಆಳದ ಗುಂಡಿ ಮಾಡಿ ದರೆ ಅಂತರ್ಜಲ ವೃದ್ಧಿಯಾಗುತ್ತದೆ. ಇಂತಹ ಕಾಮಗಾರಿಗೆ ಸಂಬಂಧ ಪಟ್ಟಂತೆ ಸಿವಿಲ್ ಇಂಜಿನಿಯರ್‌ಗಳು, ಭೂವಿಜ್ಞಾನಿಗಳ ಸಲಹೆ ಪಡೆಯಬೇಕು. ಆದರೆ ಯಾರೂ ಈ ಕೆಲಸ ಮಾಡುತ್ತಿಲ್ಲ. ಅಂತರ್ಜಲ ವೃದ್ಧಿ ಬಗ್ಗೆ ನಾವು ರೈತರಿಗೆ ಮಾಹಿತಿ ಜೊತೆಗೆ ಮಾರ್ಗದರ್ಶನ ನೀಡುತ್ತಿರುತ್ತೇವೆ. ಆದರೆ ಕಾಮಗಾರಿಗಳ ಸಂಬಂಧ ಅಧಿಕಾರಿಗಳಿಗೆ ಸಲಹೆ ನೀಡಿದರೆ ಅವರು ಅದನ್ನು ಯಾವ ರೀತಿ ಸ್ವೀಕರಿಸುತ್ತಾರೋ ಎಂಬ ಹಿಂಜರಿಕೆ ಇದ್ದೇ ಇರುತ್ತದೆ. ಆದರೆ ಸಾಮಾಜಿಕ ಕಳಕಳಿ ನಿಟ್ಟಿನಲ್ಲಿ ಮೈಸೂರು ವಿವಿ ಭೂವಿಜ್ಞಾನ ವಿಭಾಗದ ಮುಖ್ಯಸ್ಥರ ಗಮನಕ್ಕೆ ತಂದು, ಕಾಂಕ್ರೀಟ್ ಸ್ಲಾಬ್ ಅಳವಡಿಕೆಯಿಂದ ಪರಿಸರದ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ಸಂಬಂಧಪಟ್ಟವರಿಗೆ ಮಾಹಿತಿ ನೀಡುವ ಪ್ರಯತ್ನ ಮಾಡುತ್ತೇವೆ.

– ಡಾ.ಬಸವರಾಜು, ಭೂವಿಜ್ಞಾನ ಉಪನ್ಯಾಸಕ




ಎಲ್ಲೆಂದರಲ್ಲಿ ರಾಶಿ ಬಿದ್ದಿರುವ ಇಂಟರ್‌ಲಾಕ್ ಸ್ಲಾಬ್‌ಗಳು.

ಜೂ.13ರಂದು ಡೋರ್‍ನಹಳ್ಳಿಯಲ್ಲಿ ಸಂತ ಅಂತೋಣಿ ಚರ್ಚ್‌ನ ವಾರ್ಷಿಕೋತ್ಸವ



ಮೈಸೂರು, ಜೂ.5– ಕೆ.ಆರ್.ನಗರ ತಾಲೂಕಿನ ಡೋರ್‍ನಹಳ್ಳಿಯ ಸಂತ ಅಂತೋಣಿ ಚರ್ಚ್‌ನ ವಾರ್ಷಿಕೋತ್ಸವ ಸಮಾರಂಭ ಜೂ.13ರಂದು ನಡೆಯಲಿದೆ.

ಸಮಾರಂಭವು ಜೂ.4ರಂದು ಆರ್ಚ್‌ಬಿಷಪ್ ಎಮರಿಟಸ್ ಅಂಡ್ ಅಪೋಸ್ಟೋಲಿಕ್ ಅಡ್ಮಿನಿಸ್ಟ್ರೇಟರ್ ಆಫ್ ದಿ ಡಯೋಸಿಸ್ ಆಫ್ ಮೈಸೂರು ರೆ. ಡಾ. ಬರ್ನಾಡ್ ಮೊರಾಸ್ ಅವರು ಧ್ವಜಾರೋಹಣ ಮಾಡುವ ಮೂಲಕ ಚಾಲನೆ ನೀಡಿದರು. ಜೂನ್ 5ರಿಂದ 12ರವರೆಗೆ ಪ್ರತಿದಿನ ನೊವೆನಾ ದಿನಗಳು ಮತ್ತು ಧರ್ಮೋಪದೇಶ ನಡೆಯಲಿದ್ದು, ಆಂಗ್ಲ ಭಾಷೆಯಲ್ಲಿ ಬೆಳಗ್ಗೆ 7 ಗಂಟೆಗೆ ಮತ್ತು ಕನ್ನಡ ಭಾಷೆಯಲ್ಲಿ ಬೆಳಗ್ಗೆ 11 ಮತ್ತು ಸಂಜೆ 5.30 ಗಂಟೆಗೆ ನಡೆಯಲಿದೆ.

ಜೂನ್ 13, ಕನ್ನಡದಲ್ಲಿ ಬೆಳಗ್ಗೆ 5 ಗಂಟೆಗೆ, 6 ಗಂಟೆ, 8 ಗಂಟೆ, 10 ಗಂಟೆ, ಮಧ್ಯಾಹ್ನ 3 ಗಂಟೆ, 4 ಗಂಟೆ ಮತ್ತು 5.30ಕ್ಕೆ ನಡೆ ಯಲಿದೆ. ಬೆಳಗ್ಗೆ 10 ಗಂಟೆಗೆ ನಡೆಯುವ ಕನ್ನಡದ ಪ್ರಾರ್ಥನೆ ಆರ್ಚ್‌ಬಿಷಪ್ ಎಮಿರಿಟಸ್ ಅಂಡ್ ಅಪೋಸ್ಟೋಲಿಕ್ ಅಡ್ಮಿನಿಸ್ಟ್ರೇಟರ್ ಆಫ್ ದಿ ಡಯೋಸಿಸ್ ಆಫ್ ಮೈಸೂರು ರೆ. ಡಾ. ಬರ್ನಾಡ್ ಮೊರಾಸ್ ಅವರ ನೇತೃತ್ವದಲ್ಲಿ ನಡೆಯಲಿದೆ ಆಂಗ್ಲ ಭಾಷೆಯಲ್ಲಿ ಪ್ರಾರ್ಥನೆ ಬೆಳಗ್ಗೆ 7 ಮತ್ತು ಮಧ್ಯಾಹ್ನ 1 ಗಂಟೆಗೆ, ತಮಿಳಿನಲ್ಲಿ ಬೆಳಗ್ಗೆ 11.30ಕ್ಕೆ ನಡೆಯಲಿದೆ. ಪ್ರತಿ ವರ್ಷದಂತೆ ಈ ಬಾರಿಯೂ ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಸಂತ ಅಂತೋಣಿಯವರನ್ನು ಅಲಂಕೃತ ರಥದಲ್ಲಿ ಪ್ರತಿಷ್ಠಾಪಿಸಿ, ದೇವಾಲಯದ ಸುತ್ತಲೂ ಮೆರವಣಿಗೆ ಮಾಡಲಾಗುವುದು.

ಕೆಎಸ್‌ಆರ್‌ಟಿಸಿಯಿಂದ ವಿಶೇಷ ಬಸ್ ವ್ಯವಸ್ಥೆ

ಸಂತ ಅಂತೋಣಿಯವರ ವಾರ್ಷಿಕೋತ್ಸವದ ಅಂಗವಾಗಿ ದೇವಾಲಯದ ಭಕ್ತರ ಅನುಕೂಲಕ್ಕಾಗಿ ಕರ್ನಾಟಕ ರಸ್ತೆ ಸಾರಿಗೆ ನಿಗಮವು ಜೂನ್ 4ರಿಂದ 15ರವರೆಗೆ ಮೈಸೂರಿನಿಂದ ಡೋರ್‍ನಹಳ್ಳಿಗೆ ವಿಶೇಷ ಸಾರಿಗೆ ವ್ಯವಸ್ಥೆ ಮಾಡಲಾಗಿದೆ.

ಮೈಸೂರು ಬಸ್ ನಿಲ್ದಾಣದಿಂದ ಬಸ್ ಹೊರಡುವ ವೇಳೆ: ಬೆಳಗ್ಗೆ 5.30, 9.30 ಮತ್ತು ಮಧ್ಯಾಹ್ನ 3.45ಕ್ಕೆ ಡೋರ್‍ನಹಳ್ಳಿಯಿಂದ ಹೊರಡುವ ವೇಳೆ: ಮಧ್ಯಾಹ್ನ 2.15 ಮತ್ತು ರಾತ್ರಿ 8.30.

ಜೂ.15, ಶ್ರೀ ನಾಲ್ವಡಿ ಜಯಂತಿ ಆಚರಣೆ

ಮೈಸೂರು, ಜೂ.5(ಜಿಎ)–ಮೈಸೂರಿನ ಬಿ.ಆರ್.ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ಪ್ರೋತ್ಸಾಹ ವೇದಿಕೆಯಿಂದ ಜೂ.15ರಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 141ನೇ ಜಯಂತಿ ನಡೆಸಲಾಗುತ್ತದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವೇದಿಕೆ ಅಧ್ಯಕ್ಷ ಉಮೇಶ್ ಈ ವಿಷಯ ತಿಳಿಸಿ, ಅಂದು ಸಂಜೆ 4.30ಕ್ಕೆ ಅಶೋಕಪುರಂನಲ್ಲಿರುವ ಭವನದಲ್ಲಿ ಕಾರ್ಯಕ್ರಮ ಆಯೋಜಿಸಿದ್ದು, ಹಾಲಿ ಶಾಸಕರು, ಸಂಸದರು, ಮಾಜಿ ಶಾಸಕರು, ಸಂಸದರು, ಮಾಜಿ ಮೇಯರ್‌ಗಳು ಹಾಗೂ ಪಾಲಿಕೆ ಮಾಜಿ ಸದಸ್ಯರು ಪಾಲ್ಗೊಳ್ಳಲಿದ್ದಾರೆ ಎಂದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಗುತ್ತದೆ. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಓದುಗನಿಗೆ ಶೋಧನಾ ಮನೋಭಾವವಿರಬೇಕು

ಹಿರಿಯ ವಿದ್ವಾಂಸ ಪ್ರೊ.ರಾಗೌ ಅಭಿಮತ

ಮೈಸೂರು, ಜೂ.5(ಎಂಕೆ)– ಓದಿನಲ್ಲಿ ಬಹಿರಂಗ ಗ್ರಹಿಕೆಗಿಂತ ಅಂತರಂಗ ಗ್ರಹಿಕೆ ಮುಖ್ಯವಾಗಿದ್ದು, ಓದು ನಮ್ಮ ಮನಸ್ಸಿಗೆ ಧಾವಿಸಿದಾಗ ನಮ್ಮಲ್ಲಿ ಚಿಂತನೆ ಪ್ರಾರಂಭವಾಗುತ್ತದೆ. ಓದುಗನಿಗೆ ಶೋಧನಾ ಮನೋಭಾವವಿರಬೇಕು ಎಂದು ಹಿರಿಯ ವಿದ್ವಾಂಸ ಪ್ರೊ.ರಾಮೇಗೌಡ(ರಾಗೌ) ಹೇಳಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವತಿಯಿಂದ ಆಯೋಜಿಸಿರುವ 'ಕನ್ನಡ ಸಾಹಿತ್ಯ ಪರಂಪರೆ ಮತ್ತು ಇತ್ತೀಚಿನ ಪ್ರವೃತ್ತಿಗಳು' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪದ್ಯದ ಓದು ರಸಗ್ರಹಿಕೆಗೆ ಸಿಮಿತವಾಗದೇ ವಿಚಾರ ಗ್ರಹಿಕೆಯನ್ನು ಪಡೆದುಕೊಳ್ಳುವಂತಿರಬೇಕು ಎಂದರು.



'ಕನ್ನಡ ಸಾಹಿತ್ಯ ಪರಂಪರೆ ಮತ್ತು ಇತ್ತೀಚಿನ ಪ್ರವೃತ್ತಿಗಳು' ಕುರಿತು ಹಿರಿಯ ವಿದ್ವಾಂಸ ಪ್ರೊ.ರಾಮೇಗೌಡ(ರಾಗೌ) ವಿಶೇಷ ಉಪನ್ಯಾಸ ನೀಡಿದರು.

ಕಾವ್ಯದಲ್ಲಿ ಶಬ್ದಾರ್ಥ ಮುಖ್ಯವಾಗಿದ್ದು, ರನ್ನನ ಗಧಾಯುದ್ಧವು ಶುದ್ಧ ಕಲಾ ಕೃತಿಯಾಗಿದ್ದರೆ, ಪಂಪ ಸಾಹಿತ್ಯದಲ್ಲಿ ಕಲೆಯ ಜೊತೆ ಸಂಸ್ಕೃತಿಯನ್ನು ನೋಡಬಹುದು. ಹಾಗೆಯೇ ನಯಸೇನನ ಧರ್ಮಾಮೃತದಲ್ಲಿ ಸಂಸ್ಕೃತಿ ದಾಖಲಾಗಿದೆ ಎಂದು ಹೇಳಿದರು.

ನಾವು ಪ್ರತಿಯೊಂದನ್ನು ಶೋಧನೆ ಮಾಡಬೇಕು. ಮನುಷ್ಯ ಜಾತಿ ತಾನೊಂದೆ ವಲಂ ಎಂಬುದನ್ನು ನಾವು ಪಂಪ ಹೇಳಿದ ಎಂದು ಭಾವಿಸುತ್ತೇವೆ. ಅದರೆ ಅದು ಜಿನಸೇನಾಚಾರ್ಯರ ಪೂರ್ವ ಪುರಾಣದಲ್ಲಿ ಅಡಕವಾಗಿದೆ ಅದನ್ನು ನೋಡಬಹದು. ನಾವೆಲ್ಲಾ ಒಂದು ಎಂದಿದ್ದರೆ, ನಮ್ಮಲ್ಲಿ ಸಾಮಾಜಿಕ ಕ್ರಾಂತಿ, ವಚನ ಚಳುವಳಿ, ದಲಿತ ಬಂಡಾಯ ನಡೆಯುತ್ತಿರಲಿಲ್ಲ ಎಂದರು.


ಮೈಸೂರು ವಿವಿ ಪ್ರಸಾರಂಗ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು, ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕ ಪ್ರೊ.ಹೆಚ್.ಸಿ.ಜ್ಯೋತಿ, ಡಾ.ಎಲ್. ನಂಜುಂಡ ಸ್ವಾಮಿ ಮತ್ತಿತ್ತರರಿದ್ದರು.

ನಟರಾಜ್‌ಗೆ ಪಿಹೆಚ್.ಡಿ



ಮೈಸೂರು: ಡಾ.ಕೆ.ಎನ್.ಅಮೃತೇಶ್ ಅವರ ಮಾರ್ಗದರ್ಶನದಲ್ಲಿ ಕೆ.ನಟರಾಜ್ ಅವರು ಸಸ್ಯಶಾಸ್ತ್ರ ವಿಷಯದಲ್ಲಿ ಸಂಶೋಧಿಸಿ ಸಾದರ ಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಗುರುವಾರ	107.18 ಅಡಿ
ಒಳಹರಿವು	7262 ಕ್ಯೂಸೆಕ್
ಹೊರಹರಿವು	836 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಗುರುವಾರ	2280.98 ಅಡಿ
ಒಳಹರಿವು	6238 ಕ್ಯೂಸೆಕ್
ಹೊರಹರಿವು	5625 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಗುರುವಾರ	2851.43 ಅಡಿ
ಒಳಹರಿವು	1908 ಕ್ಯೂಸೆಕ್
ಹೊರಹರಿವು	1729 ಕ್ಯೂಸೆಕ್

ಇಂಟರ್ ನ್ಯಾಷನಲ್ ಯೋಗ ಟೀಚರ್ ತರಬೇತಿ

500 ಗಂಟೆಗಳ ಆನ್‌ಲೈನ್, ಆಫ್‌ಲೈನ್ ತರಬೇತಿ



ಮೈಸೂರು, ಜೂ.5(ಜಿಎ)–ಇಂಟರ್ ನ್ಯಾಷನಲ್ ಯೋಗ ಆರ್ಗನೈಜೇಷನ್, ಇಂಟರ್ ನ್ಯಾಷನಲ್ ಯೋಗ ಸ್ಕೂಲ್ ಹಾಗೂ ಪರಮಹಂಸ ಯೋಗ ಮಹಾ ವಿದ್ಯಾಲಯದ ವತಿಯಿಂದ ಇಂಟರ್ ನ್ಯಾಷನಲ್ ಯೋಗ ಟೀಚರ್ ಕೋರ್ಸ್‌ಗೆ ತರಬೇತಿ ನೀಡಲಾಗುತ್ತಿದೆ ಎಂದು ಮಹಾ ವಿದ್ಯಾಲಯದ ಛೇರ್ಮನ್ ಶಿವಪ್ರಕಾಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯೋಗ ಟೀಚರ್‌ನ 500 ಗಂಟೆ ಗಳ ಕೋರ್ಸ್ ತರಬೇತಿಯನ್ನು ಆಯುಷ್ ಇಲಾಖೆ ಅಡಿಯಲ್ಲಿ 3 ತಿಂಗಳು ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ, ವಾರಾಂತ್ಯದಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ನುರಿತ ಯೋಗ ತಜ್ಞರು ತರಬೇತಿ ನೀಡಲಿದ್ದಾರೆ ಎಂದರು.

ತರಬೇತಿಯಲ್ಲಿ ಯೋಗಾಸನ, ಯೋಗ ಥೆರಪಿ, ಪ್ರಾಣಾಯಾಮ, ಧ್ಯಾನ, ಮುದ್ರಾ ಥೆರಪಿ, ಯೋಗ ಶಾಸ್ತ್ರ ಪತಂಜಲಿ ಯೋಗ ಸೂತ್ರಗಳು, ಶರೀರಶಾಸ್ತ್ರ, ಫಿಸಿಯಾಲಜಿ, ಕಲಿಯುವ ವಿಧಾನ, ಕಲಿಸುವ ಕಲೆ, ಆಹಾರ ಕ್ರಮ, ಮನೆ ಮದ್ದು, ಜೀವನ ಶೈಲಿ ಸೇರಿದಂತೆ ತರಬೇತಿ ನೀಡಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಯೋಗ ಶಿಕ್ಷರಿಗೆ ಆದ್ಯತೆ ಹೆಚ್ಚಿದೆ. ಜೂ.16ರೊಳಗೆ ನೊಂದಣಿ ಮಾಡಿಕೊಳ್ಳಬಹುದು. ಮಾಹಿತಿಗಾಗಿ 7090157993 ಸಂಪರ್ಕಿಸಿ ಎಂದರು. ಗೋಷ್ಠಿಯಲ್ಲಿ ಜಲಂಧರ್, ದೇವರಾಜ್, ವಿಜಯ ಕುಮಾರ್, ನಂಜಪ್ಪ, ರೇಚಣ್ಣ ಇದ್ದರು.

ಅಧಿಕಾರಿಗಳೊಂದಿಗೆ ಸಭೆ



ವಿಧಾನಪರಿಷತ್ ಸದಸ್ಯ ವಿವೇಕಾನಂದ ಅವರು ಮೈಸೂರಿನ ಬಂಬೂ ಬಜಾರ್‌ನಲ್ಲಿರುವ ವಿಕಲಚೇತನ ಸರ್ಕಾರಿ ಶಾಲೆಯ ಅಭಿವೃದ್ಧಿ ವಿಚಾರವಾಗಿ (ಅಂಧ ಮತ್ತು ಕಿವುಡ ಮಕ್ಕಳ ಶಾಲೆ) ಮೈಸೂರು ಮಹಾನಗರಪಾಲಿಕೆಯ ವಲಯ ಆಯುಕ್ತರು, ಅಭಿಯಂತರರು, ವಾಣಿವಿಲಾಸ ವಾಟರ್ ವರ್ಕ್ಸ್‌ನ ಅಭಿಯಂತರು ಹಾಗೂ ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಜಿಲ್ಲಾ ಅಧಿಕಾರಿಗಳು, ಸಂಸ್ಥೆಯ ಅಧೀಕ್ಷಕರು, ಸಹ ಶಿಕ್ಷಕರೊಂದಿಗೆ ಸಭೆ ನಡೆಸಿ, ಸಂಸ್ಥೆಯ ಅಭಿವೃದ್ಧಿಗೆ ವಿಶೇಷ ಗಮನಹರಿಸುವಂತೆ ಸೂಚಿಸಿದರು.

ದೇಶ - ವಿದೇಶ

ತನ್ನದೇ ನಗ್ನ ಚಿತ್ರ ತೋರಿಸಿ ಡೀಪ್‌ಫೇಕ್ ಅಪಾಯ ತಿಳಿಸಿದ ಸಂಸದೆ



ನ್ಯೂಜಿಲೆಂಡ್: ಡೀಪ್‌ಫೇಕ್ ತಂತ್ರಜ್ಞಾನದ ಅಪಾಯವನ್ನು ಎತ್ತಿ ತೋರಿಸುವ ನಡೆಯಲ್ಲಿ ನ್ಯೂಜಿಲೆಂಡ್ ಸಂಸತ್ ಸದಸ್ಯೆ ಲಾರಾ ಮೆಕ್‌ಕ್ಲೂರ್ ಅವರು ಸಂಸತ್ತಿನ ಅಧಿವೇಶನದಲ್ಲಿ ತಮ್ಮ AI ರಚಿತ ನಗ್ನ ಚಿತ್ರವನ್ನು ಪ್ರದರ್ಶಿಸಿದರು. ಸುಲಭವಾಗಿ ಲಭ್ಯವಿರುವ ಆನ್‌ಲೈನ್ ಪರಿಕರಗಳನ್ನು ಬಳಸಿಕೊಂಡು 5 ನಿಮಿಷಗಳಿಗಿಂತ ಕಡಿಮೆ ಅವಧಿಯಲ್ಲಿ ಈ ಚಿತ್ರವನ್ನು ರಚಿಸಲಾಗಿದೆ ಎಂದು ಸಂಸದೆ ಹೇಳಿದರು.

ಈ ಚಿತ್ರವು ನನ್ನ ಬೆತ್ತಲೆ ಚಿತ್ರ, ಆದರೆ ಅದು ನಿಜವಲ್ಲ. ಅಂತಹ ನಕಲಿ ಚಿತ್ರಗಳನ್ನು ಎಷ್ಟು ಸುಲಭವಾಗಿ ತಯಾರಿಸಬಹುದು ಎಂದರು. ಚಿತ್ರವು ಕಟ್ಟುಕಥೆ ಎಂದು ತಿಳಿದಿದ್ದರೂ ಮಾನಸಿಕ ಪರಿಣಾಮವನ್ನು ಗಮನಿಸಿ ತಮ್ಮ ಅನುಭವವನ್ನು ಭಯಾನಕ ಎಂದರು. ಮೆಕ್‌ಕ್ಲೂರ್ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಚಿತ್ರವನ್ನು ಹಂಚಿಕೊಂಡರು. ಇಂದು ಸಂಸತ್ತಿನಲ್ಲಿ ಇವುಗಳನ್ನು ರಚಿಸುವುದು ಎಷ್ಟು ನೈಜ ಮತ್ತು ಸುಲಭ ಎಂಬುದನ್ನು ತೋರಿಸಲು ನಾನು ನನ್ನ AI ರಚಿತ ನಗ್ನ ಡೀಪ್‌ಫೇಕ್ ಅನ್ನು ತೋರಿಸಿದೆ. ಸಮಸ್ಯೆ ತಂತ್ರಜ್ಞಾನವಲ್ಲ. ಆದರೆ ಜನರನ್ನು ನಿಂದಿಸಲು ಅದನ್ನು ಹೇಗೆ ಬಳಸಿಕೊಳ್ಳಲಾಗುತ್ತಿದೆ. ನಮ್ಮ ಕಾನೂನುಗಳನ್ನು ನಿಭಾಯಿಸಬೇಕಾಗಿದೆ ಎಂದರು.

ತತ್ಕಾಲ್ ರೈಲ್ವೆ ಟಿಕೆಟ್ ಬುಕ್ಕಿಂಗ್: ಮೊದಲ 10 ನಿಮಿಷ ಆಧಾರ್ ಲಿಂಕ್ ಮಾಡಿದ ಗ್ರಾಹಕರಿಗೆ ಆದ್ಯತೆ



ನವದೆಹಲಿ: ತತ್ಕಾಲ್ ಟಿಕೆಟ್ ಮಾರಾಟದ ಮೊದಲ 10 ನಿಮಿಷಗಳ ಸಮಯದಲ್ಲಿ ಆಧಾರ್ ಕಾರ್ಡ್ ಗಳೊಂದಿಗೆ ತಮ್ಮ ಖಾತೆಗಳನ್ನು ಲಿಂಕ್ ಮಾಡಿದ ಖಾತೆದಾರರಿಗೆ ತತ್ಕಾಲ್ ಟಿಕೆಟ್ ಬುಕಿಂಗ್‌ಗೆ ಆದ್ಯತೆ ನೀಡಲು ರೈಲ್ವೆ ನಿರ್ಧರಿಸಿದೆ. ತತ್ಕಾಲ್ ಟಿಕೆಟ್‌ಗಳನ್ನು ಬುಕಿಂಗ್ ಮಾಡಲು ಭಾರತೀಯ ರೈಲ್ವೆ ಶೀಘ್ರದಲ್ಲೇ ಇ–ಆಧಾರ್ ದೃಢೀಕರಣ ವನ್ನು ಬಳಸಲು ಪ್ರಾರಂಭಿಸಲಿದೆ. ಇದು ನಿಜವಾದ ಬಳಕೆದಾರರಿಗೆ ದೃಢೀಕೃತ ಟಿಕೆಟ್‌ಗಳನ್ನು ಪಡೆಯಲು ಸಹಾಯ ಮಾಡುತ್ತದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಅಧಿಕೃತ ಐಆರ್‌ಸಿಟಿಸಿ ಏಜೆಂಟ್‌ಗಳಿಗೂ ಸಹ ತತ್ಕಾಲ್ ವಿಂಡೋ ತೆರೆದ ಮೊದಲ 10 ನಿಮಿಷಗಳಲ್ಲಿ ಟಿಕೆಟ್‌ಗಳನ್ನು ಬುಕ್ ಮಾಡಲು ಅವಕಾಶವಿಲ್ಲ. ಆಧಾರ್ ನೊಂದಿಗೆ ದೃಢೀಕರಿಸದ ಎಲ್ಲಾ ಖಾತೆಗಳಿಗೆ ವಿಶೇಷ ಪರಿಶೀಲನೆ ನಡೆಸಲು ಐಆರ್‌ಸಿಟಿಸಿ ನಿರ್ಧರಿಸಿದೆ. ಅನುಮಾನಾಸ್ಪದವೆಂದು ಕಂಡುಬಂದ ಖಾತೆಗಳನ್ನು ಮುಚ್ಚಲಾಗುತ್ತದೆ ಎಂದರು. ಅಂಕಿ–ಅಂಶಗಳ ಪ್ರಕಾರ ಆನ್‌ಲೈನ್ ಪ್ಲಾಟ್‌ಫಾರ್ಮ್ ಮೂಲಕ ನಿತ್ಯ ಸುಮಾರು 2,25,000 ಪ್ರಯಾಣಿಕರು ತತ್ಕಾಲ್ ಟಿಕೆಟ್ ಬುಕ್ ಮಾಡುತ್ತಾರೆ.

ಗಾಜಾದಲ್ಲಿ ತಕ್ಷಣದ ಕದನ ವಿರಾಮ ಘೋಷಣೆ: ವಿಶ್ವಸಂಸ್ಥೆ ಭದ್ರತಾ ಮಂಡಳಿ ನಿರ್ಣಯ ತಿರಸ್ಕರಿಸಿದ ಅಮೆರಿಕ



ವಿಶ್ವಸಂಸ್ಥೆ: ಗಾಜಾದಲ್ಲಿ ತಕ್ಷಣದ ಮತ್ತು ಶಾಶ್ವತ ಕದನ ವಿರಾಮಕ್ಕೆ ಒತ್ತಾಯಿಸುವ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯವನ್ನು ಅಮೆರಿಕ ತಿರಸ್ಕರಿಸಿದೆ. ಕಾರಣ ಇದು ಒತ್ತೆಯಾಳುಗಳ ಬಿಡುಗಡೆಗೆ ಸಂಬಂಧಿಸಿಲ್ಲ. ಇದು ಹಮಾಸ್ ಉಗ್ರಗಾಮಿಗಳಿಗೆ ಧೈರ್ಯ ತುಂಬುವ ಕೆಲಸ ಎಂದು ಅಮೆರಿಕ ಹೇಳಿದೆ.

ನಿರ್ಣಯದ ಪರವಾಗಿ ಮಂಡಳಿಯ 14 ಸದಸ್ಯರು ಮತ ಚಲಾಯಿಸಿದ್ದು, ಗಾಜಾದಲ್ಲಿ ಮಾನವೀಯ ಪರಿಸ್ಥಿತಿ ದುರಂತ ಎಂದಿದೆ. ಹಾಗೇ ಆ ಪ್ರದೇಶದಲ್ಲಿರುವ 2.1 ಮಿಲಿಯನ್ ಪ್ಯಾಲೆಸ್ಟೈನಿಯನ್ನರಿಗೆ ನೆರವು ನೀಡುವ ಎಲ್ಲ ನಿರ್ಬಂಧಗಳನ್ನು ತೆಗೆದು ಹಾಕುವಂತೆ ಇಸ್ರೇಲ್‌ಗೆ ಕರೆ ನೀಡಿದೆ. ಮತದಾನಕ್ಕೂ ಮುನ್ನ ಮಂಡಳಿಯನ್ನುದ್ದೇಶಿಸಿ ಮಾತನಾಡಿದ ಅಮೆರಿಕದ ಹಂಗಾಮಿ ರಾಯಭಾರಿ ಡೊರೊಥಿ ಶಿಯಾ, ಈ ನಿರ್ಣಯವು ಅಮೆರಿಕದ ಆಪ್ತ ಮಿತ್ರ ರಾಷ್ಟ್ರವಾದ ಇಸ್ರೇಲ್‌ನ ಭದ್ರತೆ ದುರ್ಬಲಗೊಳಿಸುತ್ತದೆ. ಇದು ನೆಲದ ವಾಸ್ತವಗಳನ್ನು ಪ್ರತಿಬಿಂಬಿಸುವ ಕದನ ವಿರಾಮದ ಕುರಿತ ರಾಜತಾಂತ್ರಿಕ ಪ್ರಯತ್ನ ಮಾಡುತ್ತದೆ ಎಂದರು.

ಇನ್‌ಸ್ಟಾಗ್ರಾಮ್ ಇನ್‌ಫ್ಲುಯೆನ್ಸರ್ ಪನೋಲಿಗೆ ಮಧ್ಯಂತರ ಜಾಮೀನು



ಕೋಲ್ಕತ್ತಾ: ಆಪರೇಷನ್ ಸಿಂದೂರ್‌ಗೆ ಸಂಬಂಧಿಸಿದ ವಿಡಿಯೋದಲ್ಲಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪದ ಮೇಲೆ ಮೇ 30 ರಂದು ಬಂಧನಕ್ಕೊಳಗಾಗಿರುವ ಇನ್‌ಸ್ಟಾಗ್ರಾಮ್ ಇನ್‌ಫ್ಲುಯೆನ್ಸರ್ ಶರ್ಮಿಷ್ಠ ಪನೋಲಿಗೆ ಕೋಲ್ಕತ್ತಾ ಹೈಕೋರ್ಟ್ ಮಧ್ಯಂತರ ಜಾಮೀನು ನೀಡಿದೆ. ಇನ್‌ಸ್ಟಾಗ್ರಾಮ್ ವಿಡಿಯೋ ಕ್ಲಿಪ್‌ನಲ್ಲಿ ನಿರ್ದಿಷ್ಟ ಧರ್ಮದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಲಾಗಿದೆ ಎಂದು ವರದಿ ಯಾಗಿದೆ. ಆದಾಗ್ಯೂ ಪನೋಲಿ ವಿಡಿಯೋವನ್ನು ಡಿಲೀಟ್ ಮಾಡಿ ಮೇ 15 ರಂದು ಕ್ಷಮೆಯಾಚಿಸಿದ್ದಾರೆ.

ನಮ್ಮ ದೇಶದ ಒಂದು ವರ್ಗದ ಜನರ ಭಾವನೆಗಳಿಗೆ ನೋವುಂಟಾಗಿದೆ. ನಮಗೆ ವಾಕ್ ಸ್ವಾತಂತ್ರ್ಯವಿದೆ. ಆದರೆ ಅದರ ಅರ್ಥ ನೀವು ಇತರರ ಭಾವನೆಗಳಿಗೆ ನೋವುಂಟು ಮಾಡಬಹುದು ಎಂದಲ್ಲ. ನಮ್ಮ ದೇಶವು ವೈವಿಧ್ಯತೆಯಿಂದ ತುಂಬಿದೆ. ನಮ್ಮ ದೇಶವು ವೈವಿಧ್ಯಮಯವಾಗಿದೆ, ವಿವಿಧ ಜಾತಿ, ಧರ್ಮ ಇತ್ಯಾದಿಗಳನ್ನು ಒಳಗೊಂಡಿದೆ. ನಾವು ಜಾಗರೂಕರಾಗಿರಬೇಕು ಎಂದು ನ್ಯಾಯಾಧೀಶ ಪಾರ್ಥ ಸಾರಥಿ ಮುಖರ್ಜಿ ಅವರು ಕಳೆದ ವಿಚಾರಣೆ ವೇಳೆ ಶರ್ಮಿಷ್ಠ ಪನೋಲಿಗೆ ಎಚ್ಚರಿಸಿದರು.

ಮದುವೆಗೂ ಮುನ್ನ ಲೈಂಗಿಕ ಕ್ರಿಯೆ, ಜೋಡಿಗೆ 100 ಛಡಿಯೇಟು



ಇಂಡೋನೇಷ್ಯಾ: ಮದುವೆಗೂ ಮುನ್ನ ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದಕ್ಕಾಗಿ ಜೋಡಿಗೆ ಸಾರ್ವಜನಿಕವಾಗಿ 100 ಛಡಿಯೇಟು ಶಿಕ್ಷೆ ವಿಧಿಸಿರುವ ಘಟನೆ ಇಂಡೋನೇಷ್ಯಾದಲ್ಲಿ ನಡೆದಿದೆ. ಇಂಡೋನೇಷ್ಯಾದ ಅಚೆ ಎಂಬ ಏಕೈಕ ಪ್ರಾಂತ್ಯದಲ್ಲಿ ಷರಿಯಾ ಕಾನೂನನ್ನು ಸಕ್ರಿಯವಾಗಿ ಜಾರಿಗೊಳಿಸಲಾಗಿದೆ. ಅಲ್ಲೇ ಇದ್ದ ಸಾರ್ವಜನಿಕ ಉದ್ಯಾನದಲ್ಲಿ ಇಬ್ಬರಿಗೂ 10 ಸೆಟ್‌ಗಳಲ್ಲಿ ಬೆತ್ತದಿಂದ ಛಡಿಯೇಟು ನೀಡಲಾಯಿತು.

ಸಾಂಪ್ರದಾಯಿಕ ಪದ್ಧತಿಯ ಪ್ರಕಾರ ಮಹಿಳೆಗೆ ಒಬ್ಬ ಮಹಿಳೆ ಛಡಿಯೇಟು ನೀಡಿದರೆ, ಮುಸುಕು ಧರಿಸಿರುವ ವ್ಯಕ್ತಿ ಪುರುಷನಿಗೆ ಶಿಕ್ಷೆ ವಿಧಿಸಿದ್ದಾರೆ. ಸಹಾಯಕ್ಕಾಗಿ ವೈದ್ಯಕೀಯ ಸಿಬ್ಬಂದಿ ಜತೆಯಲ್ಲೇ ಇದ್ದರು. ಇದು ಘಟನೆಯ ತೀವ್ರತೆಯನ್ನು ಒತ್ತಿಹೇಳುತ್ತದೆ. ಹಾಗೆಯೇ ಜೂಜು ಮತ್ತು ಮದ್ಯ ಸೇವನೆಗೆ ಸಂಬಂಧಿಸಿದ ಅಪರಾಧಗಳಿಗಾಗಿ ಸ್ಥಳೀಯ ಅಧಿಕಾರಿಗಳು ಇತರೆ ಮೂವರಿಗೆ 49 ಬಾರಿ ಛಡಿಯೇಟು ನೀಡಿದ್ದಾರೆ. ಈ ಪದ್ಧತಿಯನ್ನು ಅವಮಾನಕರ ಮತ್ತು ಅಮಾನವೀಯ ಎಂದು ಬಣ್ಣಿಸುವ ಮಾನವ ಹಕ್ಕುಗಳ ಸಂಘಟನೆಗಳಿಂದ ಪದೇ ಪದೇ ಟೀಕೆಗಳು ಬಂದಿದ್ದರೂ, ಅಚೆಯಲ್ಲಿ ಸಾರ್ವಜನಿಕವಾಗಿ ಚಾಟಿಯೇಟು ಹೊಡೆಯುವುದಕ್ಕೆ ಹೆಚ್ಚಿನ ಬೆಂಬಲ ದೊರೆತಿದೆ.

ಮೈಸೂರು ಮಿತ್ರ ಶುಕ್ರವಾರ 6 ಜೂನ್ 2025

ಬೆಂಗಳೂರು ಕಾಲ್ತುಳಿತಕ್ಕೆ ರಾಜ್ಯ ಸರ್ಕಾರವೇ ಹೊಣೆ

ಸಿಎಂ, ಡಿಸಿಎಂ, ಗೃಹ ಸಚಿವರ ರಾಜೀನಾಮೆಗೆ ಬಿಜೆಪಿ ಆಗ್ರಹ

ಮಡಿಕೇರಿ, ಜೂ.5– ಆರ್‌ಸಿಬಿ ಗೆಲುವಿನ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ವಿಜಯೋತ್ಸವ ಸಂದರ್ಭ ನಡೆದ ಕಾಲ್ತುಳಿತದ ಭೀಕರ ದುರಂತಕ್ಕೆ ರಾಜ್ಯ ಸರ್ಕಾರವೇ ನೇರ ಹೊಣೆಯಾಗಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು, ಡಿಸಿಎಂ ಮತ್ತು ಗೃಹ ಸಚಿವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕೆಂದು ಕೊಡಗು ಜಿಲ್ಲಾ ಬಿಜೆಪಿ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿ, ಕರ್ನಾಟಕದ ಜನತೆ ಕನ್ನಡ ಭಾಷೆ, ಕನ್ನಡಿಗರ ಸಾಧನೆಗಳತ್ತ ಸದಾ ಕಾಲ ಅಭಿಮಾನವನ್ನು ತೋರುತ್ತಾ ಬಂದಿದ್ದಾರೆ ಅದೇ ರೀತಿ ಆರ್‌ಸಿಬಿ ಗೆಲುವಿನ ಸಂಭ್ರಮವನ್ನು ಬೆಂಗಳೂರಿನಲ್ಲಿ ಆಚರಿಸಲು ಉತ್ಸುಕರಾಗಿದ್ದರು. ಈ ಬಗ್ಗೆ ಸರ್ಕಾರ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳದೆ ನಿರ್ಲಕ್ಷ್ಯ ಮಾಡಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಐಪಿಎಲ್‌ನಲ್ಲಿ ಗೆಲುವು ಸಾಧಿಸಿದ ಆರ್‌ಸಿಬಿಯನ್ನು ಅಭಿನಂದಿಸುವುದು ರಾಜ್ಯ ಸರ್ಕಾರದ ಕರ್ತವ್ಯ. ಆದರೆ ಇಂತಹ ಅಭಿನಂದನಾ ಕಾರ್ಯಕ್ರಮಗಳು ಅತ್ಯಂತ ವ್ಯವಸ್ಥಿತವಾಗಿರಬೇಕು. ಇಲ್ಲಿ ಕಾರ್ಯಕ್ರಮವನ್ನು ಯಾವುದೇ ಪೂರ್ವ ಸಿದ್ಧತೆಗಳಿಲ್ಲದೆ ಹುಡುಗಾಟಿಕೆಯಂತೆ ನಡೆಸಿ 11 ಮಂದಿ ಪ್ರಾಣ ಕಳೆದುಕೊಂಡಿರುವುದು ನಿಜಕ್ಕೂ ದುರದೃಷ್ಟಕರ ಎಂದು ಅಭಿಪ್ರಾಯಿಸಿದರು. ಐಪಿಎಲ್ ವಿಜೇತ ಆರ್‌ಸಿಬಿಯನ್ನು ಅಭಿನಂದಿಸುವ ಕಾರ್ಯಕ್ರಮದ ಮೂಲಕ 'ರಾಜಕೀಯ ಲಾಭ' ಹೊಂದುವ ಉದ್ದೇಶದಿಂದ ಯಾವುದೇ ಪೂರ್ವ ತಯಾರಿಗಳಿಲ್ಲದೆ ಸಂಭ್ರಮಾಚರಣೆ ನಡೆಸಿದ್ದರಿಂದ ಹಲವು ಯುವಕ–ಯುವತಿಯರು ಕೊನೆಯುಸಿರು ಎಳೆಯುವಂತಾಗಿದೆ. ಈ ದುರಂತಕ್ಕೆ ರಾಜ್ಯ ಸರ್ಕಾರವೇ ನೇರ ಕಾರಣ ಎಂದು ಆರೋಪಿಸಿದರು.

ನೊಂದವರ ಪರವಾಗಿ ಬಿಜೆಪಿ ಮಾತನಾಡಿದಲ್ಲಿ ಕಾಂಗ್ರೆಸಿಗರು, 'ಬಿಜೆಪಿ ಹೆಣದ ಮೇಲೆ ರಾಜಕೀಯ' ಮಾಡುತ್ತದೆ ಎಂದು ಆರೋಪಿಸುತ್ತಾರೆ. ಇವರಿಗೆ ಪೂರ್ವ ತಯಾರಿ ಇಲ್ಲದೆ ವಿಜಯೋತ್ಸವದಿಂದ ಅಮಾಯಕರ ಪ್ರಾಣ ಹೋಗಿದೆ ಎಂದು ಅನಿಸುವುದೇ ಇಲ್ಲವೇ ಎಂದು ಪ್ರಶ್ನಿಸಿದರು. ದುರ್ಘಟನೆಯ ಹೊಣೆ ಹೊತ್ತು ಮುಖ್ಯಮಂತ್ರಿಗಳು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ಕೆಲ ದಿನಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಹತ್ಯಾ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಿಂದೂ ಕಾರ್ಯಕರ್ತರ ಗಡಿಪಾರಿನ ನಿರ್ಣಯ ಕೈಗೊಳ್ಳುತ್ತದೆ. ಇದೇ ನಿರ್ಣಯವನ್ನು ಸುಭಾಷ್ ಶೆಟ್ಟಿ ಹತ್ಯೆಯ ಸಂದರ್ಭ ಏತಕ್ಕೆ ಕೈಗೊಂಡಿಲ್ಲ ಎಂದು ಪ್ರಶ್ನಿಸಿದ ನಾಪಂಡ ರವಿ ಕಾಳಪ್ಪ ಒಂದು ಕೋಮನ್ನು ಮೆಚ್ಚಿಸುವ ಕೆಲಸದಲ್ಲಿ ನಿರತವಾಗಿರುವ ಕಾಂಗ್ರೆಸ್ ಸರ್ಕಾರದಿಂದ ರಾಜ್ಯದಲ್ಲಿಂದು ಅರಾಜಕತೆ ತಲೆ ಎತ್ತಿದೆ ಎಂದು ಹೇಳಿದರು.

ಲಾಭಕೋಸ್ಕರ ಕಾರ್ಯಕ್ರಮ: ಮಾಜಿ ಎಂಎಲ್‌ಸಿ ಸುನೀಲ್ ಸುಬ್ರಮಣಿ ಮಾತನಾಡಿ, ಅಗತ್ಯ ಪೂರ್ವ ಸಿದ್ಧತೆಗಳಿಲ್ಲದೆ ಕಾರ್ಯಕ್ರಮ ನಡೆಸುವುದು ಬೇಡವೆಂದು ಪೊಲೀಸ್ ಇಲಾಖೆ ತಿಳಿಸಿತ್ತು ರಾಜ್ಯ ಸರ್ಕಾರ ಅಭಿನಂದನಾ ಕಾರ್ಯಕ್ರಮಕ್ಕೆ ಮುಂದಾಗಿರುವುದು ಕೇವಲ, ರಾಜಕೀಯ ಲಾಭ ಪಡೆಯುವ ಪ್ರಯತ್ನವಾಗಿದೆ. ದುರ್ಘಟನೆ ಹಿನ್ನೆಲೆಯಲ್ಲಿ ಕಾರ್ಯಕ್ರಮದ ಜವಾಬ್ದಾರಿ ಹೊತ್ತ ಮುಖ್ಯಮಂತ್ರಿಗಳು, ಡಿಸಿಎಂ ಮತ್ತು ಗೃಹ ಸಚಿವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು.

ರಾಜ್ಯದ ಮುಖ್ಯಮಂತ್ರಿಗಳು ದುರ್ಬಲರಾಗಿದ್ದಾರೆ. ಕನಿಷ್ಠ ಒಂದು ವರ್ಗಾವಣೆ ಸಂದರ್ಭ ಸಾಂವಿಧಾನಿಕವಲ್ಲದ ಡಿಸಿಎಂ ಹುದ್ದೆಯಲ್ಲಿರುವವರ ಒಪ್ಪಿಗೆ ಪಡೆಯಬೇಕೆನ್ನುವ ಸ್ಥಿತಿ ಇಂದು ರಾಜ್ಯದಲ್ಲಿದೆ. ಅವರವರ ಲಾಭಕ್ಕಾಗಿ ಅಭಿನಂದನಾ ಕಾರ್ಯಕ್ರಮವನ್ನು ನಡೆಸಿದ್ದರ ಫಲವಾಗಿ ದುರಂತ ನಡೆದಿರುವುದಾಗಿ ಆರೋಪಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ ಮಾತನಾಡಿ, ಬೆಂಗಳೂರಿನಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮ ಮುಖ್ಯಮಂತ್ರಿ, ಡಿಸಿಎಂ ಪ್ರಾಯೋಜಕತ್ವದಲ್ಲಿ ನಡೆದ ಕಾರ್ಯಕ್ರಮವಾಗಿದೆ. ಅದರಲ್ಲಿ ನಡೆದ ದುರ್ಘಟನೆಯ ಸಂಪೂರ್ಣ ಹೊಣೆಯನ್ನು ಅವರೇ ಹೊರಬೇಕು ಮತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ವಕ್ತಾರರಾದ ತಳೂರು ಕಿಶೋರ್ ಕುಮಾರ್, ಬಿ.ಕೆ. ಅರುಣ್ ಕುಮಾರ್ ಮತ್ತು ಉಮೇಶ್ ಸುಬ್ರಮಣಿ ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಪರಿಸರ ಕಾಳಜಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯ



ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಮಾತನಾಡುತ್ತಿರುವುದು.

ವಿರಾಜಪೇಟೆ, ಜೂ.5– ವಿದ್ಯಾರ್ಥಿಗಳಲ್ಲಿ ಪರಿಸರ ಕಾಳಜಿ ಬೆಳೆಸಲು ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳನ್ನು ಅರಣ್ಯಗಳಿಗೆ ಕರೆದೊಯ್ದು ಪರಿಸರದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಉತ್ತಮ ಎಂದು ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಮೇರಿಯಂಡ ಸಂಕೇತ್ ಪೂವಯ್ಯ ಸಲಹೆ ನೀಡಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪಟ್ಟಣದ ಮಲೆತಿರಿಕೆ ಬೆಟ್ಟದ ಶ್ರೀ ಶಾಂತಪ್ಪ ಭಕ್ತಜನ ಮಂಡಳಿ ಹಾಗೂ ಪ್ರತಿ ವಿದ್ಯಾ ಸಂಸ್ಥೆಯ ಆಶ್ರಯದಲ್ಲಿ ಪ್ರತಿ ಶಾಲಾ ಆವರಣದಲ್ಲಿ ನಡೆದ ಗಿಡ ನೆಡುವ ಮತ್ತು ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಗಿಡಕ್ಕೆ ನೀರು ಎರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪರಿಸರ ದಿನಾಚರಣೆ ಅಂಗವಾಗಿ ಹಲವು ಕಡೆಗಳಲ್ಲಿ ಕೋಟ್ಯಾಂತರ ಗಿಡಗಳನ್ನು ನೆಡುವ ಕಾರ್ಯಕ್ರಮ ನಡೆಸುವುದು ಸಹಜ. ಆದರೆ ಅರಣ್ಯಗಳಲ್ಲಿ ಹಣ್ಣು ಬಿಡುವ ಗಿಡಗಳನ್ನು ನೆಡುವುದರಿಂದ ಪ್ರಾಣಿಗಳಿಗೆ ಮತ್ತು ವನ್ಯಜೀವಿಗಳಿಗೆ ಅನುಕೂಲವಾಗುತ್ತದೆ. ಮತ್ತು ಅರಣ್ಯದಲ್ಲಿ ಗಿಡ ನೆಡುವುದರ ಬಗ್ಗೆ ಅರಣ್ಯ ಇಲಾಖೆ ಕನಿಷ್ಠ 5 ವರ್ಷಗಳಿಗೊಮ್ಮೆಯಾದರೂ ಸರ್ಕಾರಕ್ಕೆ ವರದಿ ನೀಡುವಂತಾಗಬೇಕು ಎಂದರು.

ಪ್ರತಿ ವಿದ್ಯಾಸಂಸ್ಥೆ ವ್ಯವಸ್ಥಾಪಕರಾದ ಮಾದಂಡ ತಿಮ್ಮಯ್ಯ ಅವರು ರಗ್ಬಿ ಕ್ರೀಡೆಯಲ್ಲಿ ದೇಶದಲ್ಲಿಯೇ ಹೆಸರು ಮಾಡಿದ್ದಾರೆ. ಈಗ ತನ್ನ ತಮ್ಮ ನೆರಳಲ್ಲಿ ವಿದ್ಯಾಸಂಸ್ಥೆ ಮೂಲಕ ಸಾವಿರಾರು ವಿದ್ಯಾರ್ಥಿಗಳಿಗೆ ಕಲಿಕೆಯೊಂದಿಗೆ ಕ್ರೀಡೆ ಮತ್ತು ಸಾಹಿತ್ಯದಲ್ಲೂ ಹೆಸರುಗಳಿಸುವಂತ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಸಭೆಯ ಅಧ್ಯಕ್ಷತೆಯಲ್ಲಿ ಚಿತ್ರಕಲಾ ಶಿಕ್ಷಕರಾದ ಬಿ.ಆರ್.ಸತೀಶ್ ಪರಿಸರದ ಬಗ್ಗೆ ಚಿತ್ರ ಬಿಡಿಸಿದರು. ಅಧ್ಯಕ್ಷತೆಯನ್ನು ಪ್ರತಿ ವಿದ್ಯಾಸಂಸ್ಥೆಯ ವ್ಯವಸ್ಥಾಪಕ ಮಾದಂಡ ತಿಮ್ಮಯ್ಯ ವಹಿಸಿದ್ದರು.

ವೇದಿಕೆಯಲ್ಲಿ ಪ್ರಾಂಶುಪಾಲರಾದ ಸುಷ್ಮ ತಿಮ್ಮಯ್ಯ, ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಕರಾದ ಡೈಸಿ, ಶನೀಶ್ವರ ಭಕ್ತಜನ ಮಂಡಳಿ ಅಧ್ಯಕ್ಷ ಯುವರಾಜ್ ಕೃಷ್ಣ, ಸದಸ್ಯ ವಿಘ್ನೇಶ್ ಹಾಗೂ ಶಾಲಾ ಶಿಕ್ಷಕ ವೃಂದ ಮತ್ತಿತರರು ಹಾಜರಿದ್ದರು.

ಕೊಡಗಿಗಾಗಿ ಚೆಸ್ಕಾಂ ಪ್ರತ್ಯೇಕ ಸಹಾಯವಾಣಿ

ಮಡಿಕೇರಿ, ಜೂ.5– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ(ಸೆಸ್ಕ್)ವು ವಿದ್ಯುತ್ ಸಂಬಂಧಿತ ಕುಂದು–ಕೊರತೆಗಾಗಿ ಮಡಿಕೇರಿ ವಿಭಾಗಕ್ಕೆ ಪ್ರತ್ಯೇಕ ಸಹಾಯವಾಣಿ ಕಲ್ಪಿಸಿದೆ.

ಗ್ರಾಹಕರು ಇನ್ನು ಮುಂದೆ 1800–599–0061ಗೆ ಕರೆ ಮಾಡಿ ತಮ್ಮ ದೂರುಗಳ ಸಲ್ಲಿಸಬಹುದಾಗಿದೆ. ಇತ್ತೀಚಿಗಿನ ಭಾರೀ ಮಳೆ ಹಾಗೂ ಗಾಳಿಯಿಂದಾಗಿ ಒಟ್ಟು 1442 ವಿದ್ಯುತ್ ಕಂಬಗಳು, 11 ಟ್ರಾನ್ಸ್‌ಫಾರ್ಮರ್‌ಗಳು ಹಾಗೂ 13.105 ಕಿಲೋ ಮೀಟರ್ ಉದ್ದದ ವಿದ್ಯುತ್ ಲೈನ್ ಹಾಳಾಗಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಜೂ.11 ರಂದು ಲೋಕಾಯುಕ್ತದಿಂದ ದೂರು ಅರ್ಜಿ ಸ್ವೀಕಾರ

ಮಡಿಕೇರಿ, ಜೂ.5– ಕರ್ನಾಟಕ ಲೋಕಾಯುಕ್ತ, ಕೊಡಗು ಜಿಲ್ಲೆ, ಮಡಿಕೇರಿಯ ಲೋಕಾಯುಕ್ತ ಅಧಿಕಾರಿಗಳು ಜೂ.11 ರಂದು ಬೆಳಗ್ಗೆ 11 ಗಂಟೆಯಿಂದ 1 ಗಂಟೆಯವರೆಗೆ ಮಡಿಕೇರಿ ತಾಲೂಕು ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಲೋಕಾಯುಕ್ತ ಕಾಯಿದೆಯಡಿ ದೂರು ಅರ್ಜಿ ವಿಚಾರಣೆ ಮಾಡಲಿದ್ದಾರೆ. ಭರ್ತಿ ಮಾಡಿದ ಮತ್ತು ನೋಟರಿಯಿಂದ ಅಫಿಡವಿಟ್ ಮಾಡಿಸಿದ ಅರ್ಜಿಗಳನ್ನು ಸ್ವೀಕರಿಸಲಾಗುವುದು.

ಸರ್ಕಾರಿ ಕಚೇರಿಗಳಲ್ಲಿ ಅಧಿಕೃತ ಕೆಲಸಗಳಲ್ಲಿ ವಿಳಂಬ ಹಾಗೂ ಇನ್ನಿತರೆ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ/ ನೌಕರರ ವಿರುದ್ಧ ಸಾರ್ವಜನಿಕರು ದೂರುಗಳನ್ನು ನಿಗದಿತ ಪತ್ರದಲ್ಲಿ ನೀಡಬಹುದಾಗಿದೆ. ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಕೋರಿದೆ. ಹೆಚ್ಚಿನ ವಿವರಗಳಿಗೆ ಮಡಿಕೇರಿ ಲೋಕಾಯುಕ್ತ ಪೊಲೀಸ್ ಕಚೇರಿ, ಗೌಳಿಬೀದಿ ಮಡಿಕೇರಿ ದೂ.ಸಂ.08272–295297 ಅನ್ನು ಸಂಪರ್ಕಿಸಬಹುದು ಎಂದು ಮಡಿಕೇರಿ ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ತಿಳಿಸಿದ್ದಾರೆ.

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಬೆಂಗಳೂರು ಕಾಲ್ತುಳಿತದಲ್ಲಿ ಕೆ.ಆರ್.ಪೇಟೆ ಯುವಕ ಸಾವು

ಪೋಷಕರ ಆಕ್ರಂದನದ ನಡುವೆ ಹುಟ್ಟೂರಲ್ಲಿ ಅಂತ್ಯಕ್ರಿಯೆ

ಸಾವಿರಾರು ಮಂದಿ ಭಾಗಿ, ಶಾಸಕರು ಗಣ್ಯರಿಂದ ಅಂತಿಮ ದರ್ಶನ



ಪೂರ್ಣಚಂದ್ರ

ಕೆ.ಆರ್.ಪೇಟೆ, ಜೂ.5– ಬೆಂಗಳೂರಿನಲ್ಲಿ ಆರ್‌ಸಿಬಿ ವಿಜಯೋತ್ಸವದ ವೇಳೆ ನಡೆದ ಕಾಲ್ತುಳಿತದಲ್ಲಿ ಸಾವನ್ನಪ್ಪಿದ ತಾಲೂಕಿನ ರಾಯಸಮುದ್ರ ಗ್ರಾಮದ ಪೂರ್ಣಚಂದ್ರ ಅವರ ಅಂತ್ಯಕ್ರಿಯೆ ಪೋಷಕರ ಆಕ್ರಂದನ ನಡುವೆ ಗ್ರಾಮದಲ್ಲಿ ಗುರುವಾರ ಮಧ್ಯಾಹ್ನ ನಡೆಯಿತು.

ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ 18 ವರ್ಷಗಳ ಬಳಿಕ ಚಾಂಪಿಯನ್ ಆದ ಆರ್‌ಸಿಬಿ ತಂಡದ ಆಟಗಾರರನ್ನು ನೋಡಲು ಹಾಗೂ ವಿಜಯೋತ್ಸವ ಸಂಭ್ರಮವನ್ನು ಕಣ್ತುಂಬಿಕೊಳ್ಳಲು ಹೋಗಿದ್ದ ವೇಳೆ ಉಂಟಾದ ಕಾಲ್ತುಳಿತದಲ್ಲಿ ರಾಯಸಮುದ್ರ ಗ್ರಾಮದ ಶಿಕ್ಷಕ ಆರ್.ಬಿ.ಚಂದ್ರು ಮತ್ತು ಕಾಂತಾಮಣಿ ದಂಪತಿ ಪುತ್ರ ಪೂರ್ಣಚಂದ್ರ(26) ಮೃತಪಟ್ಟಿದ್ದರು.

ಮೃತದೇಹವನ್ನು ಕ್ರಿಕೆಟ್ ಸಂಸ್ಥೆಯ ವಿಶೇಷ ವಾಹನದಲ್ಲಿ ಗುರುವಾರ ಮುಂಜಾನೆ 4 ಗಂಟೆಗೆ ರಾಯಸಮುದ್ರ ಗ್ರಾಮಕ್ಕೆ ಪೊಲೀಸ್ ರಕ್ಷಣೆಯಲ್ಲಿ ತರಲಾಯಿತು. ಗುರುವಾರ ಮಧ್ಯಾಹ್ನದವರೆಗೆ ಅಂತಿಮ ದರ್ಶನ ಪಡೆಯಲು ಸಾರ್ವಜನಿಕರಿಗೆ ಹಾಗೂ ಸಂಬಂಧಿಕರಿಗೆ ಅವಕಾಶ ಕಲ್ಪಿಸಲಾಗಿತ್ತು. ಮಧ್ಯಾಹ್ನದ ನಂತರ ಗ್ರಾಮದಲ್ಲಿ ಪೋಷಕರು ಮತ್ತು ಬಂಧುಗಳು ಆಕ್ರಂದನದ ನಡುವೆ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಪೂರ್ಣಚಂದ್ರ ಕ್ರಿಕೆಟ್ ಪ್ರೇಮಿಯಾಗಿದ್ದ, ಐಪಿಎಲ್ ಪಂದ್ಯಾವಳಿಗಳು ಬೆಂಗಳೂರಿನಲ್ಲಿ ನಡೆದ ವೇಳೆ ಹೋಗಿ ನೋಡಿಕೊಂಡು ಬರುತ್ತಿದ್ದ. ಅದರಂತೆ ಮೊನ್ನೆ ಅಹಮದಾಬಾದ್‌ನಲ್ಲಿ ನಡೆದ ಐಪಿಎಲ್ ಫೈನಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ 6 ರನ್ನುಗಳ ರೋಚಕ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಸಂತಸ ವ್ಯಕ್ತಪಡಿಸಿ ಗ್ರಾಮದಲ್ಲಿ ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದ್ದ.

ಬುಧವಾರ ಸಂಜೆ ಕ್ರಿಕೆಟ್ ತಂಡಕ್ಕೆ ಬೆಂಗಳೂರು ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭಿನಂದನಾ ಕಾರ್ಯಕ್ರಮ ಇರುವುದನ್ನು ನೋಡಲು ಮೈಸೂರಿನ ಸ್ನೇಹಿತರೊಂದಿಗೆ ಹೋಗಿದ್ದ. ಅಭಿನಂದನಾ ಸಮಾರಂಭಕ್ಕೂ ಮುನ್ನ ನಡೆದ ವಿಜಯೋತ್ಸವದ ವೇಳೆ ಅಸಂಖ್ಯಾತ ಅಭಿಮಾನಿಗಳು ಸಾಗರೋಪಾದಿಯಲ್ಲಿ ಭಾಗವಹಿಸಿದ್ದರಿಂದ ಉಂಟಾದ ಕಾಲ್ತುಳಿತದಲ್ಲಿ ಈತ ಸಾವನ್ನಪ್ಪಿದ್ದ.

ಕೃಷಿ ಸಚಿವರಿಂದ ಅಂತಿಮ ದರ್ಶನ: ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಬೆಂಗಳೂರಿನ ಆಸ್ಪತ್ರೆಯಲ್ಲಿ ಪೂರ್ಣಚಂದ್ರ ಅವರ ಮೃತದೇಹದ ಅಂತಿಮ ದರ್ಶನ ಪಡೆದು, ಪಾರ್ಥಿವ ಶರೀರವನ್ನು ಸ್ವಗ್ರಾಮ ರಾಯಸಮುದ್ರ ಗ್ರಾಮಕ್ಕೆ ತೆಗೆದುಕೊಂಡು ಹೋಗಲು ಬೇಕಾದ ವ್ಯವಸ್ಥೆ ಕಲ್ಪಿಸಿಕೊಡಲು ಅಧಿಕಾರಿಗಳ ಜೊತೆ ತಾವೇ ಮುಂದೆ ನಿಂತು ವಿಶೇಷ ವಾಹನದ ವ್ಯವಸ್ಥೆ ಮಾಡಿಸಿದರು.

ಅಂತ್ಯಸಂಸ್ಕಾರದಲ್ಲಿ ಶಾಸಕ ಹೆಚ್.ಟಿ. ಮಂಜು, ತಹಸೀಲ್ದಾರ್ ಎಸ್.ಯು.ಅಶೋಕ್, ಸಮಾಜ ಸೇವಕರಾದ ಆರ್‌ಟಿಓ ಮಲ್ಲಿಕಾರ್ಜುನ್, ಮಿತ್ರ ಫೌಂಡೇಷನ್ ಅಧ್ಯಕ್ಷ ವಿಜಯ್‌ರಾಮೇಗೌಡ, ಮನ್‌ಮುಲ್ ನಿರ್ದೇಶಕರಾದ ಡಾಲು ರವಿ, ಎಂ.ಬಿ.ಹರೀಶ್, ತಾಲೂಕು ವೀರಶೈವ ಲಿಂಗಾಯಿತ ಮಹಾಸಭಾ ಅಧ್ಯಕ್ಷ ಸುಜೇಂದ್ರಕುಮಾರ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಿ ಸಂತಾಪ ಸೂಚಿಸಿದರು. ಅಂತ್ಯಸಂಸ್ಕಾರದಲ್ಲಿ ಆರ್‌ಸಿಬಿ. ಅಭಿಮಾನಿಗಳು ತಾಲೂಕಿನ ವಿವಿಧ ಭಾಗಗಳಿಂದ ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿ ಅಂತಿಮ ದರ್ಶನ ಪಡೆದರು.



ಪೂರ್ಣಚಂದ್ರ ಅವರ ಅಂತಿಮ ದರ್ಶನವನ್ನು ಹಲವು ಮುಖಂಡರು ಮತ್ತು ಗ್ರಾಮಸ್ಥರು ಪಡೆದರು.

ಬೈಕ್‌ಗೆ ಅಡ್ಡ ಬಂದ ನಾಯಿ: ಸವಾರ ಸಾವು



ಭಾರತೀನಗರ, ಜೂ.5– ಬೈಕ್‌ಗೆ ನಾಯಿ ಅಡ್ಡ ಬಂದ ಹಿನ್ನೆಲೆಯಲ್ಲಿ ನಿಯಂತ್ರಣ ತಪ್ಪಿ ಬಿದ್ದು, ಬೈಕ್ ಸವಾರ ಸಾವನ್ನಪ್ಪಿರುವ ಘಟನೆ ಆಲಭುಜನಹಳ್ಳಿ ಗ್ರಾಮದಲ್ಲಿ ಜರುಗಿದೆ.

ಕಳ್ಳಿಮೆಳೆದೊಡ್ಡಿ ಗ್ರಾಮದ ಕೆಂಪಮ್ಮ ಮತ್ತು ಮರಿಲಿಂಗೇಗೌಡರ ಪುತ್ರ ಸ್ವಾಮಿ(42) ಎಂಬುವರೇ ಮೃತ ದುರ್ದೈವಿ. ಇವರು ತಮ್ಮ ಸ್ವಗ್ರಾಮವಾದ ಕಳ್ಳಿಮೆಳೆದೊಡ್ಡಿ ಗ್ರಾಮದಿಂದ ಕಾರ್ಯನಿಮಿತ್ತ ಆಲಭುಜನಹಳ್ಳಿ ಮಾರ್ಗವಾಗಿ ಕೆ.ಎಂ.ದೊಡ್ಡಿಗೆ ಬರುತ್ತಿದ್ದಾಗ ನಾಯಿ ಬೈಕ್‌ಗೆ ಅಡ್ಡ ಬಂದ ಪರಿಣಾಮ ನಿಯಂತ್ರಣ ತಪ್ಪಿ ಕೆಳಗೆ ಬಿದ್ದಿದ್ದಾರೆ. ಗಂಭೀರವಾಗಿ ಗಾಯಗೊಂಡ ಈತ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಕೆ.ಎಂ.ದೊಡ್ಡಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಂಗಳೂರು ಕಾಲ್ತುಳಿತ: ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ

ರಾಜ್ಯ ಬಿಜೆಪಿ ವಕ್ತಾರ ಅಶೋಕ್ ವಾಗ್ದಾಳಿ

ಮಂಡ್ಯ: ಬೆಂಗಳೂರಿನಲ್ಲಿ ಬುಧವಾರ ನಡೆದ ವಿಜಯೋತ್ಸವದ ದುರಂತ ರಾಜ್ಯದಲ್ಲಿ ಕಾಂಗ್ರೆಸ್‌ನ ಆಡಳಿತ ವ್ಯವಸ್ಥೆ, ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಸಾಕ್ಷಿಯಾಗಿದೆ ಎಂದು ಬಿಜೆಪಿ ರಾಜ್ಯ ವಕ್ತಾರ ಅಶೋಕ್ ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತುರಾತುರಿಯಲ್ಲಿ 3 ಭಾಗಗಳಲ್ಲಿ ಆಯೋಜನೆ ಮಾಡಿದ ಕಾರ್ಯಕ್ರಮ, ರಾಜ್ಯದಲ್ಲಿ ನಡೆಯುತ್ತಿರುವ ಹತ್ಯೆಗಳು, ಅಪರಾಧಗಳು, ಮತಗಳ ನಡುವಿನ ಕಲಹಗಳು ಕಾಂಗ್ರೆಸ್ ಸರ್ಕಾರದ ಕಾನೂನು ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದರು.


ಗೃಹ ಸಚಿವ ಜಿ.ಪರಮೇಶ್ವರ್ ಅವರ ಹಿರಿತನಕ್ಕೆ ತಕ್ಕ ಗೌರವವನ್ನು ಕಾಂಗ್ರೆಸ್ ಸರ್ಕಾರ ನೀಡುತ್ತಿಲ್ಲ, ಕಾಂಗ್ರೆಸ್‌ನಲ್ಲಿ ಜಿಲ್ಲೆಗೊಬ್ಬರಂತೆ ಗೃಹ ಮಂತ್ರಿಗಳಿದ್ದಾರೆ. ಜಿಲ್ಲಾ ಉಸ್ತುವಾರಿ ಮಂತ್ರಿಗಳೇ ಗೃಹಮಂತ್ರಿಗಳಂತೆ ವರ್ತಿಸುತ್ತಿದ್ದಾರೆ. ಆಯಾ ಜಿಲ್ಲೆಗಳಲ್ಲಿ ನಡೆಯುವ ದುರಂತಗಳನ್ನು ಆಯಾ ಜಿಲ್ಲಾ ಉಸ್ತುವಾರಿ ಮಂತ್ರಿಗಳು ನಿಯಂತ್ರಿಸಲು ಮುಂದಾಗಿದ್ದು, ರಾಜ್ಯದಲ್ಲಿ ಗೃಹ ಮಂತ್ರಿಗಳು ಇದ್ದಾರೆಯೇ ಎಂದು ಪ್ರಶ್ನಿಸಿದರು.

ಕೇಂದ್ರ ಸರ್ಕಾರದಿಂದ ಜಲಜೀವನ್ ಮಿಷನ್ ಯೋಜನೆಯಡಿ 799 ಕೋಟಿ ರೂ, 869 ಕೋಟಿ ರೂ ಎರಡು ಹಂತದಲ್ಲಿ ಜಿಲ್ಲೆಗೆ ಅಭಿವೃದ್ಧಿ ಕಾರ್ಯ ನಡೆದಿದ್ದು, ಜಿಲ್ಲೆ ಶಾಸಕರು ಹಾಗೂ ಕೃಷಿ ಮಂತ್ರಿಗಳು ಏನು ಕೊಡುಗೆ ನೀಡಿದ್ದಾರೆ ಎಂಬುದನ್ನು ಬಹಿರಂಗ ಪಡಿಸುವಂತೆ ಆಗ್ರಹಿಸಿದ ಅವರು, ಗ್ಯಾರೆಂಟಿ ಹೆಸರಿನಲ್ಲಿ ಅಗತ್ಯಕ್ಕಿಂತ ಹೆಚ್ಚು ಹೊರೆ ಹೊತ್ತ ಸರ್ಕಾರ ಅಭಿವೃದ್ಧಿ ನೀಡುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದರು.

ಬುಧವಾರ ನಡೆದ ದುರಂತದ ನೈತಿಕ ಜವಾಬ್ದಾರಿ ಹೊತ್ತು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಗೃಹ ಮಂತ್ರಿಗಳು ರಾಜೀನಾಮೆ ನೀಡಬೇಕು. ಅಧಿಕಾರ ಸಹಿತ ನ್ಯಾಯಾಂಗ ಸಮಿತಿ ರಚಿಸಿ ದುರಂತದ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಗೋಷ್ಠಿಯಲ್ಲಿ ಬಿಜೆಪಿ ರೈತ ಕಾರ್ಯದರ್ಶಿ ಅಶೋಕ್, ನಗರ ಮಂಡಳಿ ಅಧ್ಯಕ್ಷ ವಸಂತಕುಮಾರ್, ಜಿಲ್ಲಾವಕ್ತಾರ ಸಿ.ಟಿ.ಮಂಜುನಾಥ್, ಮಾಧ್ಯಮ ವಕ್ತಾರ ನಾಗಾನಂದ ಇದ್ದರು.

ಜೂ.7ರಂದು ನಾಲ್ವಡಿ ಒಡೆಯರ್ ಜನ್ಮದಿನಾಚರಣೆ



ಮಂಡ್ಯ: ದಲಿತ ಸಾಹಿತ್ಯ ಪರಿಷತ್ ವತಿಯಿಂದ ಪರಿಷತ್‌ನ ಜಿಲ್ಲಾ ಘಟಕ ಉದ್ಘಾಟನೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನಾಚರಣೆ ಹಾಗೂ ರಾಜ್ಯ ಮಟ್ಟದ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭವನ್ನು ಜೂ.7ರ ಬೆಳಗ್ಗೆ 10.30ಕ್ಕೆ ನಗರದ ಕೆ.ವಿ.ಶಂಕರಗೌಡ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಪರಿಷತ್ ಅಧ್ಯಕ್ಷ ಹುರುಗಲವಾಡಿ ರಾಮಯ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಕನ್ನಡ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಉದ್ಘಾಟಿಸಲಿದ್ದು, ದಸಂಸ ಹಿರಿಯ ಮುಖಂಡ ಬಿ.ಎಸ್.ಚಂದ್ರಶೇಖರನ್ ಅಧ್ಯಕ್ಷತೆ ವಹಿಸುವರು ಎಂದರು.

ವಿವಿಧ ರಾಜ್ಯ ಪ್ರಶಸ್ತಿ ಪಡೆದ ಸಾಧಕರಾದ ಮಾಜಿ ಶಾಸಕಿ ಮಲ್ಲಾಜಮ್ಮ, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್ ಗೌಡ, ಹಿರಿಯ ಪತ್ರಕರ್ತ ರಾಮದೇವರಾಕೆ, ಹುರುಗಲವಾಡಿ ರಾಮಯ್ಯ, ಎನ್.ನಾಗರಾಜು, ಮಂಜುಳ ಆಲದಹಳ್ಳಿ ಅವರುಗಳನ್ನು, ರಂಗತಜ್ಞ, ನಿವೃತ್ತ ಪ್ರಾಧ್ಯಾಪಕ ಡಾ.ರಾಜಪ್ಪ ದಳವಾಯಿ ಅವರನ್ನು ಸನ್ಮಾನಿಸಲಿದ್ದು, ಸನ್ಮಾನಿತರ ಕುರಿತು ಮಾತನಾಡುವರು. ದಸಂಸ ಹಿರಿಯ ಮುಖಂಡ, ನಿವೃತ್ತ ಪ್ರಾಂಶುಪಾಲ ಪ್ರೊ.ಹುಲ್ಕೆರೆ ಮಹದೇವ್ ಪ್ರಾಸ್ತಾವಿಕ ನುಡಿಗಳನ್ನಾಡುವರು.

ಪ್ರಸಕ್ತ ವರ್ಷವೇ ಚಾ.ನಗರದಲ್ಲಿ ಕಾನೂನು ಕಾಲೇಜು ಆರಂಭ



ಚಾಮರಾಜನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಶಾಸಕ ಸಿ. ಪುಟ್ಟರಂಗಶೆಟ್ಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವುದು.

ಚಾಮರಾಜನಗರ, ಜೂ.5– ನಗರದಲ್ಲಿ ಕಾನೂನು ಕಾಲೇಜು ಆರಂಭಕ್ಕೆ ಅನುಮೋದನೆ ದೊರೆಕಿದ್ದು, ಪ್ರಸಕ್ತ ವರ್ಷದಿಂದಲೇ ಕಾಲೇಜು ಆರಂಭವಾಗಲಿದೆ ಎಂದು ಎಂಎಸ್‌ಐಎಲ್ ಅಧ್ಯಕ್ಷರೂ ಆದ ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದ್ದಾರೆ.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಜನರ ಬಹುದಿನಗಳ ಕನಸಾಗಿದ್ದ ಕಾನೂನು ಕಾಲೇಜು ಆರಂಭಕ್ಕೆ ಈಗಾಗಲೇ ಅನುಮೋದನೆ ನೀಡಲಾಗಿದೆ. ಇದಕ್ಕೆ ಭಾರತೀಯ ವಕೀಲರ ಪರಿಷತ್ ಅನುಮತಿ ನೀಡಿದೆ. ಮಾಜಿ ಸಂಸದ ದಿ.ಆರ್. ಧ್ರುವನಾರಾಯಣ ಹಾಗೂ ನನ್ನ ಹೋರಾಟದ ಫಲವಾಗಿ ಕಾನೂನು ಕಾಲೇಜು ಆರಂಭವಾಗಿದೆ ಎಂದರು.

2017–18ನೇ ಸಾಲಿನಲ್ಲಿ ಚಾಮರಾಜನಗರಕ್ಕೆ ಕಾನೂನು ಕಾಲೇಜು ಮಂಜೂರಾಗಿತ್ತು. ಆದರೆ, ಇಲ್ಲಿ ಮೂಲ ಸೌಕರ್ಯಗಳ ಕೊರತೆಯಿಂದಾಗಿ ಕಾಲೇಜು ಆರಂಭಕ್ಕೆ ತಡೆಯಾಯಿತು. ಈಗಾಗಲೇ ಎಂಎಸ್‌ಐಎಲ್ ವತಿಯಿಂದ 13.50ಲಕ್ಷ ವೆಚ್ಚದ ಪೀಠೋಪಕರಣಗಳನ್ನು ಕೊಡಿಸಲಾಗಿದ್ದು ಜಿಲ್ಲೆಯ ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಳ್ಳಬೇಕು. ಅಲ್ಲದೇ ಚಾಮರಾಜನಗರ ತಾಲೂಕು ಕಸಬಾ ಹೋಬಳಿಯ ಯಡಪುರ ಗ್ರಾಮದ ಸ.ನಂ. 112ರಲ್ಲಿ 4 ಎಕರೆ ಜಮೀನನ್ನು ಸರ್ಕಾರಿ ಕಾನೂನು ಕಾಲೇಜು ನಿರ್ಮಾಣಕ್ಕೆ ಗುರುತಿಸಲಾಗಿದ್ದು ಮುಂದಿನ ದಿನಗಳಲ್ಲಿ ಅನುದಾನ ಬಿಡುಗಡೆ ಮಾಡಿಸಿ, ಕಾಲೇಜು ಕಟ್ಟಡ ನಿರ್ಮಿಸಲು ಕ್ರಮ ವಹಿಸಲಾಗುವುದು ಎಂದರು.

ನಂತರ ಕಾಲೇಜಿನ ಪ್ರಾಂಶುಪಾಲರಾದ ಕೆ.ಎಸ್. ಲಲಿತಾ ಮಾತನಾಡಿ, ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಕಾಲೇಜು ಆರಂಭವಾಗಲಿದೆ. 60 ವಿದ್ಯಾರ್ಥಿಗಳಿಗೆ ದಾಖಲಾತಿಗೆ ಅವಕಾಶವಿದ್ದು ಮೆರಿಟ್ ಆಧಾರದ ಮೇಲೆ ದಾಖಲು ಮಾಡಿಕೊಳ್ಳಲಾಗುವುದು. ಈಗಾಗಲೇ ಕಾಲೇಜಿನಲ್ಲಿ ಐವರು ಪ್ರಾಧ್ಯಾಪಕರಿದ್ದು ಕಾಲೇಜಿನಲ್ಲಿ ಪೀಠೋಪಕರಣ, ಶೌಚಾಲಯ ಎಲ್ಲಾ ವ್ಯವಸ್ಥೆ ಮಾಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಚುಡಾಧ್ಯಕ್ಷ ಮಹಮ್ಮದ್ ಅಸ್ಗರ್, ನಗರಸಭೆ ನಾಮನಿರ್ದೇಶಿತ ಸದಸ್ಯ ಸ್ವಾಮಿ, ಮುಖಂಡರಾದ ಎಸ್ಪಿಕೆ ಉಮೇಶ್, ನಲ್ಲೂರು ಸೋಮೇಶ್ವರ್, ಬಿ.ಕೆ. ರವಿಕುಮಾರ್ ಹಾಜರಿದ್ದರು.

ಚಾ.ನಗರದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮ ದಿನಾಚರಣೆ



ಪ್ರವಾಸಿ ಮಂದಿರ ಆವರಣದಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಲಾಯಿತು.

ಚಾಮರಾಜನಗರ, ಜೂ.5– ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಪ್ರವಾಸಿ ಮಂದಿರದ ಆವರಣದಲ್ಲಿರುವ ಮೈಸೂರು ಸಂಸ್ಥಾನದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಪುಷ್ಪ ಅರ್ಪಿಸುವ ಮೂಲಕ ಜನ್ಮದಿನ ಹಾಗೂ ನಾಲ್ವಡಿ ಸಂಭ್ರಮ ಅಭಿಯಾನ ಉದ್ಘಾಟಿಸಲಾಯಿತು.

ಉದ್ಘಾಟನೆಯನ್ನು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ಮಹಮ್ಮದ್ ಅಸ್ಗರ್ ಉದ್ಘಾಟಿಸಿ ಮೈಸೂರು ಮತ್ತು ಚಾಮರಾಜನಗರ, ಮಂಡ್ಯ, ಹಾಸನ, ಬೆಂಗಳೂರು ಹಲವು ಜಿಲ್ಲೆಗಳು ಸೇರಿದಂತೆ ಮೈಸೂರು ಮಹಾರಾಜರ ಋಣಭಾರದಲ್ಲಿ ಇದ್ದೇವೆ. ಮೈಸೂರು ಪ್ರಾಂತ್ಯ ಅಭಿವೃದ್ಧಿಯಾಗಲು ಮಹಾರಾಜರ ದೂರದೃಷ್ಟಿ ಆಡಳಿತವೇ ಕಾರಣ. ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಕಾರ್ಯಕ್ರಮವನ್ನು ರೂಪಿಸಿ ಅವರ ಸೇವೆಯನ್ನು ಸ್ಮರಿಸಿಕೊಳ್ಳುವ ಅವಕಾಶ ನೀಡಿದ ಸರ್ವರಿಗೂ ಧನ್ಯವಾದಗಳು ಜಯಂತಿಯನ್ನು ರಾಜ್ಯದ ಎಲ್ಲೆಡೆ ಆಚರಿಸುವ ಮೂಲಕ ಗೌರವ ಸಲ್ಲಿಸುವ ಕಾರ್ಯಕ್ರಮ ರೂಪಿಸಬೇಕು ಎಂದರು.

ಸಭೆಯ ಅಧ್ಯಕ್ಷತೆಯನ್ನು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ್ ಎನ್ ಋಗ್ವೇದಿ ವಹಿಸಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರು. ಅವರ ಜನ್ಮದಿನ ನಾಡಿನ ಸಂಭ್ರಮದ ದಿನವಾಗಬೇಕು. ಕಲೆ ಸಾಹಿತ್ಯ ಸಂಗೀತ ನೃತ್ಯ, ವಾಸ್ತುಶಿಲ್ಪ, ಕಟ್ಟಡಗಳು, ನೀರಾವರಿ,ಶಿಕ್ಷಣ, ಕೈಗಾರಿಕೆ ಗುಡಿ ಕೈಗಾರಿಕೆ, ಮಹಿಳಾ ಶಿಕ್ಷಣ, ಪ್ರಜಾಪ್ರಭುತ್ವ, ಸಾಹಿತ್ಯ, ಸ್ವಾತಂತ್ರ, ಸಮಾನತೆ,ಭ್ರಾತೃತ್ವ, ಅಭಿವೃದ್ಧಿ, ರಸ್ತೆ,ಕೆರೆ,ಕಾಲುವೆ, ಸೇತುವೆ, ಪ್ರತಿ ಕ್ಷೇತ್ರದ ಅಭಿವೃದ್ಧಿಯಲ್ಲಿಯೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯ ಆಡಳಿತ ನಮ್ಮೆಲ್ಲರಿಗೂ ಮಾರ್ಗದರ್ಶನವಾಗಿದೆ.ಇಡೀ ಜೀವನವನ್ನು ಸಂಸ್ಥಾನದ ಅಭಿವೃದ್ಧಿಗೆ ನೀಡಿ ಮೈಸೂರು ನಗರವನ್ನು ವಿಶ್ವ ಪ್ರಸಿದ್ಧಿಯನ್ನಾಗಿ ಮಾಡಿದ್ದಾರೆ. ಚಾಮರಾಜನಗರ ಮೈಸೂರು ಸಂಸ್ಥಾನದ ಅವಿಭಾಜ್ಯ ಅಂಗವಾಗಿದ್ದು ಮಹಾರಾಜರ ರಾಜಮನೆತನದ ಅವಿನಾಭಾವ ಸಂಬಂಧ ಇದೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸೌಜನ್ಯ, ಪ್ರಜಾವಾತ್ಸಲ್ಯ, ಪ್ರೀತಿ, ಕರುಣೆ, ವಿಶ್ವಾಸ, ದಕ್ಷ ಆಡಳಿತ, ಪ್ರಗತಿಪರ, ಉದಾರ ತತ್ವಗಳ ಪೋಷಕರಾಗಿ ಸಾಹಿತ್ಯ ಸಂಸ್ಕೃತಿಯ ಪುರುಷರಾಗಿ ವಿಶ್ವದಲ್ಲೇ ಮಾದರಿಯಾದ ಆಡಳಿತವನ್ನು ನಡೆಸಿದ ನಾಲ್ವಡಿ ಮರೆಯಲು ಸಾಧ್ಯವಿಲ್ಲ. ಚಾಮರಾಜೇಶ್ವರ ರಥೋತ್ಸವದ ಸಂದರ್ಭದಲ್ಲಿ ಮಹಾರಾಜರಿಗೆ ಮಹಾಗೌರವವನ್ನು ಸಲ್ಲಿಸುವ ಸಂಪ್ರದಾಯ ಇಂದಿಗೂ ಇರುವುದು ನಾವೆಲ್ಲರೂ ಕಾಣಬಹುದು. ಸಾಹಿತ್ಯ ಪರಿಷತ್ತಿನ ಮೂಲಕ ನಾಲ್ವಡಿ ಕೃಷ್ಣರಾಜ ಒಡೆಯರ ಅಭಿವೃದ್ಧಿಯ ವಿಚಾರ ಅರಿವು ಮೂಡಿಸುವ ಕಾರ್ಯಕ್ರಮವನ್ನು ಗ್ರಾಮೀಣ ಪ್ರದೇಶಗಳಲ್ಲೂ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾದ ರವಿಚಂದ್ರ ಪ್ರಸಾದ್ ಮಾತನಾಡಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸುವ ಮೂಲಕ ಸಾಹಿತ್ಯ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿ ಅವರ ಸಂಸ್ಥಾನದಲ್ಲಿ ವಿಶ್ವದ ಶ್ರೇಷ್ಠ ಸಾಹಿತಿಗಳನ್ನು ಪ್ರೋತ್ಸಾಹಿಸಿ,ಸ್ವತಃ ಕವಿಯಾಗಿ, ಸಾಹಿತಿಯಾಗಿ ಕೃತಿಗಳನ್ನು ರಚಿಸಿ, ಕಲೆಯ ಪೋಷಕರಾಗಿ ಕಲೆ, ಜನಪದ ಸಂಸ್ಕೃತಿಯನ್ನು ಶಾಶ್ವತವಾಗಿ ಉಳಿಸುವ ಕೆಲಸವನ್ನು ಮಾಡಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸರಸ್ವತಿ, ಎಲ್. ಶಿವಲಿಂಗಮೂರ್ತಿ, ಬಿಕೆ ಆರಾ, ದೊರೆ, ಮಹೇಶ್ ಇದ್ದರು.

ಕಾಳಸಂತೆಯಲ್ಲಿ ಅಕ್ಕಿ ಮಾರಾಟ ಮಾಡುವವರ ಪಡಿತರ ಚೀಟಿ ರದ್ದು

ಚಾಮರಾಜನಗರ, ಜೂ.5– ಜಿಲ್ಲೆಯಲ್ಲಿ ಪ್ರತಿ ಮಾಹೆ ಬಿಪಿಎಲ್, ಅಂತ್ಯೋದಯ ಪಡಿತರ ಚೀಟಿಯ ಫಲಾನುಭವಿಗಳಿಗೆ ನೀಡುತ್ತಿರುವ 10 ಕೆಜಿ ಅಕ್ಕಿಯನ್ನು ಹೆಚ್ಚಿನ ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆ ದೂರುಗಳು ದಾಖಲಾಗಿದ್ದು, ಅಂತಹವರ ಪಡಿತರ ಚೀಟಿಯನ್ನು ರದ್ದುಪಡಿಸಲಾಗುವುದು ಎಂದು ಆಹಾರ ಇಲಾಖೆ ತಿಳಿಸಿದೆ.

ಸರ್ಕಾರ ನಿಗದಿಪಡಿಸಿರುವ ಪ್ರಮಾಣದಂತೆ ಪ್ರತಿ ಸದಸ್ಯರಿಗೆ ವಿತರಣೆ ಮಾಡುತ್ತಿರುವ 10 ಕೆಜಿ ಅಕ್ಕಿಯನ್ನು ಪಡಿತರ ಚೀಟಿದಾರರು ಹೆಚ್ಚಿನ ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆಂದು ದೂರುಗಳು ದಾಖಲಾಗುತ್ತಿರುವುದರಿಂದ ಅಂತಹವರ ಪಡಿತರ ಚೀಟಿಯನ್ನು ರದ್ದುಪಡಿಸಲಾಗುವುದು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರಾದ ಯೋಗಾನಂದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಪಿಸಿಸಿ ಪ್ರಚಾರ ಸಮಿತಿ ಉಪಾಧ್ಯಕ್ಷರಾಗಿ ಕೋಟೆ ಎಂ.ಶಿವಣ್ಣ ನೇಮಕ



ಚಾಮರಾಜನಗರ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ ಉಪಾಧ್ಯಕ್ಷರನ್ನಾಗಿ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಅವರನ್ನು ನೇಮಕ ಮಾಡಿ ಚಾಮರಾಜನಗರ ಜಿಲ್ಲಾ ಉಸ್ತುವಾರಿಯನ್ನು ನೀಡಲಾಗಿದೆ.


ತಮ್ಮನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿದ್ದು, ತಮಗೆ ಈಗಾಗಲೇ ರಾಮನಗರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ ಉಸ್ತುವಾರಿಯನ್ನು ವಹಿಸಲಾಗಿತ್ತು. ಆದರೆ ತಮಗೆ ರಾಮನಗರ ಜಿಲ್ಲೆ ಬದಲು ಚಾಮರಾಜನಗರ ಜಿಲ್ಲಾ ಉಸ್ತುವಾರಿಯನ್ನು ನೀಡಲಾಗಿದೆ. ತಾವು ಜಿಲ್ಲಾ, ಬ್ಲಾಕ್, ಕ್ಷೇತ್ರ ಮತ್ತು ಪ್ರಚಾರ ಸಮಿತಿಗಳ ನೇಮಕ ಮತ್ತು ಕ್ಷೇತ್ರವಾರು ಪ್ರಚಾರ ಸಮಿತಿಗಳ ಕಾರ್ಯವನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಸಮಿತಿ ರಾಜ್ಯ ಅಧ್ಯಕ್ಷ ವಿನಯ್ ಕುಮಾರ್ ನೇಮಕಾತಿ ಆದೇಶಪತ್ರದಲ್ಲಿ ಕೋರಿದ್ದಾರೆ.

ಬಾಳೆ ತೋಟದಲ್ಲಿ ಭಾರೀ ಗಾತ್ರದ ಹೆಬ್ಬಾವು ಸೆರೆ



ಯಳಂದೂರು ತಾಲೂಕಿನ ದಾಸನಹುಂಡಿ ಗ್ರಾಮದ ರಾಜೇಶ್ ಎಂಬುವರ ತೋಟದಲ್ಲಿ ಕಾಣಿಸಿಕೊಂಡಿದ್ದ ಭಾರೀ ಗಾತ್ರದ ಹೆಬ್ಬಾವನ್ನು ಉರಗ ತಜ್ಞ ಸಂತೆಮರಹಳ್ಳಿಯ ಸ್ನೇಕ್ ಮಹೇಶ್ ಸೆರೆ ಹಿಡಿದು ಕಾಡಿಗೆ ಬಿಟ್ಟಿದ್ದಾರೆ.

ಈಗ ಹೊಸ ರೂಪದ ಕಣ್ಣಪ್ಪ



1954ರಲ್ಲಿ ಡಾ.ರಾಜ್‌ಕುಮಾರ್ ಅಭಿನಯದ ಬೇಡರ ಕಣ್ಣಪ್ಪ ತೆರೆಗೆ ಬಂದಿತ್ತು. ಆನಂತರ 1988ರಲ್ಲಿ 34 ವರ್ಷಗಳ ನಂತರ ಡಾ.ಶಿವರಾಜ್‌ಕುಮಾರ್ ಅಭಿನಯದ ಶಿವಮೆಚ್ಚಿದ ಕಣ್ಣಪ್ಪ ನಿರ್ಮಾಣವಾಯಿತು. ಆ ಚಿತ್ರದಲ್ಲಿ ಡಾ.ರಾಜ್‌ಕುಮಾರ್ ಪರಮೇಶ್ವರನಾಗಿ ಕಾಣಿಸಿಕೊಂಡಿದ್ದರು. ಇದೀಗ 37 ವರ್ಷಗಳ ನಂತರ ಅದೇ ಕಣ್ಣಪ್ಪ ಕಥೆಗೆ ಹೊಸರೂಪ ನೀಡಿ ಕನ್ನಡ, ತೆಲುಗು ಸೇರಿದಂತೆ ಬಹುಭಾಷೆಗಳಲ್ಲಿ ತೆರೆಗೆ ತರುತ್ತಿದ್ದಾರೆ ನಟ, ನಿರ್ಮಾಪಕ ಡಾ.ಮೋಹನಬಾಬು. ಮುಖೇಶ್ ಕುಮಾರ್‌ಸಿಂಗ್ ಆಕ್ಷನ್ ಕಟ್ ಹೇಳಿರುವ ಈ ಚಿತ್ರದಲ್ಲಿ ಮೋಹನಬಾಬು ಪುತ್ರ ವಿಷ್ಣು ಮಂಚು ಕಣ್ಣಪ್ಪನಾಗಿ ಕಾಣಿಸಿಕೊಂಡಿದ್ದಾರೆ, ಬಾಲಿವುಡ್ ನಟ ಅಕ್ಷಯ್‌ಕುಮಾರ್ ಹಾಗೂ ಕಾಜಲ್ ಅಗರವಾಲ್ ಶಿವ-ಪಾರ್ವತಿಯಾಗಿ ನಟಿಸಿದ್ದಾರೆ. ಇತ್ತೀಚೆಗೆ ಈ ಚಿತ್ರದ ವಿಶೇಷ ಹಾಡೊಂದನ್ನು ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಬಿಡುಗಡೆ ಮಾಡಿದರು. ನಿರ್ಮಾಪಕ ಮೋಹನ್ ಬಾಬು, ನಾಯಕ ವಿಷ್ಣು ಮಂಚು, ವಿತರಕ ರಾಕ್‌ಲೈನ್ ವೆಂಕಟೇಶ್ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ರಾಕ್‌ಲೈನ್ ವೆಂಕಟೇಶ್ ಮಾತನಾಡಿ, ಅಣ್ಣಾವ್ರ ಬೇಡರ ಕಣ್ಣಪ್ಪ ಚಿತ್ರವನ್ನು ಇಟ್ಟುಕೊಂಡು ಹಲವಾರು ಸಿನಿಮಾ ಮಾಡಬಹುದು. ಈಗ ವಿಷ್ಣು ಮಂಚು ಅವರು ಈ ಪ್ರಯತ್ನ ಮಾಡಿದ್ದಾರೆ. ಈಗಾಗಲೇ ನಾನು ಸಿನಿಮಾ ನೋಡಿದ್ದೇನೆ. ಎಲ್ಲಾ ಪಾತ್ರಗಳಿಗೂ ಕಲಾವಿದರು ಜೀವ ತುಂಬಿ ಅಭಿನಯಿಸಿದ್ದಾರೆ. ಜೂನ್ 27ರಂದು ರಾಜ್ಯಾದ್ಯಂತ ರಿಲೀಸ್ ಆಗಲಿರುವ ಈ ಚಿತ್ರವನ್ನು ಕರ್ನಾಟಕದಲ್ಲಿ ನಾನೇ ರಿಲೀಸ್ ಮಾಡುತ್ತಿದ್ದೇನೆ. ಶಿವನ ಪಾತ್ರವನ್ನು ಶಿವರಾಜ್‌ಕುಮಾರ್ ಅವರೇ ಮಾಡಬೇಕಿತ್ತು, ಡೇಟ್ಸ್ ಹೊಂದಾಣಿಕೆಯಾಗದ ಕಾರಣ ಮಾಡಲಾಗಲಿಲ್ಲ ಎಂದು ಹೇಳಿದರು.

ಶಿವಣ್ಣ ಮಾತನಾಡಿ, ನಾನು ಈ ಚಿತ್ರದಲ್ಲಿ ನಟಿಸಬೇಕಾಗಿತ್ತು. ದಿನಾಂಕದ ಸಮಸ್ಯೆಯಿಂದ ಆಗಲಿಲ್ಲ. ಮುಂದೊಂದು ದಿನ ವಿಷ್ಣು ಮಂಚು ಜೊತೆ ಖಂಡಿತ ನಟಿಸುತ್ತೇನೆ, ಕಣ್ಣಪ್ಪ ಚಿತ್ರವನ್ನು ಮೊದಲ ದಿನವೇ ನೋಡುತ್ತೇನೆ ಎಂದರು.

ನಿರ್ಮಾಪಕ ಮೋಹನ್ ಬಾಬು ಮಾತನಾಡಿ, ಕನ್ನಡದಲ್ಲಿ ನಟಿಸಬೇಕು ಎನ್ನುವ ಆಸೆ ನನಗೆ ಬಹುದಿನಗಳಿಂದ ಇದೆ. ಮಿತ್ರ ಅಂಬರೀಷ್ ಮುಂದೆ ಸಹ ಇದನ್ನೇ ಹೇಳಿದ್ದೆ. ಶಿವಣ್ಣ ನಿಮ್ಮೊಂದಿಗೂ ನಟಿಸುವ ಆಸೆಯಿದೆ. ನ್ಯೂಜಿಲ್ಯಾಂಡ್ ಕಾಡಿನಲ್ಲಿ ಬೃಹತ್ ಸೆಟ್ ಹಾಕಿ ಚಿತ್ರೀಕರಣ ಮಾಡಿದ್ದೇವೆ. ಡಾ. ರಾಜ್ ಕುಮಾರ್, ಶಿವರಾಜ್ ಕುಮಾರ್ ಮಾಡಿದ್ದ ಪಾತ್ರವನ್ನು ನನ್ನ ಮಗ ಮಾಡಿದ್ದಾನೆ ನನ್ನ ಮಗನ ಚಿತ್ರಕ್ಕೆ ನಿಮ್ಮ ಆಶೀರ್ವಾದವಿರಲಿ ಎಂದರು.



ಖೇಲಾ ಚಿತ್ರದಲ್ಲಿ ಪುಣ್ಯಾತ್‌ಗಿತ್ತೀ ಹಾಡು





ಹಿರಿಯ ನಿರ್ಮಾಪಕ, ನಿರ್ದೇಶಕ ವಿಷ್ಣುಕಾಂತ್ ಪುತ್ರ ಭರತ್ ವಿ.ಜೆ. ಅವರ ನಿರ್ದೇಶನದ ವಿಭಿನ್ನ ಕಥಾಹಂದರ ಹೊಂದಿರುವ ಚಿತ್ರ 'ಖೇಲಾ'. ಚಿತ್ರೀಕರಣದ ಕೊನೇ ಹಂತದಲ್ಲಿರುವ ಈ ಚಿತ್ರಕ್ಕೆ ಭರತ್ ಅವರೇ ಬಂಡವಾಳ ಹೂಡಿದ್ದಾರೆ, ಇತ್ತೀಚೆಗೆ ಈ ಚಿತ್ರದ ಎಂ.ಎಸ್.ತ್ಯಾಗರಾಜ್ ಅವರ ಸಂಗೀತ ಸಂಯೋಜನೆಯ ಪುಣ್ಯಾತ್‌ಗಿತ್ತೀ ಎಂಬ ಹಾಡಿನ ಬಿಡುಗಡೆ ಕಾರ್ಯಕ್ರಮ ನಡೆಯಿತು.

ತಂದೆಯವರ ಮಾರ್ಗದರ್ಶನದಲ್ಲಿ ಇದೇ ಮೊದಲ ಬಾರಿಗೆ ಖೇಲಾ ಚಿತ್ರವನ್ನು ನಿರ್ಮಿಸುವ ಜೊತೆಗೆ ನಿರ್ದೇಶನದ ಜವಾಬ್ದಾರಿಯನ್ನೂ ನಿಭಾಯಿಸಿದ್ದೇನೆ. ಇದೊಂದು ಅಪ್ಪಟ ಪ್ರೇಮ ಕಥಾನಕವಾಗಿದ್ದರೂ, ತಾಯಿ ಮಗನ ಬಾಂಧವ್ಯದ ಹಿನ್ನೆಲೆಯಲ್ಲಿ ನಡೆಯುವ ಸಸ್ಪೆನ್ಸ್, ಥ್ರಿಲ್ಲರ್ ಕಥೆಯನ್ನು ತೆರೆಮೇಲೆ ತರುತ್ತಿದ್ದೇನೆ. ಎಲ್ಲಾ ರೀತಿಯ ಮನರಂಜನಾತ್ಮಕ ಅಂಶಗಳನ್ನು ಒಳಗೊಂಡ ಚಿತ್ರವಿದು, ತಾಯಂದಿರ ದಿನದಂದು ನಮ್ಮ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿ ಒಳ್ಳೇ ಪ್ರತಿಕ್ರಿಯೆ ಪಡೆದಿತ್ತು. ಈ ಪುಣ್ಯಾತ್‌ಗಿತ್ತೀ ಎಂಬ ಹಾಡನ್ನು ರಿಲೀಸ್ ಮಾಡಿದ್ದೇವೆ. ವಿಹಾನ್ ಪ್ರಭಂಜನ್ ಹಾಗೂ ಆಶಿಕಾ ರಾವ್ ನಮ್ಮ ಚಿತ್ರದಲ್ಲಿ ನಾಯಕ, ನಾಯಕಿಯಾಗಿ ನಟಿಸಿದ್ದಾರೆ. ವಿಶೇಷ ಪಾತ್ರದಲ್ಲಿ ನಟಿ ಸಂಗೀತಾಭಟ್ ಅವರು ಅಭಿನಯಿಸಿದ್ದಾರೆ. ಈಗಾಗಲೇ ಖೇಲಾ ಚಿತ್ರದ ಬಹುತೇಕ ಚಿತ್ರೀಕರಣ ಮುಕ್ತಾಯವಾಗಿದ್ದು, ಒಂದು ಹಾಡು ಹಾಗು ಸಾಹಸ ದೃಶ್ಯವೊಂದರ ಚಿತ್ರೀಕರಣ ಮಾತ್ರವೇ ಬಾಕಿಯಿದೆ ಎಂದು ನಿರ್ದೇಶಕ ಭರತ್ ವಿ.ಜೆ. ತಿಳಿಸಿದರು.

ಚಿತ್ರದ ನಾಯಕ ವಿಹಾನ್ ಪ್ರಭಂಜನ್, ಇಂದು ಬಿಡುಗಡೆಯಾಗಿರುವ ಪುಣ್ಯಾತ್‌ಗಿತ್ತೀ ಅಪ್ಪಟ ಮಾಸ್ ಸಾಂಗಾಗಿದ್ದು, ಎಲ್ಲರ ಮೆಚ್ಚುಗೆ ಪಡೆಯುತ್ತೆ ಎಂಬ ನಂಬಿಕೆಯಿದೆ. ನಾನು ಈ ಚಿತ್ರದಲ್ಲಿ ಕಾಲೇಜು ಹುಡುಗನ ಪಾತ್ರ ನಿರ್ವಹಿಸಿದ್ದೇನೆ ಎಂದು ಹೇಳಿದರು.

ನಮ್ಮ ಚಿತ್ರದಲ್ಲಿ ಐದು ಹಾಡುಗಳಿದ್ದು, ಎರಡು ಹಾಡುಗಳನ್ನು ಪ್ರಮೋದ್ ಜೋಯಿಸ್ ಬರೆದಿದ್ದಾರೆ. ವೇಲ್ ಮುರುಗನ್ ಅವರು ಪುಣ್ಯಾತ್‌ಗಿತ್ತೀ ಹಾಡಿಗೆ ದನಿಯಾಗಿದ್ದಾರೆ ಎಂದು ಹಾಡುಗಳ ಹಾಗೂ ಗಾಯಕರ ಬಗ್ಗೆ ಸಂಗೀತ ನಿರ್ದೇಶಕ ಎಂ.ಎಸ್.ತ್ಯಾಗರಾಜ್ ಮಾಹಿತಿ ನೀಡಿದರು. ನಾಯಕಿ ಆಶಿಕಾ ರಾವ್, ಪ್ರಮುಖ ಪಾತ್ರಧಾರಿ ಯುವರಾಜ್ ಗೌಡ, ಸಾಹಿತಿ ಪ್ರಮೋದ್ ಜೋಯಿಸ್ ಹಾಗೂ ಛಾಯಾಗ್ರಾಹಕ ಸ್ವಾಮಿ ಮೈಸೂರು ಅವರುಗಳು ಖೇಲಾ ಚಿತ್ರದ ಕುರಿತಂತೆ ಮಾತನಾಡಿದರು.

ದಿ ಗ್ರ್ಯಾಂಡ್ ಇಲ್ಯೂಶನ್ ಟೀಸರ್ ಬಿಡುಗಡೆ



ಸಂಗೀತ ನಿರ್ದೇಶಕನಾಗಿ ಗುರುತಿಸಿಕೊಂಡಿರುವ ರಾಘವನ್ ಕಾರ್ತಿಕ್ ಈಗ 'ದಿ ಗ್ರ್ಯಾಂಡ್ ಇಲ್ಯೂಶನ್' ಎಂಬ ಸಿನಿಮಾದ ಮೂಲಕ ಚಿತ್ರರಂಗಕ್ಕೆ ಅಡಿಯಿಡುತ್ತಿದ್ದಾರೆ. ಈಗಾಗಲೇ ದಿ ಗ್ರ್ಯಾಂಡ್ ಇಲ್ಯೂಶನ್ ಚಿತ್ರದ ಪ್ರೀ ಪ್ರೊಡಕ್ಷನ್ ಕೆಲಸ ನಡೆಯುತ್ತಿದ್ದು, ಇತ್ತೀಚೆಗೆ ಈ ಚಿತ್ರದ ಟೀಸರ್ ಮತ್ತು ಅನುರಾಗದಿ ಅರಳಿದೆ ಮನ ಎಂಬ ಹಾಡನ್ನು ಬಿಡುಗಡೆ ಮಾಡಲಾಯಿತು.

ವೇದಿಕೆಯಲ್ಲಿ ಮಾತನಾಡಿದ ನಿರ್ದೇಶಕ ಕಂ ಸಂಗೀತ ಸಂಯೋಜಕ ರಾಘವನ್ ಕಾರ್ತಿಕ್, ಒಂದು ಹೆಣ್ಣು ಹಾಗೂ ಒಂಬತ್ತು ಪ್ರಮುಖ ಪಾತ್ರಗಳ ಸುತ್ತ ದಿ ಗ್ರ್ಯಾಂಡ್ ಇಲ್ಯೂಶನ್ ಸಿನಿಮಾದ ಕಥೆ ಸಾಗುತ್ತದೆ. ಜಗತ್ತಿನ ಅನೇಕ ವಿಷಯಗಳನ್ನು ಚಿತ್ರದ ಮೂಲಕ ಹೇಳುವ ಪ್ರಯತ್ನ ಮಾಡಿದ್ದೇವೆ. ಭ್ರಮೆ ಮತ್ತು ವಾಸ್ತವಗಳ ಸಂಗಮ ಈ ಸಿನಿಮಾದಲ್ಲಿದೆ. ಈಗಾಗಲೇ ಸ್ಕ್ರಿಪ್ ಕೆಲಸ ಮುಗಿದಿದ್ದು, ಕಲಾವಿದರು ಮತ್ತು ತಂತ್ರಜ್ಞರ ಆಯ್ಕೆ ನಡೆಯುತ್ತಿದೆ. ಆದಷ್ಟು ಬೇಗನೇ ಚಿತ್ರೀಕರಣ ಶುರುವಾಗಲಿದೆ. ನಮ್ಮ ಸಿನಿಮಾದಲ್ಲಿ ಹೇಳಬೇಕಾದ ವಿಷಯಗಳನ್ನು ಟೀಸರಿನಲ್ಲಿ ಹೇಳಿದ್ದೇವೆ ಎಂದು ಚಿತ್ರದ ಬಗ್ಗೆ ಪ್ರಾಥಮಿಕ ವಿವರಣೆ ನೀಡಿದರು.

ದಿ ಗ್ರ್ಯಾಂಡ್ ಇಲ್ಯೂಶನ್ ಚಿತ್ರತಂಡಕ್ಕೆ ಶುಭ ಹಾರೈಸಿದ ಹಿರಿಯನಟ ಉಮೇಶ್, ನಾನು ಹೊಸಬರ ಚಿತ್ರತಂಡಕ್ಕೆ ಹಾರೈಸಲು ಬಂದಿದ್ದೇನೆ. ಇಂದಿನ ಕಾಲದ ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ಸಿನಿಮಾ ಮಾಡಿ. ಒಳ್ಳೆಯ ಕಥೆಯಿರುವ, ಸದಭಿರುಚಿಯ ಸಿನಿಮಾಗಳನ್ನು ಕನ್ನಡ ಪ್ರೇಕ್ಷಕರು ಕೈಹಿಡಿದು ಬೆಳೆಸುತ್ತಾರೆ ಎಂದು ಚಿತ್ರತಂಡಕ್ಕೆ ಕಿವಿಮಾತು ಹೇಳಿದರು. ಮತ್ತೋರ್ವ ಅತಿಥಿ ಪಲ್ಲಕ್ಕಿ ರಾಧಾಕೃಷ್ಣ ಮಾತನಾಡಿ, ಈ ಸಿನಿಮಾದ ಕಥಾಹಂದರ ಮತ್ತು ಅವರ ಯೋಚನೆಗಳನ್ನು ನೋಡಿದರೆ, ಕನ್ನಡದಲ್ಲಿ ಇದೊಂದು ಬೇರೆ ಆಯಾಮದ ಸಿನಿಮಾವಾಗಲಿದೆ ಎಂಬ ಭರವಸೆಯಿದೆ. ಇಂಥ ಹೊಸ ಪ್ರತಿಭೆಗಳು ಬೆಳೆಯಬೇಕು ಎಂದು ಶುಭ ಹಾರೈಸಿದರು.

ಪತ್ರಿಕಾಗೋಷ್ಠಿಯಲ್ಲಿ ನಿರ್ದೇಶಕ ರಾಘವನ್ ಕಾರ್ತಿಕ್, ನಟರಾದ ಸೂರ್ಯತೇಜ, ಶ್ರೇಯಸ್, ಪುನೀತ್ ಮತ್ತಿತರರು ಹಾಜರಿದ್ದು ತಮ್ಮ ಪಾತ್ರದ ಬಗ್ಗೆ ಮಾಹಿತಿ ನೀಡಿದರು. ಸದ್ಯ ದಿ ಗ್ರ್ಯಾಂಡ್ ಇಲ್ಯೂಶನ್ ಚಿತ್ರದ ಪ್ರೀ-ಪ್ರೊಡಕ್ಷನ್ ಕೆಲಸಗಳು ಅಂತಿಮ ಹಂತದಲ್ಲಿದ್ದು, ಮುಂದಿನ ಎಂಟತ್ತು ತಿಂಗಳಿನಲ್ಲಿ ಈ ಸಿನಿಮಾವನ್ನು ತೆರೆಗೆ ತರುವ ಯೋಜನೆ ಹಾಕಿಕೊಂಡಿದ್ದೇವೆ ಇತರ ಮಾಹಿತಿ ನೀಡುವುದಾಗಿ ಚಿತ್ರತಂಡ ತಿಳಿಸಿದೆ.

ಘೋಸ್ಟ್ ಭಯದಲ್ಲಿ ಸುಧಾರಾಣಿ




ಡಾ. ವಿಷ್ಣುವರ್ಧನ್ ಅಭಿನಯದ ಕಿಲಾಡಿಕಿಟ್ಟು ಮೂಲಕ ಚಿತ್ರರಂಗಕ್ಕೆ ಬಾಲನಟಿಯಾಗಿ ಬಂದ ನಟಿ ಸುಧಾರಾಣಿ ಆನಂತರದಲ್ಲಿ ಡಾ.ಶಿವರಾಜ್‌ಕುಮಾರ್ ಜೊತೆ ಆನಂದ್ ಚಿತ್ರದಲ್ಲಿ ನಾಯಕಿಯಾಗಿ ಹೊಸ ಜರ್ನಿ ಶುರು ಮಾಡಿದರು. ಆನಂದ್ ಸೂಪರ್‌ಡೂಪರ್ ಹಿಟ್ ಆಗಿ ಸುಧಾರಾಣಿ ಅವರಿಗೆ ದೊಡ್ಡ ಸ್ಟಾರ್‌ವ್ಯಾಲ್ಯೂ ತಂದುಕೊಟ್ಟಿತು. ಡಾ.ರಾಜ್‌ಕುಮಾರ್, ರವಿಚಂದ್ರನ್, ರಮೇಶ್ ಅರವಿಂದ್, ಅಂಬರೀಶ್, ಅನಂತನಾಗ್ ಸೇರಿದಂತೆ ಹಲವಾರು ಕಲಾವಿದರ ಜತೆ ಅವರು ತೆರೆಹಂಚಿಕೊಂಡರು. ಕಿರುತೆರೆಯಲ್ಲೂ ನಟಿಸಿ ಸಕ್ಸಸ್ ಕಂಡಿರುವ ಸುಧಾರಾಣಿ ಇದೀಗ ನಿರ್ಮಾಪಕಿಯಾಗಿ ಹೊಸ ಹೆಜ್ಜೆ ಇಟ್ಟಿದ್ದಾರೆ. ಸುಧಾರಾಣಿ ಅವರೇ ನಿರ್ಮಿಸಿ, ನಾಯಕಿಯಾಗೂ ನಟಿಸಿರುವ ಘೋಸ್ಟ್ ಕಿರುಚಿತ್ರ ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನಲ್ಲಿ ಮೂಡಿಬಂದಿದೆ. ಈ ಚಿತ್ರದ ಪ್ರದರ್ಶನ ಹಾಗೂ ಪತ್ರಿಕಾಗೋಷ್ಠಿ ಇತ್ತೀಚೆಗೆ ನಡೆಯಿತು,

ಈ ಸಂದರ್ಭದಲ್ಲಿ ಮಾತನಾಡಿದ ಸುಧಾರಾಣಿ, ಜಗತ್ತಿನಲ್ಲಿ ಒಳ್ಳೆಯದು ಹೇಗಿದೆಯೋ ಹಾಗೆಯೇ ಕೆಟ್ಟದ್ದು ಕೂಡ ಇದೆ. ದೇವರು ಇದ್ದಾನೆ. ದೆವ್ವವೂ ಇದೆ. ಇದೆಲ್ಲವೂ ನಮ್ಮ ನಮ್ಮ ಕಲ್ಪನೆಗೆ ಬಿಟ್ಟದ್ದು ಎಂಬ ವಿಚಾರದ ಮೇಲೆ ಬಂದಂತಹ ಒಂದು ಎಳೆಯನ್ನಿಟ್ಟುಕೊಂಡು ಘೋಸ್ಟ್ ಎಂಬ ಕಿರುಚಿತ್ರವನ್ನು ನಿರ್ಮಾಣ ಮಾಡಿದ್ದೇನೆ. ಈ ಚಿತ್ರದಲ್ಲಿರುವುದು ಕೇವಲ ಎರಡೇ ಪಾತ್ರಗಳು. ಶ್ರೀರಸ್ತು ಶುಭಮಸ್ತು ಧಾರಾವಾಹಿಯ ನಿರ್ದೇಶಕರು ನನಗೆ ಈ ಕಥೆ ಹೇಳಿದಾಗ ಬಹಳ ಇಷ್ಟವಾಯಿತು. ನಿರ್ಮಾಣದ ಮೊದಲ ಹೆಜ್ಜೆಯಾಗಿ ಈ ಕಿರುಚಿತ್ರವನ್ನು ನಿರ್ಮಿಸಿದ್ದೇನೆ ಹಾಗೂ ಪ್ರಮುಖ ಪಾತ್ರದಲ್ಲಿ ಕೂಡ ಅಭಿನಯಿಸಿದ್ದೇನೆ ಎಂದು ಹೇಳಿದರು.

ಇನ್ನು ಈ ಚಿತ್ರದಲ್ಲಿ ಸುಧಾರಾಣಿಯವರೊಂದಿಗೆ ನಟಿಸುವುದರ ಜೊತೆಗೆ, ಆಕ್ಷನ್ ಕಟ್ ಹೇಳಿರುವ ನಿರ್ದೇಶಕ ಸುದೇಶ್ ಕೆ. ರಾವ್ ಮಾತನಾಡಿ, ತಾನು ಇಲ್ಲಿಯತನಕ ಹಲವಾರು ಕಿರುತೆರೆ ಧಾರಾವಾಹಿಗಳಲ್ಲಿ ನಟಿಸಿರುವ ಬಗ್ಗೆ ಮತ್ತು ನಿರ್ದೇಶನ ಮಾಡಿರುವ ಕುರಿತಂತೆ ತಮ್ಮ ಅನುಭವಗಳನ್ನು ಹಂಚಿಕೊಂಡರು. ಘೋಸ್ಟ್ ಒಂದು ಸ್ಪೆಷಲ್ ಕಥೆಯಾಗಿ ನಿಲ್ಲುತ್ತದೆ. ಪ್ರಪಂಚದಲ್ಲಿ ಇರುವುದೆಲ್ಲವೂ ಪಾಸಿಟಿವ್. ನಾವೇ ಎಲ್ಲದರಲ್ಲೂ ನೆಗೆಟಿವ್ ಹುಡುಕಿ, ನಮ್ಮ ತಲೆ ಮತ್ತು ಮನಸ್ಸನ್ನು ಕೆಡಿಸಿಕೊಳ್ಳುತ್ತೇವೆ. ಅಂತಹ ಎಲ್ಲರಿಗೂ ಈ ಶಾರ್ಟ್ ಫಿಲ್ಮ್ ಪರಿಹಾರ ನೀಡಬಹುದು ಎಂದು ಹೇಳಿದರು. ಘೋಸ್ಟ್ ಕಿರುಚಿತ್ರಕ್ಕೆ ದಿ ದೆವ್ವ ಎಂಬ ಅಡಿಬರಹವಿದೆ.

ಸಿನಿಪದಬಂಧ-579



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಹಿಮಾಲಯದಲ್ಲಿನ ಶ್ರೇಷ್ಠ ಕೊಳ 7
5. ಜಗ್ಗೇಶ್ – ವಿಜಯ ಲಕ್ಷ್ಮಿ ಅಭಿನಯದ ಚಿತ್ರ 3
6. ಸುನಿಲ್ ರಾವ್ – ರಾಧಿಕಾ ಚಿತ್ರ ಗರಂ ಆಗಿದೆ 3
7. ರಾಮ್‌ಕುಮಾರ್ – ಸುಧಾರಾಣಿ ಬರೆದ ಕವಿತೆ 2
8. ಕನ್ನಡ ನಾಡಿನ ರಸಿಕರ ಮನವ ಸೂರೆಗೊಂಡವಳು 5
9. ಈತ ಒಬ್ಬ ಸಂತ 3
11. ರಮೇಶ್ "ಕೊಲೆಗಾರ" 3
12. ಗುಡುಗು _ _ _ 3
14. ವಿಷ್ಣುವರ್ಧನ್ ಬಿಸಿಲು ನಾಡಿನಲ್ಲಿ ಹೆಡೆ ಎತ್ತಿದ್ದಾನೆ 5
16. ಯಾರೇ ನೀನು ಚೆಲುವೆ ಚಿತ್ರದ "ಡಯಾನಾ" 2
18. ಜೀವನ ಚಕ್ರ ಚಿತ್ರದ ನಾಯಕಿ 3
19. ರಾಂಗ್ ನಂಬರ್ ಚಿತ್ರದ ನಾಯಕಿ 3
20. ವಿಷ್ಣುವರ್ಧನ್, ಗೀತಾಂಜಲಿ, ಬಿ. ಸರೋಜದೇವಿ ಅಭಿನಯದ ಚಿತ್ರಕ್ಕೆ ಭಾರ್ಗವ ನಿರ್ದೇಶಕ 7

ಮೇಲಿನಿಂದ ಕೆಳಕ್ಕೆ

1. ನಟ ಅವಿನಾಶ್‌ನ ತಾರಾಪತ್ನಿ 4
2. ಸತ್ಯವಾನನ ಹೆಂಡತಿ 5
3. ಶಿವರಾಜ್‌ಕುಮಾರ್ ಅಭಿನಯದ ಯುದ್ಧಭೂಮಿ 4
4. ಜಗ್ಗೇಶ್ ಮಹಾನ್ ಬುದ್ದಿವಂತ 6
8. ಅನೂಪ್ ಭಂಡಾರಿ ಚಿತ್ರ ಅಲೆ ಎಬ್ಬಿಸಿದೆ 5
10. ರಾಜಕುಮಾರ್ ಅಭಿನಯದಲ್ಲಿ ಬಜಾರ್‌ನಲ್ಲಿ ಅಡ್ಡಾಡಿದ ಗೂಳಿ 6
13. "ಢವ ಢವ ಹೃದಯದ ಬೀಟು ಲವ್ ಲವ್ ಎನ್ನುತಿದೆ.... ", ಗೀತೆಯ ಚಿತ್ರ 5
15. ರವಿಚಂದ್ರನ್, ಅಂಬರೀಷ್, ಅಂಬಿಕಾ ಅಭಿನಯದ ಚಿತ್ರ 4
17. ಕೃಷ್ಣಸ್ವಾಮಿಯೊಂದಿಗೆ ಬಂದವನು 4

ಸಿನಿ ಪದಬಂಧ 578ರ ಉತ್ತರ

ನಾ	ಮೆ	ಚ್ಚಿ	ದ	ಹು	ಡು	ಗ			ಎ	
ದ			ಶಾ			ಟ್ಟಿ		ಭಾ	ರ	ತಿ
ಮ		ಶಿ	ವ	ಣ್ಣ		ಮೇ			ಡು	
ಯ	ಶ್		ತಾ		ಪ್ರ	ಳ	ಯಾಂ	ತ	ಕ	
			ರ		ಣ				ನ	
ಅ	ಜಿ	ತ್		ಪ	ಯ	ಣ		ಅ	ಸು	ರ
	ಪಿ				ರಾ		ಶೃಂ			
	ರಾ	ಜಾ	ಧಿ	ರಾ	ಜ		ಗಾ		ಮ	ರ
	ಜ			ಜ		ಸಾ	ರ	ಥಿ		ಘು
ಸು	ರ	ಭಿ		ಸಿಂ			ರಾ			ವೀ
	ತ್ನಂ			ಹ	ಸೂ	ರಾ	ಜ	ಶೇ	ಖ	ರ್

ವಿಜೇತರು: ಆರ್. ರೂಪಾ ಮಹೇಶ್, ಬಿ.ಕೆ.ಹಳ್ಳಿ ಪೋಸ್ಟ್, ಮಳವಳ್ಳಿ ತಾ. ಮಂಡ್ಯ ಜಿಲ್ಲೆ

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಸದ್ದಿಲ್ಲದೆ ಸಿದ್ಧವಾಗಿದೆ 'ಗುರಿ'!



ಎಂಭತ್ತರ ದಶಕದಲ್ಲಿ ಡಾ.ರಾಜಕುಮಾರ್ ಅಭಿನಯಸಿದ್ದ ಗುರಿ ಚಿತ್ರ ಸೂಪರ್‌ಹಿಟ್ ಆಗಿತ್ತು. ಇದೀಗ 4 ದಶಕಗಳ ನಂತರ ಇದೇ ಹೆಸರಿನ ಸಿನಿಮಾವೊಂದು ಸದ್ದಿಲ್ಲದೆ ನಿರ್ಮಾಣವಾಗಿ ತೆರೆಗೆ ಬರಲು ಸಿದ್ದವಾಗಿದೆ. ಸರ್ಕಾರಿ ಶಾಲೆಯನ್ನು ಉಳಿಸಿಕೊಳ್ಳಲು ಹೋರಾಡೋ ಮಕ್ಕಳ ಸುತ್ತ ನಡೆಯುವ ಕಥೆ ಒಳಗೊಂಡ ಈ ಚಿತ್ರಕ್ಕೆ ಸೆಲ್ವಂ ಮಾದಪ್ಪನ್ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ವಿಷ್ಣುದುರ್ಗಾ ಪ್ರೊಡಕ್ಷನ್ ಅಡಿಯಲ್ಲಿ ರಾಧಿಕಾ.ಎಸ್.ಆರ್. ಮತ್ತು ಚಿತ್ರಲೇಖಾ.ಎಸ್. ಸೇರಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಲಹರಿವೇಲು ಹೊಸದಾಗಿ ಸ್ಥಾಪಿಸಿರುವ 'ಎಂಆರ್‌ಟಿ ಮ್ಯೂಸಿಕ್' ಆಡಿಯೋ ಹಕ್ಕುಗಳನ್ನು ಖರೀದಿಸಿದೆ. ಇತ್ತೀಚೆಗೆ ಪಳನಿ. ಡಿ.ಸೇನಾಪತಿ ಅವರ ಸಂಗೀತ ಸಂಯೋಜನೆಯ ಎರಡು ಹಾಡುಗಳು ಹಾಗೂ ಟೀಸರ್ ಬಿಡುಗಡೆ ಕಾರ್ಯಕ್ರಮ ನೆರವೇರಿತು.

ಗುರಿ ಚಿತ್ರದ ಮುಖ್ಯ ಪಾತ್ರದಲ್ಲಿ ಅಭಿನಯಿಸಿರುವ ಮಾ.ಮಹಾನಿಧಿ, ಜೀವಿತ ಭೂಷಣ್, ಅಚ್ಯುತ್‌ಕುಮಾರ್, ಜಯಶ್ರೀ, ಉಗ್ರಂ ಮಂಜು, ಸಂದೀಪ್ ಮಲಾನಿ, ಮನೋಹರ್ ಹೋಗೆ ಎಲ್ಲರೂ ಚಿತ್ರೀಕರಣದ ಅನುಭವಗಳನ್ನು ಹಂಚಿಕೊಂಡರು.

ನಿರ್ದೇಶಕ ಸೆಲ್ವಂ ಮಾದಪ್ಪನ್ ಮಾತನಾಡಿ, ನೈಜ ಘಟನೆಯನ್ನು ಆಧರಿಸಿ ಈ ಚಿತ್ರ ಮಾಡಿದ್ದೇನೆ. ಒಮ್ಮೆ ಕೋಲಾರದ ತೇರಳ್ಳಿ ಬೆಟ್ಟದ ಕಡೆಗೆ ಹೋಗಿದ್ದಾಗ, ಅಲ್ಲಿ ಸರ್ಕಾರಿ ಶಾಲೆಯನ್ನು ಮುಚ್ಚಲಾಗಿತ್ತು. ಮಕ್ಕಳು ಶಿಕ್ಷಕರೊಂದಿಗೆ ಕೆರೆಯಲ್ಲಿ ಆಟವಾಡುತ್ತಿದ್ದರು. ಈ ಬಗ್ಗೆ ಸ್ಥಳೀಯರೊಂದಿಗೆ ವಿಚಾರಿಸಿದಾಗ ಒಂದಷ್ಟು ಮಹತ್ವದ ಅಂಶಗಳು ನನಗೆ ಸಿಕ್ಕವು. ಅದೇ ವಿಚಾರಗಳನ್ನು ನಮ್ಮ ಚಿತ್ರಕಥೆಯಲ್ಲಿ ಬಳಸಿಕೊಂಡಿದ್ದೇನೆ. ವಿದ್ಯಾರ್ಥಿ ಮತ್ತು ಶಿಕ್ಷಕನ ನಡುವಿನ ಬಾಂದವ್ಯ, ಸರ್ಕಾರಿ ಹಾಗೂ ಖಾಸಗಿ ಶಾಲೆಗಳ ನಡುವಿನ ಸಂಘರ್ಷ. ಒಂದು ಹಂತದಲ್ಲಿ ಸರ್ಕಾರಿ ಶಾಲೆ ಮುಚ್ಚುವ ಹಂತ ತಲುಪುತ್ತದೆ. ಆ ವಿಷಯ ತಿಳಿದ 3ನೇ ತರಗತಿಯ ಇಬ್ಬರು ಬುದ್ದಿವಂತ, ಧೈರ್ಯಶಾಲಿ ವಿದ್ಯಾರ್ಥಿಗಳು ಇದರ ವಿರುದ್ದ ಹೋರಾಟ ನಡೆಸಿ, ಹೇಗೆ ತಮ್ಮ ಶಾಲೆಯನ್ನು ಉಳಿಸಿಕೊಳ್ಳುತ್ತಾರೆ ಎಂಬುದನ್ನು ಗುರಿ ಚಿತ್ರದಲ್ಲಿ ಹೇಳಿದ್ದೇನೆ. ನಮ್ಮ ಚಿತ್ರವೀಗ ಬಿಡುಗಡೆಯ ಹಂತ ತಲುಪಿದೆ ಎಂದು ಹೇಳಿದರು.

ಲಹರಿ ವೇಲು ಮಾತನಾಡುತ್ತಾ, ಈ ಟೈಟಲ್ ನೋಡಿದಾಗ ಅಣ್ಣಾವ್ರ ಸಿನಿಮಾದ ಹೆಸರು ಕಣ್ಣ ಮುಂದೆ ಬರುತ್ತದೆ. ಸೆಲ್ವಂ ಛಾಯಾಗ್ರಾಹಕರಾಗಿ ಹದಿನೈದು ವರ್ಷ ಕನ್ನಡ ಚಿತ್ರರಂಗದಲ್ಲಿ ಸೇವೆ ಸಲ್ಲಿಸಿದ್ದಾರೆ. ಚಿತ್ರದ ಪ್ರತಿ ದೃಶ್ಯದಲ್ಲಿ ಅವರ ಚಾಕಚಕ್ಯತೆ ಕಂಡು ಬರುತ್ತದೆ. ಖಂಡಿತ ಈ ಚಿತ್ರ ಯಶಸ್ಸು ಕಾಣುವುದಲ್ಲದೆ ಪ್ರಶಸ್ತಿಯನ್ನೂ ಸಹ ಗಳಿಸುತ್ತದೆ. ಪಳನಿ ಅವರ ಸಂಗೀತದಲ್ಲಿ ಮೂಡಿಬಂದಿರುವ ಹಾಡುಗಳು ತುಂಬಾ ಸೊಗಸಾಗಿವೆ ಅವರಿಗೆ ಸರಸ್ವತಿ ಒಲಿದಿದ್ದಾಳೆ. ಮುಂದೊಂದು ದಿನ ಅವರು ಪ್ರಸಿದ್ದಿಯಾಗುತ್ತಾರೆ ಎಂದು ಅವರು ಹೇಳಿದರು.

ಹಿರಿಯ ನಿರ್ದೇಶಕ ಟಿ.ಎಸ್. ನಾಗಾಭರಣ, ಅವಿನಾಶ್, ಪವನಕುಮಾರ್, ಚಂದ್ರಪ್ರಭಾ ನಟಿಸಿರುವ ಈ ಚಿತ್ರಕ್ಕೆ ಬೆಂಗಳೂರು, ಕೋಲಾರ, ತೇರಳ್ಳಿ ಬೆಟ್ಟದ ಸುತ್ತಮುತ್ತಲ ಪ್ರದೇಶಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ.

ಮೂರನೇ ಪುಟದಿಂದ

ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶ

ಜನರಿಗಷ್ಟೇ ಟಿಕೆಟ್ ನೀಡುತ್ತಾರೆ, ಆದರೆ, ನಿನ್ನೆ 2.50 ಲಕ್ಷ ಜನ ಬಂದಿದ್ದರು, ರಾಜ್ಯದ ವಿವಿಧ ಮೂಲಗಳಿಂದಲ್ಲದೆ, ನೆರೆ ರಾಜ್ಯಗಳಿಂದಲೂ ಆರ್‌ಸಿಬಿ ಅಭಿಮಾನಿಗಳು ಬಂದಿದ್ದರು, ಮೃತಪಟ್ಟವರಲ್ಲಿ ಕೊಯಮತ್ತೂರು ಮೂಲದ ವ್ಯಕ್ತಿಯೂ ಸೇರಿದ್ದಾರೆ ಎಂದು ಪೀಠಕ್ಕೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದ ಪೀಠ, ಕಾರ್ಯಕ್ರಮದ ಆಯೋಜಕರು ಯಾರು, ಕ್ರೀಡಾಂಗಣ ಪ್ರವೇಶಿಸಲು ಎಷ್ಟು ಗೇಟ್‌ಗಳಿವೆ, ಅವುಗಳಲ್ಲಿ ಎಷ್ಟು ತೆರೆದಿದ್ದರು, ಅವಘಡಕ್ಕೆ ಕಾರಣವೇನು, ಮುಂದೆ ಇಂತಹ ಘಟನೆ ಮರುಕಳಿಸದಂತೆ ಏನು ಕಾರ್ಯಕ್ರಮ ರೂಪಿಸಿದ್ದೀರಿ ಎಂಬ ಎಲ್ಲಾ ಮಾಹಿತಿ ನೀಡುವಂತೆ ಸೂಚಿಸಿ ವಿಚಾರಣೆಯನ್ನು ಮುಂದೂಡಿತು.

ಪಿಐಎಲ್ ಪರ ವಾದ ಮಾಡಿದ ವಕೀಲರಾದ ರಂಗನಾಥ ರೆಡ್ಡಿ, ಜಿ.ಆರ್. ಮೋಹನ್, ಹೇಮಂತ್ ರಾಜ್, ಆರ್‌ಸಿಬಿ ಆಟಗಾರರು ರಾಜ್ಯಕ್ಕಾಗಲೀ, ದೇಶಕ್ಕಾಗಲೀ ಆಡುತ್ತಿಲ್ಲ, ಇಂತಹವರನ್ನು ಸರ್ಕಾರ ಗೌರವಿಸುವ ಅಗತ್ಯವೇನಿತ್ತು.

ವಿಧಾನಸೌಧ ಮತ್ತು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಎರಡು ಕಡೆಗಳಲ್ಲಿ ಕಾರ್ಯಕ್ರಮ ಆಯೋಜನೆಯಿಂದ ಸಮಸ್ಯೆ ಆಯಿತು. ನಮಗೆ ತಿಳಿದಿರುವಂತೆ ಸಮಾರಂಭಕ್ಕೆ ಆರ್‌ಸಿಬಿ ಮತ್ತು ಕೆಎಸ್‌ಸಿಎ ಆಹ್ವಾನ ನೀಡಿದ್ದು, ಫ್ರೀ ಪಾಸ್ ಇದೆಯೆಂದು ಆನ್‌ಲೈನ್‌ನಲ್ಲಿ ಪ್ರಕಟಿಸಿದ್ದರು. ಕ್ರೀಡಾಂಗಣಕ್ಕೆ 23 ಗೇಟ್‌ಗಳಿವೆ, ಅದರಲ್ಲಿ ಮೂರು ಗೇಟ್‌ಗಳನ್ನು ಕಡೆ ಗಳಿಗೆಯಲ್ಲಿ ತೆರೆದಿದ್ದರಿಂದ ನೂಕುನುಗ್ಗಲಾಗಿ ಸಾವು–ನೋವುಗಳು ಸಂಭವಿಸಿವೆ. ನಮಗೆ ತಿಳಿದಿರುವಂತೆ 75 ಮಂದಿ ಗಾಯಗೊಂಡಿದ್ದಾರೆ ಎಂದಾಗ ಪೀಠ, ಸರ್ಕಾರ ಎಲ್ಲಾ ಮಾಹಿತಿ ನೀಡಲಿ, ಮುಂದೆ ನೋಡೋಣ ಎಂದು ಹೇಳಿ ವಿಚಾರಣೆ ಮುಂದೂಡಿತು.

ಪೆರೇಡ್ ಘೋಷಿಸಿದ್ದ ಆರ್‌ಸಿಬಿ ಫ್ರಾಂಚೈಸಿ

ವಿವಿಧೆಡೆ ಅಭಿಮಾನಿಗಳು ಸಂಭ್ರಮಾಚರಣೆ ಕೈಗೊಂಡಿದ್ದರು. ಹೀಗಿರುವಾಗಲೇ ಬುಧವಾರ ಬೆಳಗ್ಗೆ 7.01ರಲ್ಲಿ ಆರ್‌ಸಿಬಿ ಫ್ರಾಂಚೈಸಿ ಇಂದು 3.30ರ ಬಳಿಕ ವಿಧಾನ ಸೌಧದಿಂದ ಚಿನ್ನಸ್ವಾಮಿ ಸ್ಟೇಡಿಯಂವರೆಗೆ ವಿಕ್ಟರಿ ಪೆರೇಡ್ ನಡೆಸುವುದಾಗಿ ತನ್ನ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿತ್ತು. ಆದರೆ, ಘೋಷಣೆಗೂ ಮುನ್ನ ಯಾವುದೇ ಪೊಲೀಸ್ ಅನುಮತಿ ಪಡೆದಿರಲಿಲ್ಲ. ಪೊಲೀಸರು ಸಹ ಈ ಬಗ್ಗೆ ತಲೆ ಕೆಡಿಸಿಕೊಂಡಿರಲಿಲ್ಲ. ಮ್ಯಾನೇಜ್‌ಮೆಂಟ್‌ಗೂ ಸರಿಯಾದ ಸೂಚನೆ ಕೊಡದೇ 11 ಗಂಟೆಯಾದರೂ ಸಭೆ ಮಾಡುವುದರಲ್ಲೇ ಕಾಲ ಕಳೆದರು. ನಿರಂತರ ಸಭೆ ನಡೆಸುತ್ತಿದ್ದ ಪೊಲೀಸರು 12 ಗಂಟೆ ಕಳೆದರೂ ಸರಿಯಾದ ತೀರ್ಮಾನಕ್ಕೆ ಬರುವುದರಲ್ಲಿ ವಿಫಲರಾಗಿದ್ದರು.

ಈ ನಡುವೆ ಮುಖ್ಯಮಂತ್ರಿಗಳು ಪಾಲ್ಗೊಳ್ಳುತ್ತಿದ್ದರಿಂದ ಸ್ಟೇಡಿಯಂಗಿಂತ ವಿಧಾನಸೌಧ ಕಾರ್ಯಕ್ರಮಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿತ್ತು. ಅಲ್ಲಿ ಅತೀ ಹೆಚ್ಚು ಪೊಲೀಸರನ್ನು ನಿಯೋಜನೆ ಮಾಡಲಾಗಿತ್ತು ಇದಾದ ಬಳಿಕ ಮಧ್ಯಾಹ್ನ 2 ಗಂಟೆ ವೇಳೆಗೆ ಟಿಕೆಟ್, ಪಾಸ್ ಇದ್ದವರಿಗೆ ಮಾತ್ರ ಅವಕಾಶ ಎಂದು ಪ್ರೆಸ್‌ನೋಟ್ ಹೊರಡಿಸಿದ್ದರು. ಆದರೆ ಟಿಕೆಟ್ ಎಲ್ಲಿ ಸಿಗುತ್ತೆ ಅನ್ನೋದನ್ನು ಫ್ರಾಂಚೈಸಿ ಸ್ಪಷ್ಟಪಡಿಸಿರಲಿಲ್ಲ. ಪೊಲೀಸರೂ ಇದನ್ನು ಪ್ರಶ್ನೆ ಮಾಡಲಿಲ್ಲ ಅಲ್ಲದೇ ಮಧ್ಯಾಹ್ನ 3.30ರ ಸುಮಾರಿಗೆ ಫ್ರೀ ಪಾಸ್ ಸಿಗುತ್ತೆ ಎಂದು ತನ್ನ ವೆಬ್‌ಸೈಟ್ ಮತ್ತು ಸೋಷಿಯಲ್ ಮೀಡಿಯಾ ಖಾತೆಗಳಲ್ಲಿ ಆರ್‌ಸಿಬಿ ಹಂಚಿಕೊಂಡಿತ್ತು. ಸಂಜೆ 5 ರಿಂದ 6 ಗಂಟೆವರೆಗೆ ಪೆರೇಡ್ ನಡೆಯಲಿದೆ ಅಂತಲೂ ಪೋಸ್ಟ್ ಹಂಚಿಕೊಂಡಿತ್ತು. ಆದರೆ ಅಷ್ಟರಲ್ಲಾಗಲೇ ಸ್ಟೇಡಿಯಂ ಬಳಿ ಲಕ್ಷಾಂತರ ಜನ ಜಮಾಯಿಸಿದ್ದರು

ಆಯುಕ್ತ ದಯಾನಂದ್ ಅಮಾನತು

ಇದೇ ವೇಳೆ ಅಹಮದಾಬಾದ್‌ನಿಂದ ಬೆಂಗಳೂರಿಗೆ ಆಗಮಿಸುವ ಆರ್‌ಸಿಬಿ ಆಟಗಾರರನ್ನು ವಿಧಾನಸೌಧ ಮೆಟ್ಟಿಲುಗಳ ಮೇಲೆ ಅಭಿನಂದಿಸಲಾಗುವುದು ಎಂದು ಸರ್ಕಾರದಿಂದಲೂ ಪ್ರಕಟಣೆ ಹೊರಡಿಸಿತ್ತು.

ಈ ಹಿನ್ನೆಲೆಯಲ್ಲಿ ತಮ್ಮ ನೆಚ್ಚಿನ ಆಟಗಾರರನ್ನು ಕಣ್ತುಂಬಿಕೊಳ್ಳಲು ಬುಧವಾರ ಮಧ್ಯಾಹ್ನದಿಂದಲೇ ವಿಧಾನಸೌಧ ಮುಂಭಾಗ ಹಾಗೂ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಲಕ್ಷಾಂತರ ಅಭಿಮಾನಿಗಳು ಜಮಾಯಿಸಿದ್ದರು. ಪರಿಸ್ಥಿತಿಯನ್ನು ಅವಲೋಕಿಸಿದ್ದ ಗುಪ್ತಚರ ಇಲಾಖೆ ನೀಡಿದ ವರದಿಯನ್ವಯ ವಿಕ್ಟರಿ ಪೆರೇಡ್‌ಗೆ ಮಧ್ಯಾಹ್ನದ ವೇಳೆಗೆ ಸರ್ಕಾರ ಅನುಮತಿ ನಿರಾಕರಿಸಿರುವುದಾಗಿ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಘೋಷಿಸಿದರು. ಈ ಮಧ್ಯೆ ಚಿನ್ನಸ್ವಾಮಿ ಸ್ಟೇಡಿಯಂಗೆ ಪಾಸ್‌ಗಳ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಆರ್‌ಸಿಬಿ ಸಾಮಾಜಿಕ ಜಾಲ ತಾಣದಲ್ಲಿ ಪೋಸ್ಟ್ ಮಾಡಿತ್ತು. ಆದರೆ ಪಾಸ್‌ಗಳನ್ನು ಪಡೆಯುವುದು ಹೇಗೆ ಎಂಬುದರ ಬಗ್ಗೆ ಯಾವುದೇ ರೀತಿಯ ಮಾಹಿತಿ ಇರಲಿಲ್ಲ. ಇದರ ಬಗ್ಗೆ ಪೊಲೀಸರೂ ಕೂಡ ತಲೆ ಕೆಡಿಸಿಕೊಂಡಿರಲಿಲ್ಲ. ಸ್ಟೇಡಿಯಂ ಬಳಿ ಜಮಾಯಿಸಿದ್ದ ಅಭಿಮಾನಿಗಳು ಪಾಸ್ ಪಡೆಯುವುದು ಹೇಗೆ ಎಂಬ ಗೊಂದಲದಲ್ಲಿ ಮುಳುಗಿದ್ದಾಗಲೇ ಇದ್ದಕಿದ್ದಂತೆ ಸ್ಟೇಡಿಯಂಗೆ ಉಚಿತ ಪ್ರವೇಶ ಎಂಬ ಘೋಷಣೆಯನ್ನು ಆರ್‌ಸಿಬಿ ಪ್ರಕಟಿಸಿತು.

ಇದರಿಂದಾಗಿ ಅಭಿಮಾನಿಗಳು ಸ್ಟೇಡಿಯಂಗೆ ನುಗ್ಗಲು ಆರಂಭಿಸಿದರು. ಆದರೆ ಸ್ಟೇಡಿಯಂನ ಎಲ್ಲಾ ಗೇಟ್‌ಗಳನ್ನೂ ಓಪನ್ ಮಾಡದೇ ಕೆಲವೇ ಕೆಲವು ಗೇಟ್‌ಗಳನ್ನು ಮಾತ್ರ ಓಪನ್ ಮಾಡಿದ್ದರಿಂದ ನೂಕು–ನುಗ್ಗಲು ಉಂಟಾಯಿತು. ಅಭಿಮಾನಿಗಳು ಸ್ಟೇಡಿಯಂ ಗೇಟ್ ಹಾಗೂ ಪೊಲೀಸರು ಅಳವಡಿಸಿದ್ದ ಬ್ಯಾರಿಕೇಡ್‌ಗಳನ್ನು ತಳ್ಳಿ ನುಗ್ಗಲಾರಂಭಿಸಿದ್ದು ಕಾಲ್ತುಳಿತದಲ್ಲಿ 11 ಮಂದಿ ಸಾವನ್ನಪ್ಪಿ 57 ಮಂದಿ ಗಾಯಗೊಂಡಿದ್ದರು. ರಾಜ್ಯ ಸರ್ಕಾರ ಮೃತರ ಕುಟುಂಬಕ್ಕೆ 10 ಲಕ್ಷ ರೂ.ಗಳ ಪರಿಹಾರ ಹಾಗೂ ಗಾಯಾಳುಗಳಿಗೆ ಉಚಿತ ಚಿಕಿತ್ಸೆ ನೀಡುವುದಾಗಿ ಬುಧವಾರ ರಾತ್ರಿ ಘೋಷಿಸಿದರೆ, ತದನಂತರ ಕೆಎಸ್‌ಸಿಎ ಮೃತರ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ಘೋಷಿಸಿತ್ತು ಇಂದು (ಗುರುವಾರ) ಆರ್‌ಸಿಬಿ ಫ್ರಾಂಚೈಸಿ ಮೃತರ ಕುಟುಂಬಕ್ಕೆ ತಲಾ 10 ಲಕ್ಷ ರೂ. ಪರಿಹಾರ ಘೋಷಿಸಿದೆ.

ನೈತಿಕತೆ ಇದ್ದರೆ ಸಿಎಂ, ಡಿಸಿಎಂ, ಗೃಹಸಚಿವರು ರಾಜೀನಾಮೆ ನೀಡಲಿ




ಬೆಂಗಳೂರು, ಜೂ.5– ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ದುರಂತಕ್ಕೆ ಸಂಬಂಧಪಟ್ಟಂತೆ ಪೊಲೀಸ್ ಅಧಿಕಾರಿಗಳನ್ನು ಬಲಿಪಶು ಮಾಡಿದ್ದು ನಾಚಿಕೆಗೇಡಿನ ಸಂಗತಿ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಗೃಹಮಂತ್ರಿ ಜಿ.ಪರಮೇಶ್ವರ ಅವರಿಗೆ ಕನಿಷ್ಠ ನೈತಿಕತೆ ಇದ್ದರೆ ಈ ದುರಂತ ಜವಾಬ್ದಾರಿ ಹೊತ್ತು ಈ ಕೂಡಲೇ ರಾಜಿನಾಮೆ ನೀಡಬೇಕು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಆಗ್ರಹಿಸಿದ್ದಾರೆ.

ಸ್ವತಃ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳ ನೇತೃತ್ವದಲ್ಲಿ ಇಡೀ ಸರ್ಕಾರವೇ ವ್ಯವಸ್ಥೆಯ ಜವಾಬ್ದಾರಿ ಹೊತ್ತು, ಆರ್‌ಸಿಬಿ ವಿಜಯೋತ್ಸವದ ಆಚರಣೆಗೆ ಮುಂದಾಗಿ, ಇಂತಹ ಬಹುದೊಡ್ಡ ದುರಂತಕ್ಕೆ ಕಾರಣವಾಗಿರುವಾಗ, ತಮ್ಮ ನೈತಿಕ ಜವಾಬ್ದಾರಿಯನ್ನು ಮರೆತು ಜನರ ಆಕ್ರೋಶವನ್ನು ತಣ್ಣಗಾಗಿಸಬಹುದೆಂಬ ದುರಾಲೋಚನೆಯಿಂದ ಪೊಲೀಸ್ ಆಯುಕ್ತರೂ ಸೇರಿದಂತೆ ಐವರು ಪೊಲೀಸ್ ಅಧಿಕಾರಿಗಳನ್ನು ಬಲಿಪಶು ಮಾಡಿ ಅಮಾನತು ಮಾಡಿರುವುದು ನಾಚಿಕೆಗೇಡಿನ ಕ್ರಮವಾಗಿದೆ.

ಸಮಾರಂಭಕ್ಕೂ ಮುನ್ನವೇ ಕಾಲ್ತುಳಿತದಿಂದ ಸಾವು–ನೋವಾಗಿರುವ ಸುದ್ದಿ ತಲುಪಿದರೂ ಭಂಡತನದಿಂದ ಸನ್ಮಾನ ಕಾರ್ಯಕ್ರಮವನ್ನು ಮುಗಿಸಿ, ನಂತರ ಚಿನ್ನಸ್ವಾಮಿ ಸ್ಟೇಡಿಯಂನಲ್ಲೂ ಕಾರ್ಯಕ್ರಮ ಮುಂದುವರೆಸಿ, ಕಾಂಗ್ರೆಸ್ ಸರ್ಕಾರ ಕರುನಾಡಿನಲ್ಲಿ ಕರಾಳ ಇತಿಹಾಸ ಸೃಷ್ಟಿಸಿದೆ. ಜನರ ಆಕ್ರೋಶವನ್ನು ತಣಿಸಲು ಹಾಗೂ ಉಚ್ಚನ್ಯಾಯಾಲಯದ ನ್ಯಾಯ ದಂಡದಿಂದ ತಪ್ಪಿಸಿಕೊಳ್ಳಲು ಅಧಿಕಾರಿಗಳನ್ನು ಅಮಾನತುಗೊಳಿಸಿರುವುದು ಕುರ್ಚಿಗೆ ಅಂಟಿ ಕೂರುವ ಸ್ವಾರ್ಥದ ಕ್ರಮವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರು...!



ಬೆಂಗಳೂರು, ಜೂ.5– ಚಿನ್ನಸ್ವಾಮಿ ಕ್ರೀಡಾಂಗಣ ಬಳಿಯ ದುರಂತ ಸಂಬಂಧ 'ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರು' ಎಂಬಂತೆ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಹಾಗೂ ಇತರ ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಆರ್‌ಸಿಬಿ ವಿಜಯೋತ್ಸವದ ಹೆಸರಿನಲ್ಲಿ ಸಂದರ್ಭದ ಲಾಭ ಪಡೆಯುವ ಕೆಟ್ಟ ಸ್ವಾರ್ಥದ ಫಲವಾಗಿ 11 ಅಮಾಯಕ ಜೀವಗಳ ಬಲಿಯಾಗಿದೆ ಸಾವಿರಾರು ಜನರು ಸಂಕಟ ಅನುಭವಿಸಿದ್ದಾರೆ. ಇಂದು ಉಚ್ಚ ನ್ಯಾಯಾಲಯ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ಪರಿಗಣಿಸಿ, ಇಂದೇ ವಿಚಾರಣೆಯನ್ನು ಕೈಗೆತ್ತಿಕೊಂಡಿದೆ. ಈ ಸಂದರ್ಭದಲ್ಲಿ ನೈತಿಕ ಹೊಣೆ ಹೊತ್ತು ರಾಜಿನಾಮೆ ಕೊಡಬೇಕಾದ ಮುಖ್ಯಮಂತ್ರಿ ಉಪ ಮುಖ್ಯಮಂತ್ರಿ ಹಾಗೂ ಗೃಹ ಸಚಿವರು, ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರು ಎಂಬಂತೆ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಹಾಗೂ ಇತರ ಅಧಿಕಾರಿಗಳನ್ನು ಅಮಾನತುಗೊಳಿಸಿರುವುದು, ಸರ್ಕಾರದ ನಿರ್ಲಜ್ಜ ಹಾಗೂ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಬಹುದು ಎಂಬ ದುರಾಲೋಚನೆಯ ಕ್ರಮವಾಗಿದೆ. ದುರಂತದ ಬಗ್ಗೆ ಕರ್ನಾಟಕದ ಜನತೆ ಮಮ್ಮಲ ಮರುಗುತ್ತಿದ್ದಾರೆ, ಜನರ ಆಕ್ರೋಶ ಮುಗಿಲು ಮುಟ್ಟಿದೆ, ಮನೆ ಮಕ್ಕಳನ್ನು ಕಳೆದುಕೊಂಡ ಪೋಷಕರ ಆಕ್ರಂದನ ಮಾನವೀಯತೆ ಇರುವ ವರ ಕರುಳು ಹಿಂಡುತ್ತಿದೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ನಿನ್ನೆಯ ಘಟನೆ ಬಹು ದೊಡ್ಡ ದುರಂತವಾಗಿ ದಾಖಲಾಗಿದೆ. ಯಾವುದೇ ಮಾನದಂಡವಿಲ್ಲದೇ, ರಾಷ್ಟ್ರೀಯ ಅಥವಾ ರಾಜ್ಯದ ಮಹತ್ವದ ಹಿನ್ನೆಲೆಯಿಲ್ಲದೇ ವಿವೇಚನಾರಹಿತವಾಗಿ ಸಂದರ್ಭದ ಲಾಭ ಪಡೆಯಬಹುದು ಎಂಬ ದುರಾಸೆಯಿಂದ ರಾಜಧಾನಿಯ ಹೃದಯ ಭಾಗವನ್ನು ಸ್ಮಶಾನವನ್ನಾಗಿಸಿ ಸಂಭ್ರಮಾಚರಣೆ ಮಾಡಿದ ಮುಖ್ಯ ಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನು ಇಂದು ಕರ್ನಾಟಕದ ಜನತೆ ಶಪಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ನೈತಿಕತೆ ಮೆರೆದು ರಾಜಿನಾಮೆ ನೀಡಿ ಗೌರವ ಉಳಿಸಿಕೊಳ್ಳಬೇಕಾದ ಮುಖ್ಯಮಂತ್ರಿ, ಉಪ–ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಪೊಲೀಸ್ ಅಧಿಕಾರಿಗಳ ತಲೆದಂಡ ಪಡೆದುಕೊಂಡಿರುವುದು ನಿಜಕ್ಕೂ ತುಘಲಕ್ ಆಡಳಿತವನ್ನು ನೆನಪಿಸುತ್ತಿದೆ ಎಂದು ವಿಜಯೇಂದ್ರ ವಾಗ್ದಾಳಿ ನಡೆಸಿದ್ದಾರೆ.

ಪ್ರಸ್ತುತ ಪರಿಸರ ಸಮತೋಲನ ಕಾಪಾಡುವುದು ಬಹುಮುಖ್ಯ



ಎನ್‌ಕೆಎಫ್ ಪಬ್ಲಿಕ್ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ನಡೆಯಿತು.

ತಿ.ನರಸೀಪುರ, ಜೂ.5– ಆಧುನಿಕ ತಂತ್ರಜ್ಞಾನ ಹೆಚ್ಚಾದಂತೆ ಪ್ರಕೃತಿ ಸಹಜವಾಗಿ ನಿಸರ್ಗದ ಮೇಲಿನ ಒತ್ತಡ ಹೆಚ್ಚುತ್ತಿದೆ. ನೆಲ, ಜಲ, ಗಾಳಿ ಸೇರಿದಂತೆ ಎಲ್ಲವೂ ಇಂದು ಮಲಿನಗೊಳ್ಳುತ್ತಿವೆ. ಇದನ್ನು ಸರಿ ದೂಗಿಸಲು ಪರಿಸರದಲ್ಲಿ ಸಮತೋಲನ ಕಾಪಾಡಿಕೊಳ್ಳುವುದು ಬಹುಮುಖ್ಯ ಎಂದು ಎನ್‌ಕೆಎಫ್ ಪಬ್ಲಿಕ್ ಶಾಲೆಯ ಅಧ್ಯಕ್ಷ ಎನ್.ಕೆ.ಫರೀದ್ ತಿಳಿಸಿದರು.

ಪಟ್ಟಣದ ಹೊರ ವಲಯದ ಎನ್‌ಕೆಎಫ್ ಪಬ್ಲಿಕ್ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕಿಯರೊಡಗೂಡಿ ಸಸಿ ನೆಟ್ಟು ಅವರು ಮಾತನಾಡಿದರು.

ಪ್ರಕೃತಿ ನಮಗೆ ಶುದ್ಧ ಗಾಳಿ, ತಾಜಾ ನೀರು, ಆರೋಗ್ಯಕರ ಆಹಾರ, ನೈಸರ್ಗಿಕ ಸೌಂದರ್ಯ ಹೀಗೆ ಸಕಲವನ್ನೂ ನೀಡುತ್ತದೆ. ಆದರೆ ಮನುಷ್ಯನ ದುರಾಸೆ ಈ ಸುಂದರ ಪ್ರಕೃತಿಯನ್ನು ಹಾಳುಗೆಡುವುತ್ತಿದೆ. ಮನುಷ್ಯನ ಚಟುವಟಿಕೆಗಳು ಪ್ರಕೃತಿಯನ್ನು ಇನ್ನಿಲ್ಲದಂತೆ ನಾಶ ಮಾಡುತ್ತಿದೆ. ಪ್ಲಾಸ್ಟಿಕ್ ತ್ಯಾಜ್ಯ, ಗಾಳಿ, ಜಲ ಮಾಲಿನ್ಯ, ಕಾಡುಗಳನ್ನು ಕಡಿಯುವುದು, ಭೂಮಿ ಅಗೆಯುವುದು ಇಂತಹ ಚಟುವಟಿಕೆಗಳು ಪರಿಸರ ನಾಶಕ್ಕೆ ಮೂಲವಾಗುತ್ತಿವೆ. ಪರಿಸರ ನಮ್ಮ ಆಯ್ಕೆಯಲ್ಲ. ನಮ್ಮ ಜವಾಬ್ದಾರಿ ಎನ್ನುವುದನ್ನು ವಿಶ್ವ ಪರಿಸರ ದಿನ ನಮಗೆ ನೆನಪಿಸುತ್ತದೆ. ಇವತ್ತು ನಾವು ಗಿಡ ನೆಟ್ಟರೆ ನಾಳೆ ಹಾಗೂ ನಮ್ಮ ಭವಿಷ್ಯ ಹಸಿರಾಗಿರುತ್ತದೆ. ನಮ್ಮ ಭವಿಷ್ಯ ಉಜ್ವಲವಾಗುತ್ತದೆ ಎಂದರು.

ಪ್ರತಿಯೊಬ್ಬರೂ ಪರಿಸರ ಸಂರಕ್ಷಿಸಬೇಕು. ಗಿಡಮರಗಳನ್ನು ಹೆಚ್ಚು ಬೆಳೆಸುವುದರಿಂದ ಬಿಸಿಲ ಬೇಗೆ ಕಡಿಮೆಯಾಗಿ ಜನರಿಗೆ ಉತ್ತಮ ಆಮ್ಲಜನಕ ದೊರೆಯಲಿದೆ. ಪರಿಸರದ ಸೌಂದರ್ಯವೂ ಹೆಚ್ಚಾಗಲಿದೆ. ಮುಂದಿನ ಪೀಳಿಗೆಗಾಗಿ ಪರಿಸರ ಸಂರಕ್ಷಣೆ ಮಾಡುವುದು ಎಲ್ಲರ ಕರ್ತವ್ಯವಾಗಿದೆ. ಮನೆಯ ಸುತ್ತಲೂ ಗಿಡಗಳನ್ನು ಬೆಳೆಸುವುದಲ್ಲದೇ ಮನೆಯಲ್ಲಿ ಬಳಸಿದ ನೀರನ್ನು ಮರು ಬಳಕೆ ಮಾಡಬೇಕು. ಪ್ರಸ್ತುತ ಅಭಿವೃದ್ಧಿ ಹೆಸರಿನಲ್ಲಿ ಗಿಡ–ಮರಗಳ ಮಾರಣ ಹೋಮ ನಡೆಯುತ್ತಿದೆ. ಸುತ್ತಮುತ್ತಲಿನ ಪರಿಸರ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ. ಮರ–ಗಿಡಗಳನ್ನು ಪೋಷಿಸಿದರೆ, ನಮ್ಮ ವೈಯಕ್ತಿಕ ಆರೋಗ್ಯದ ಜೊತೆಗೆ ಪರಿಸರವೂ ಸಂರಕ್ಷಣೆ ಆಗುತ್ತದೆ ಎಂದರು.

ವಿಶ್ವ ಪರಿಸರ ದಿನ ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಬದುಕಲು ಮತ್ತು ಜಾಗತಿಕ ತಾಪಮಾನ ಏರಿಕೆಯ ವಿರುದ್ಧ ಹೋರಾಡುವ ಅಗತ್ಯವನ್ನು ನಮಗೆ ಕಲಿಸುತ್ತದೆ. ಅರಣ್ಯ ನಾಶದಿಂದ ಅಂತರ್ಜಲ ಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿದ್ದು, ಕುಡಿಯುವ ನೀರಿಗೂ ಪರಿತಪಿಸಬೇಕಾದ ದಿನಗಳು ಎದುರಾಗುತ್ತಿವೆ. ಗಿಡಮರಗಳನ್ನು ಕಡಿದು ಕಾಡನ್ನು ಬರಿದಾಗಿಸುತ್ತಿರುವುದರಿಂದ ಮಳೆ ಕೊರತೆಯಾಗಿದೆ. ಪರಿಸರ ಸಂರಕ್ಷಣೆ ಹಾಗೂ ಉತ್ತಮ ಮಳೆಗಾಗಿ ಸಸಿ ನೆಟ್ಟು ಅವುಗಳನ್ನು ಬೆಳೆಸಲು ಪಣತೊಡಬೇಕು. ಪರಿಸರವನ್ನು ಸಂರಕ್ಷಿಸಿ, ನೆಲ–ಜಲವನ್ನು ಉಳಿಸಬೇಕು. ನಮ್ಮ ಭವಿಷ್ಯದ ಜನಾಂಗಕ್ಕಾಗಿ ಆರೋಗ್ಯಕರ ಭೂಮಿ ರೂಪಿಸುತ್ತೇವೆ ಎನ್ನುವ ಪ್ರತಿಜ್ಞೆ ಮಾಡೋಣ ಎಂದರು.

ಶಾಲೆ ಮುಖ್ಯ ಶಿಕ್ಷಕಿ ಹೇಮ ಮಾತನಾಡಿ, ವಿದ್ಯಾರ್ಥಿ ಜೀವನದಿಂದಲೇ ಪರಿಸರ ಸಂರಕ್ಷಣೆ ಬಗ್ಗೆ ಕಾಳಜಿ ವಹಿಸಬೇಕು. ವಿದ್ಯಾರ್ಥಿಗಳು ಕನಿಷ್ಠ ಒಂದು ಗಿಡ ನೆಟ್ಟು ಬೆಳೆಸಬೇಕು. ನಶಿಸಿ ಹೋಗುತ್ತಿರುವ ನಮ್ಮ ಪರಿಸರ ಉಳಿಸಿ, ಬೆಳೆಸಬೇಕಾಗಿರುವುದು ಎಲ್ಲರ ಜವಾಬ್ದಾರಿಯಾಗಿದೆ. ಶಾಲೆ ಪರಿಸರವನ್ನು ಶುಚಿತ್ವದಿಂದಿಡುವುದು ವಿದ್ಯಾರ್ಥಿಗಳ ಕರ್ತವ್ಯವಾಗಿದೆ. ಶಾಲೆಯಲ್ಲಿ ವಿದ್ಯಾರ್ಥಿಗಳು ತಮ್ಮ ನೆನಪಿಗಾಗಿ ಗಿಡ ನೆಟ್ಟು ಪೋಷಿಸಬೇಕು. ನಮ್ಮ ಸುತ್ತಲಿನ ಪರಿಸರ ಸಂರಕ್ಷಿಸಿ, ವಿದ್ಯಾರ್ಥಿ ಜೀವನದಿಂದಲೇ ಪರಿಸರ ಪ್ರೇಮವನ್ನು ಮೈಗೂಡಿಸಿಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲೆ ಕಾರ್ಯದರ್ಶಿ ಜಹರಾ ಸುಲ್ತಾನ, ಜಂಟಿ ಕಾರ್ಯದರ್ಶಿ ಆಫ್ರಿನ್, ಇನಾಯತ್, ಸೈಯದ್ ಪಾಷ, ಶಿಕ್ಷಕಿಯರಾದ ಗೀತಾ, ನೂರ್ ಹಾಜಿರಾ, ರೇಖಾ, ಶಿಲ್ಪಶ್ರೀ, ಶಿಲ್ಪ, ರೇಖಾ, ರಶ್ಮಿ, ಅನಿತಾ, ಶೈಲಾ, ಪಲ್ಲವಿ, ಅರ್ಜುಮನ್ ಭಾನು, ರಕ್ಷಿತ, ನಾಗವೇಣಿ, ಪ್ರಿಯಾಂಕ, ಪದ್ಮಪ್ರಿಯ, ರಝಿಯಾ ಸೇರಿದಂತೆ ಪೋಷಕರು, ವಿದ್ಯಾರ್ಥಿಗಳು ಹಾಜರಿದ್ದರು.

ಎಲ್ಲರೂ ಪರಿಸರ ಸಂರಕ್ಷಣೆಗೆ ಮುಂದಾಗಿ



ಜೂನಿಯರ್ ಕಾಲೇಜು ಮೈದಾನದಲ್ಲಿ ಗಿಡ ನೆಡಲಾಯಿತು.

ನಂಜನಗೂಡು, ಜೂ.5– ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದ್ದು, ನಾವೆಲ್ಲರೂ ಗಿಡ ನೆಟ್ಟು ಕಾಡು ಬೆಳೆಸುವ ಜೊತೆಗೆ ಪರಿಸರ ಸಂರಕ್ಷಣೆಗೆ ಮುಂದಾಗಬೇಕಿದೆ ಎಂದು ಯುವ ಕಾಂಗ್ರೆಸ್ ತಾಲೂಕು ಅಧ್ಯಕ್ಷ ಕುಮಾರ್ ಹೇಳಿದರು.

ಪರಿಸರ ಸಂರಕ್ಷಣೆ ದಿನದ ಅಂಗವಾಗಿ ಯುವ ಕಾಂಗ್ರೆಸ್ ವತಿಯಿಂದ ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮನುಷ್ಯ, ಪ್ರಾಣಿ ಸೇರಿದಂತೆ ಸಕಲ ಜೀವರಾಶಿಗಳು ಆಹಾರ, ಗಾಳಿ, ನೀರು ಹಾಗೂ ಬದುಕುವ ಅಗತ್ಯತೆಗಾಗಿ ಪರಿಸರವನ್ನೇ ಅವಲಂಬಿಸಿದ್ದೇವೆ. ಆದರೆ ಮನುಷ್ಯ ಆಧುನಿಕತೆಯ ಬದುಕಿನ ಗೀಳಿಗೆ ಬಿದ್ದು ಪರಿಸರ ನಾಶಪಡಿಸುತ್ತಿದ್ದಾನೆ. ಆದ್ದರಿಂದ ಇತ್ತೀಚಿನ ದಿನಗಳಲ್ಲಿ ಆಹಾರ, ಗಾಳಿ, ನೀರು, ಮಣ್ಣು ಕಲುಷಿತಗೊಂಡಿದೆ. ಪರಿಣಾಮ ಅನೇಕ ರೋಗ ರುಜಿನಗಳು ಆವರಿಸುತ್ತಿವೆ. ನಾವೆಲ್ಲರೂ ಆರೋಗ್ಯದಿಂದ ಜೀವಿಸಬೇಕಾದರೆ ಉತ್ತಮ ಪರಿಸರ ಮುಖ್ಯ, ಆದ್ದರಿಂದ ಎಲ್ಲರೂ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದರು. ಈ ವೇಳೆ ನಗರಸಭಾ ಅಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರಿಯಾನ ಭಾನು, ಕಾಂಗ್ರೆಸ್ ಹಿಂದುಳಿದ ವರ್ಗ ಪ್ರಧಾನ ಕಾರ್ಯದರ್ಶಿ ನಾಗರಾಜು, ಮುಖಂಡರಾದ ಮಹೇಶ್, ಪ್ರದೀಪ್, ಸೋಮು, ಎನ್.ಎಸ್.ಮಾದಪ್ಪ, ರಮೇಶ್, ಲೋಕೇಶ್, ಪ್ರಾಂಶುಪಾಲ ದಿನೇಶ್ ಸೇರಿದಂತೆ ಇತರರಿದ್ದರು.

ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ: ಸವಾರ ಸಾವು



ಹೆಚ್.ಡಿ.ಕೋಟೆ, ಜೂ.5– ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಮೈಸೂರು–ಮಾನಂದವಾಡಿ ಮುಖ್ಯರಸ್ತೆಯ ಕೋಡಳ್ಳಿಮರದ ಬಳಿ ನಡೆದಿದೆ.

ತಾಲೂಕಿನ ಹೊಳೆಹುಂಡಿ ಗ್ರಾಮದ ನಿವಾಸಿ ರಾಜು (40) ಸಾವನ್ನಪ್ಪಿದವರು. ಈತ ತನ್ನ ಜಮೀನಿನಲ್ಲಿ ಕೆಲಸ ಮುಗಿಸಿ ಸ್ವಗ್ರಾಮಕ್ಕೆ ಬೈಕ್‌ನಲ್ಲಿ ಹೋಗುತ್ತಿದ್ದ ವೇಳೆ ಮೈಸೂರು–ಮಾನಂದವಾಡಿ ಮುಖ್ಯರಸ್ತೆಯ ಕೋಡಳ್ಳಿಮರದ ಬಳಿ ಹೆಚ್.ಡಿ.ಕೋಟೆಯಿಂದ ಮೈಸೂರಿಗೆ ತೆರಳುತ್ತಿದ್ದ ಸಾರಿಗೆ ಬಸ್ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ತೀವ್ರ ಗಾಯಗೊಂಡ ರಾಜು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹೆಚ್.ಡಿ.ಕೋಟೆ ಪೊಲೀಸರು ಪರಿಶೀಲನೆ ನಡೆಸಿ ಶವವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ವಿಷಯ ತಿಳಿದು ಶಾಸಕ ಅನಿಲ್ ಮೃತರ ಅಂತಿಮ ದರ್ಶನ ಪಡೆದು ಕುಟುಂಬದವರಿಗೆ ಸಾಂತ್ವನ ಹೇಳಿ ವೈಯಕ್ತಿಕ ಧನಸಹಾಯ ಮಾಡಿದರು. ಈ ಸಂಬಂಧ ಹೆಚ್.ಡಿ ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಣಸೂರಲ್ಲಿ ವಿಶ್ವ ಪರಿಸರ ದಿನಾಚರಣೆ



ಭಾರತೀಯ ಜನತಾ ಪಾರ್ಟಿ ಹುಣಸೂರು ಗ್ರಾಮಾಂತರ ಮತ್ತು ನಗರ ಮಂಡಳದಿಂದ ನಗರದ ಒಕ್ಕಲಿಗರ ಸಮುದಾಯ ಭವನದ ಆವರಣದಲ್ಲಿ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ನಡೆಸಲಾಯಿತು. ಈ ವೇಳೆ ಗ್ರಾಮಾಂತರ ಅಧ್ಯಕ್ಷ ಕಾಂತರಾಜು, ನಗರಾಧ್ಯಕ್ಷ ನಾರಾಯಣ, ನಗರಸಭಾಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಸದಸ್ಯರಾದ ವಿವೇಕ್, ಸೋಮಶೇಖರ್, ಗೋವಿಂದೇಗೌಡ, ಪ್ರಸನ್ನ, ಮಂಜು, ಕಿರಣ್, ಜೈರಾಮೇಗೌಡ, ರಾಮಚಂದ್ರ, ನಟರಾಜು, ಯಶೋಧಮ್ಮ, ಸತೀಶ, ನಾಗೇಂದ್ರ ಇತರರಿದ್ದರು.

ಸರಗೂರಲ್ಲಿ ವಿಶ್ವ ಪರಿಸರ ದಿನಾಚರಣೆ



ಪ್ರಗತಿ ವಿದ್ಯಾಸಂಸ್ಥೆಯಲ್ಲಿ ವಿಶ್ವ ಪರಿಸರ ದಿನ ನಡೆಯಿತು.

ಸರಗೂರು, ಜೂ.5– ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪಟ್ಟಣದ ಪ್ರಗತಿ ವಿದ್ಯಾ ಸಂಸ್ಥೆ ಆವರಣದಲ್ಲಿ ಗಿಡ ನೆಡಲಾಯಿತು.

ಸಂಸ್ಥೆ ಸಲಹೆಗಾರ ಡಿ.ಪಿ.ನಟರಾಜು ಮಾತನಾಡಿ, ಪರಿಸರ ದಿನ ಕೇವಲ ಗಿಡ ನೆಡುವುದಕ್ಕೆ ಸೀಮಿತವಾಗದೇ ಪರಿಸರ ಸ್ವಚ್ಛತೆಯೊಂದಿಗೆ ಉತ್ತಮ ವಾತಾವರಣ ಸೃಷ್ಟಿಸುವ ಕಾರ್ಯ ನಮ್ಮೆಲ್ಲರದಾಗಬೇಕು. ಮುಂದಿನ ಪೀಳಿಗೆಗೆ ಪರಿಸರ ಉಳಿಸಿ ಬೆಳೆಸಬೇಕು. ಇದಕ್ಕಾಗಿ ಪ್ರತಿ ಶಾಲೆ, ಗ್ರಾಮಗಳ ಮನೆಗಳಲ್ಲಿ ಒಂದೊಂದು ಗಿಡನೆಟ್ಟು ಅದನ್ನು ಪೋಷಿಸುವ ಕೆಲಸವಾಗಬೇಕು ಎಂದರು.

ತಾಲೂಕು ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ ಮಾತನಾಡಿದರು. ಪರಿಸರವಾದಿ ರಾಮಪ್ರಸಾದ್, ಶಾಲಾ ಆಡಳಿತಾಧಿಕಾರಿ ಚಲುವರಾಜು, ಶಿಕ್ಷಕರಾದ ಹೆಚ್.ವಿ.ವೆಂಕಟೇಶ್, ಯೋಗೀಶ್, ವಿ.ನಂದಿನಿ, ಎಸ್.ಲಕ್ಷ್ಮಿ, ಎಸ್.ಆರ್.ಮಮತಾ, ಹೆಚ್.ಎಲ್.ವೇಣು, ಎನ್.ಮಂಜುನಾಥ್, ಡಿ.ಎಸ್.ಯಶೋಧ, ಕೆ.ಎಸ್.ಸುರೇಶ್, ಮಹದೇವಮ್ಮ, ಕೆ.ಎಂ.ವಿದ್ಯಾ, ಎಸ್.ವಿ. ಚೈತ್ರಕುಮಾರಿ, ಎಸ್.ಎನ್.ನಂದಿನಿ, ಎಸ್.ಆರ್.ಸರ್ವಮಂಗಳ, ಸುನೀಲ್ ಸೇರಿದಂತೆ ಮಕ್ಕಳು ಹಾಜರಿದ್ದರು.

ನರೇಗಾ ಯೋಜನೆಯಡಿ ತೋಟಗಾರಿಕೆ ಬೆಳೆಗೆ ಅನುದಾನ



ತೆಂಗು ಬೆಳೆಯಲ್ಲಿ ರೋಗ ಮತ್ತು ಕೀಟಬಾಧೆ ಕುರಿತು ಕ್ಷೇತ್ರೋತ್ಸವ ನಡೆಯಿತು.

ಚುಂಚನಕಟ್ಟೆ, ಜೂ.5– ತೆಂಗು ಮತ್ತು ಇತರೆ ತೋಟಗಾರಿಕೆ ಬೆಳೆ ಬೆಳೆಯಲು ನರೇಗಾ ಯೋಜನೆಯಡಿ ಅನುದಾನ ನೀಡುತ್ತಿದ್ದು ರೈತರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕೆಆರ್.ನಗರ ಹಿರಿಯ ತೋಟಗಾರಿಕೆ ನಿರ್ದೇಶಕಿ ಭಾರತಿ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಚಿಕ್ಕಹನಸೋಗೆ ಗೇಟ್‌ನಲ್ಲಿ ತೋಟಗಾರಿಕೆ ಇಲಾಖೆ ಮತ್ತು ಅರ್ಕೇಶ್ವರ ತೋಟಗಾರಿಕೆ ರೈತ ಉತ್ಪಾದಕ ಕಂಪನಿ ವತಿಯಿಂದ ಆಯೋಜಿಸಿದ್ದ ತೆಂಗು ಬೆಳೆಯಲ್ಲಿ ರೋಗ ಮತ್ತು ಕೀಟಬಾಧೆ ಕುರಿತ ಕ್ಷೇತ್ರೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಕೆ.ಆರ್.ನಗರ ಕ್ಷೇತ್ರದಲ್ಲಿ ತೆಂಗು ಬೆಳೆಯಲ್ಲಿ ಕಂಡು ಬರುತ್ತಿರುವ ಕೆಂಪುಮೂತಿ, ಕಪ್ಪುಮೂತಿ ಕೀಟಗಳು ಮತ್ತು ಕಪ್ಪು ತಲೆ ಹುಳಗಳ ನಿಯಂತ್ರಣಕ್ಕೆ ಇಲಾಖೆ ಶ್ರಮಿಸುತ್ತಿದ್ದು, ಇವುಗಳಿಂದ ಹಾನಿ ಕಂಡು ಬಂದರೆ ಮೋಹಕ ಬಲೆಗಳನ್ನು ಇಲಾಖೆಯಿಂದ ಸಹಾಯಧನದಡಿ ನೀಡಲಾಗುತ್ತಿದ್ದು, ಇದನ್ನು ಸದುಪಯೋಗ ಪಡಿಸಿಕೊಳ್ಳುವಂತೆ ತಿಳಿಸಿದರು.

ಎಲಚನಹಳ್ಳಿ ತೋಟಗಾರಿಕೆ ಕಾಲೇಜಿನ ತೋಟಗಾರಿಕೆ ಸಹಾಯಕ ಪ್ರಾಧ್ಯಪಕ ಡಾ.ಆರ್.ಸಿದ್ದಪ್ಪ ಮಾತನಾಡಿ, ತೆಂಗಿನ ಗಿಡಗಳಲ್ಲಿ ಕಂಡು ಬರುವ ವಿವಿಧ ರೋಗಗಳು, ಕೀಟಗಳ ಬಗ್ಗೆ ತೋಟಗಾರಿಕೆ ಅಧಿಕಾರಿಗಳ ಗಮನಕ್ಕೆ ತಂದು ಅವುಗಳಿಗೆ ಔಷಧೋಪಚಾರ ಮಾಡಿ ನಿಯಂತ್ರಣ ಮಾಡಿ ಕಾಲಕಾಲಕ್ಕೆ ಗೊಬ್ಬರಗಳನ್ನು ನೀಡಿದರೆ ತೆಂಗಿನ ಬೆಳೆಯಲ್ಲಿ ಉತ್ತಮ ಇಳುವರಿ ಪಡೆಯಬಹುದು ಎಂದರು

ಚಿಕ್ಕಹನಸೋಗೆ ಗ್ರಾಮದ ಅಭಿಲಾಷ್ ಚಂದ್ರೇಗೌಡರ ತೋಟದಲ್ಲಿ ನಡೆದ ಕಾರ್ಯಕ್ರಮದಲ್ಲಿ ತೆಂಗಿನ ಮರಕ್ಕೆ ಕೀಟಗಳ ನಿಯಂತ್ರಣಕ್ಕೆ ಬೇರಿಗೆ ಔಷಧಿ ಕಟ್ಟುವ ಮೂಲಕ ಪ್ರಾತ್ಯಕ್ಷಿಕೆ ನೀಡಲಾಯಿತು. ಈ ವೇಳೆ ಇಲಾಖೆಯಿಂದ ಸಿಗುವ ಸವಲತ್ತುಗಳ ಮಾಹಿತಿ ನೀಡಲಾಯಿತು. ಈ ಸಂದರ್ಭ ತಾಲೂಕು ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಸಿ.ಕೆ.ರವೀಂದ್ರ, ತಾಪಂ ಮಾಜಿ ಸದಸ್ಯ ಶಿವಣ್ಣ, ರೈತರಾದ ಶ್ರೀಧರ್, ನರಸಿಂಹೇಗೌಡ, ತಿಮ್ಮಗೌಡ, ಕಾಂತರಾಜು, ಸಿ.ಕೆ.ಗಿರೀಶ್, ಸುರೇಶ್, ಮೋಹನ್ ಜವರೇಗೌಡ, ಲಕ್ಷ್ಮೇಗೌಡ, ರಾಮೇಗೌಡ, ಚಂದ್ರೇಗೌಡ, ಸಹಾಯಕ ತೋಟಗಾರಿಕೆ ನಿರ್ದೇಶಕ ಸಂತೋಷ್, ಸಹಾಯಕ ತೋಟಗಾರಿಕೆ ಅಧಿಕಾರಿ ಎಸ್.ನವೀನ್, ಜಿ.ಜೆ.ಶಂಕರ್, ಹೆಚ್.ಎಸ್.ರಾಘವೇಂದ್ರ, ಜಿ.ಹರೀಶ್, ಆರ್.ರಾಜೇಶ್, ಸಿಬ್ಬಂದಿ ಪಿ.ಚರಣ್ ಹರೀಶ್ ಸೇರಿದಂತೆ ಮತ್ತಿತರರಿದ್ದರು.

ಕಂಪಲಾಪುರ ಶಾಲೆಯಲ್ಲಿ ಪರಿಸರ ದಿನಾಚರಣೆ



ವಿಶ್ವ ಪರಿಸರ ದಿನದ ಅಂಗವಾಗಿ ಕಂಪಲಾಪುರ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಗಿಡ ನೆಡಲಾಯಿತು. ಈ ವೇಳೆ ಎಸ್‌ಡಿಎಂಸಿ ಅಧ್ಯಕ್ಷ ಕೃಷ್ಣ ಶಿಕ್ಷಕರಾದ ಜಯಪ್ರಕಾಶ್, ಪ್ರಸನ್ನ, ಮಹೇಶ್, ಭಾಗ್ಯ, ಗಿರಿಜಾಮಣಿ, ಗೀತಾ, ಶಾಲಿನಿ, ಪತ್ರಕರ್ತ ಸದಾಶಿವ ಇತರರಿದ್ದರು.

ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

ತಿ.ನರಸೀಪುರ, ಜೂ.5– ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂದು ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ತಿಳಿಸಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸೆಂಟ್ ಮೇರಿಸ್ ಕಾನ್ವೆಂಟ್ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಪಟ್ಟಣದ ಪುರಸಭೆ, ತಾಲೂಕು ಕಚೇರಿ, ತಾಪಂ ಆವರಣದಲ್ಲಿ ಸಸಿಗಳನ್ನು ನೆಟ್ಟು ಮಾತನಾಡಿದ ಅವರು, ಕಲುಷಿತಗೊಳ್ಳುತ್ತಿರುವ ನಿಸರ್ಗದ ವಾತಾವರಣ ಕಾಪಾಡುವ ಜವಾಬ್ದಾರಿ ಎಲ್ಲರ ಮೇಲಿದೆ. ಎಲ್ಲೆಡೆ ಪರಿಸರ ಹದಗೆಡುತ್ತಿದೆ. ಶುದ್ಧ ನೀರು, ಗಾಳಿ ಇಲ್ಲವಾಗಿದೆ. ಇದರಿಂದ ಮಾನವನ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮವಾಗಿ ಅನಾರೋಗ್ಯಕ್ಕೆ ಕಾರಣವಾಗುತ್ತಿದೆ. ನಿಸರ್ಗದಿಂದ ಪ್ರತಿಯೊಂದನ್ನು ಪಡೆಯುವ ನಾವು ಅದಕ್ಕಾಗಿ ಮರಳಿ ಕೊಡುಗೆ ನೀಡಲು ಗಿಡ, ಮರಗಳನ್ನು ಬೆಳೆಸಿ ಉತ್ತಮ ಪರಿಸರ ಕಾಪಾಡಲು ಮುಂದಾಗಬೇಕೆಂದು ಕರೆ ನೀಡಿದರು.

ಪುರಸಭೆ ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ ಮಾತನಾಡಿ, ಪ್ರತಿಯೊಬ್ಬರೂ ಒಂದೊಂದು ಗಿಡ ನೆಡುವ ಮೂಲಕ ಪರಿಸರದಲ್ಲಿ ಆಗುತ್ತಿರುವ ಹವಾಮಾನ ವೈಪರೀತ್ಯ ತಡೆಯಲು ಮುಂದಾಗಬೇಕು. ಕೇವಲ ಪರಿಸರ ದಿನಾಚರಣೆಯಂದೇ ಗಿಡ ನೆಡಬೇಕೆಂದಿಲ್ಲ. ನಾವು ಸಾಲು ಮರದ ತಿಮ್ಮಕ್ಕನಷ್ಟು ಸಾಧನೆ ಮಾಡಲು ಸಾಧ್ಯವಿಲ್ಲದಿದ್ದರೂ ಅವರಿಗಿದ್ದ ಪರಿಸರ ಕಾಳಜಿಗೆ ಗೌರವ ಸಲ್ಲಿಸುವ ಕೆಲಸ ಮಾಡಬೇಕಿದೆ. ಮನುಷ್ಯನಿಗೆ ನೀರು, ಗಾಳಿ, ಬೆಳಕು ಬಹು ಮುಖ್ಯ ಹಾಗಾಗಿ ಮರಗಳ ಸಂರಕ್ಷಣೆ ಮಾಡಲು ನಾವೆಲ್ಲರೂ ಪಣ ತೊಡಬೇಕಿದೆ ಎಂದರು.

ನಂತರ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯೋದಯ ಶಾಲೆ, ತಾಲೂಕು ಕಚೇರಿ, ಕೆನರಾ ಬ್ಯಾಂಕ್ ಮಾರ್ಗವಾಗಿ ಹೊರಟು ಭಗವಾನ್ ಸರ್ಕಲ್, ಖಾಸಗಿ ಬಸ್ ನಿಲ್ದಾಣ ಮಾರ್ಗವಾಗಿ ಜಾಥಾ ನಡೆಸಿದರು. ಶಾಲೆಯಲ್ಲಿ ಭಾಷಣ, ಚಿತ್ರಕಲಾ ಸ್ಪರ್ಧೆ, ನಾಟಕ ಹಾಗೂ ಇತರೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಈ ವೇಳೆ ಮುಖ್ಯಾಧಿಕಾರಿ ಬಿ.ಕೆ. ವಸಂತ ಕುಮಾರಿ ಸಾರ್ವಜನಿಕರಿಗೆ ಗಿಡಗಳನ್ನು ವಿತರಿಸಿದರು. ಅಧ್ಯಕ್ಷೆ ವಸಂತ ಶ್ರೀಕಂಠ, ಸದಸ್ಯ ಮಂಜುನಾಥ್, ಆರೋಗ್ಯಾಧಿಕಾರಿ ಮಧು, ಶ್ರೀಕಂಠ, ಪ್ರಾಂಶುಪಾಲ ಕ್ರಿಸ್ಟೋಫರ್ ವಿದ್ಯಾನಂದ್, ಉಪ ಪ್ರಾಂಶುಪಾಲ ಕೊಳ್ಳೇಗಾಲ ಗೋವಿಂದ್, ಶಿಕ್ಷಕರಾದ ಕರುಣೇಶ್, ನಂದಿನಿ ಮತ್ತಿತರರಿದ್ದರು.



ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಗಿಡ ನೆಟ್ಟರು.

ವಕೀಲರ ವಿರುದ್ಧ ಪ್ರಕರಣ ದಾಖಲು: ಪ್ರತಿಭಟನೆ



ವಕೀಲರು ಡಿವೈಎಸ್ಪಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಹುಣಸೂರು, ಜೂ.5– ವಕೀಲರ ಸಂರಕ್ಷಣಾ ಕಾಯ್ದೆ ಉಲ್ಲಂಘಿಸಿ ವಕೀಲರೊಬ್ಬರ ವಿರುದ್ಧ ಬಿಳಿಕೆರೆ ಠಾಣೆ ಇನ್ಸ್‌ಪೆಕ್ಟರ್ ಪ್ರಕರಣ ದಾಖಲಿಸಿದ್ದಾರೆ ಎಂದು ಆರೋಪಿಸಿ, ಠಾಣಾಧಿಕಾರಿ ಲೋಲಾಕ್ಷಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ವಕೀಲರು ನ್ಯಾಯಾಲಯದ ಕಲಾಪ ಬಹಿಷ್ಕರಿಸಿ ಡಿವೈಎಸ್ಪಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಹಿರಿಯ ವಕೀಲ ವಿ.ಜಿ.ಮುರಳೀಧರ್ ವಿರುದ್ಧ ಪ್ರಕರಣ ದಾಖಲಾಗಿದ್ದು, ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ವಕೀಲರ ಸಂಘದ ಪದಾಧಿಕಾರಿಗಳೊಂದಿಗೆ ಚರ್ಚಿಸಿದರಾದರೂ ಫಲಪ್ರದವಾಗಲಿಲ್ಲ.

ದಾಸ್ತವೇಜು ಬರಹಗಾರರೂ ಆಗಿರುವ ವಕೀಲ ವಿ.ಜಿ.ಮುರಳೀಧರ್ ತಾಲೂಕಿನ ಜೀನಹಳ್ಳಿ ಗ್ರಾಮದ ವ್ಯಕ್ತಿಯೊಬ್ಬರಿಗೆ ಸೇರಿದ ಭೂಮಿಯನ್ನು 2024ರ ಆ.10ರಲ್ಲಿ ಕಾನೂನು ರೀತ್ಯಾ ನೋಂದಣಿ ಮಾಡಿಸಿಕೊಟ್ಟಿದ್ದಾರೆ. ನಂತರ ಇದೇ ಭೂಮಿಯನ್ನು ಮಾಲೀಕರು ಬೇರೆಯವರಿಗೆ ಮಾರಾಟ ಮಾಡಿದ್ದಾರೆ. ಈ ಭೂಮಿಗೆ ಸಂಬಂಧಿಸಿದಂತೆ ಜೀನಹಳ್ಳಿಯ ಗಿರೀಶ್ ನಾಯ್ಕ ಅವರು 2025 ಮೇ 30 ರಂದು ಬಿಳಿಕೆರೆ ಠಾಣೆಗೆ ವಕೀಲ ಮುರುಳೀಧರ್ ಸೇರಿದಂತೆ ನಾಲ್ವರು ತಮ್ಮ ಪಿತ್ರಾರ್ಜಿತ ಆಸ್ತಿಗೆ ದಾಖಲಾತಿ ಸೃಷ್ಟಿಸಿ ಮಾರಾಟ ಮಾಡಿಸಿದ್ದಾರೆ ಎಂದು ದೂರು ನೀಡಿದ್ದರು. ಈ ಸಂಬಂಧ ಎಫ್‌ಐಆರ್ ದಾಖಲಾಗಿದ್ದು, ಪ್ರಕರಣ ದಾಖಲಿಸುವ ವೇಳೆ ಯಾವ ದಾಖಲಾತಿಯನ್ನು ಪರಿಶೀಲಿಸದೆ ಹಾಗೂ ಕರ್ನಾಟಕ ವಕೀಲರ ಸಂರಕ್ಷಣಾ ಕಾಯ್ದೆ–2023 ಹಾಗೂ ಭಾರತೀಯ ನ್ಯಾಯ ಸಂಹಿತೆ–2023ರ ಪ್ರಕಾರ ವಕೀಲರಿಗೆ ನೋಟೀಸ್ ನೀಡದೆ ಸಂಘದ ಅಧ್ಯಕ್ಷರ ಗಮನಕ್ಕೂ ತರದೆ ಎಫ್‌ಐಆರ್ ದಾಖಲಾಗಿದ್ದನ್ನು ತಿಳಿದು, ವಕೀಲರ ಸಂಘದಲ್ಲಿ ಚರ್ಚಿಸಿ ಕಲಾಪದಿಂದ ಹೊರಗುಳಿದು ಪ್ರತಿಭಟನೆ ನಡೆಸಲಾಯಿತು.

ಎಸ್‌ಪಿ ಮನವೊಲಿಕೆ: ವಕೀಲರೊಂದಿಗೆ ಡಿವೈಎಸ್‌ಪಿ ಗೋಪಾಲಕೃಷ್ಣ ಚರ್ಚಿಸಿದರು. ಆದರೆ ಸಮಸ್ಯೆ ಬಗೆಹರಿಯದಿದ್ದರಿಂದ ಮಾಹಿತಿ ತಿಳಿದ ಎಸ್‌ಪಿ ವಿಷ್ಣುವರ್ಧನ್ ಸ್ಥಳಕ್ಕಾಗಮಿಸಿ ವಕೀಲರ ಸಂಘದ ಅಧ್ಯಕ್ಷ ಶಿವಣ್ಣೇಗೌಡ ಹಾಗೂ ಪದಾಧಿಕಾರಿಗಳೊಂದಿಗೆ ಚರ್ಚಿಸಿದ ವೇಳೆ ಕರ್ತವ್ಯ ಲೋಪವೆಸಗಿರುವ ಇನ್ಸ್‌ಪೆಕ್ಟರ್ ವಿರುದ್ಧ ಕ್ರಮಕ್ಕೆ ಪಟ್ಟು ಹಿಡಿದರು. 2 ದಿನ ಸಮಯ ಕೇಳಿದರಾದರೂ ಒಪ್ಪದಿದ್ದಾಗ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಕ್ರಮವಹಿಸುವುದಾಗಿ ಭರವಸೆ ಇತ್ತ ನಂತರ ಪ್ರತಿಭಟನೆ ಹಿಂಪಡೆದರು.

ಕಲಾಪದಿಂದ ಹೊರಗೆ, ವಕೀಲರ ಸಂಘದ ನಿರ್ಧಾರ: ಬುಧವಾರ ರಾತ್ರಿ ವಕೀಲರ ಸಂಘದಲ್ಲಿ ಅಧ್ಯಕ್ಷ ಶಿವಣ್ಣೇಗೌಡರ ಅಧ್ಯಕ್ಷತೆಯಲ್ಲಿ ನಡೆದ ತುರ್ತು ಸಭೆ ನಂತರ ಮಾಹಿತಿ ನೀಡಿ, ಬಿಳಿಕೆರೆ ಠಾಣಾ ಇನ್ಸ್‌ಪೆಕ್ಟರ್ ವಕೀಲರ ಸಂರಕ್ಷಣಾ ಕಾಯ್ದೆ ಅನುಸರಿಸದೆ, ನೈಸರ್ಗಿಕ ನ್ಯಾಯದ ರೀತ್ಯ ವಿಚಾರಣೆ ನಡೆಸದೆ ಪ್ರಕರಣ ದಾಖಲಿಸಿದ್ದಾರೆ. ಇದು ಸಂಪೂರ್ಣ ಕಾಯ್ದೆ ಉಲ್ಲಂಘನೆಯಾಗಿದ್ದು, ಇನ್ಸ್‌ಪೆಕ್ಟರ್ ವಿರುದ್ಧ ಕ್ರಮ ವಾಗುವವರೆಗೂ ಸಂಘದ ತೀರ್ಮಾನದಂತೆ ಕಲಾಪದಿಂದ ಸ್ವಯಂ ಪ್ರೇರಿತರಾಗಿ ಕಲಾಪದಿಂದ ಹೊರಗುಳಿಯಲಿದ್ದೇವೆ ಎಂದರು.

ಪ್ರತಿಭಟನೆಯಲ್ಲಿ ಸಂಘದ ಪದಾಧಿಕಾರಿಗಳಾದ ಹರೀಶ್, ಸಂದೀಪ್, ನೇತ್ರಾವತಿ, ಬಿ.ಪಿ.ಪರಮೇಶ್, ಶ್ರೀಧರ್, ಹಿರಿಯ ವಕೀಲರಾದ ಎಂ.ಆರ್.ಹರೀಶ್, ಯೋಗಾನಂದ ಕುಮಾರ್, ಯೋಗಣ್ಣೇಗೌಡ, ಮುರಳೀಧರ್, ಶ್ರೀನಿವಾಸ್, ಇಂದ್ರೇಶ್ ಸೇರಿದಂತೆ ನೂರಕ್ಕೂ ಹೆಚ್ಚು ವಕೀಲರಿದ್ದರು.

ಮೈಸೂರು ಮಿತ್ರ

ಶುಕ್ರವಾರ 6 ಜೂನ್ 2025



ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಉಂಟಾದ ಸಾವು–ನೋವಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇರ ಹೊಣೆ

● ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ● ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಧೈರ್ಯ, ತಾಕತ್ತು, ನಾಯಕತ್ವ ಇದ್ದಲ್ಲಿ ಸಂಪುಟದಿಂದ ವಜಾ ಮಾಡಲಿ; ಆಗ್ರಹ

ಬೆಂಗಳೂರು, ಜೂ.5(ಕೆಎಂಶಿ)– ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ವಿಜಯೋತ್ಸವ ಸಂದರ್ಭದಲ್ಲಿ ನೂಕು ನುಗ್ಗಲು ಹಾಗೂ ಕಾಲ್ತುಳಿತದಿಂದ ಉಂಟಾದ ಸಾವು–ನೋವುಗಳಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇರ ಹೊಣೆ ಎಂದಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಅವರನ್ನು ತಕ್ಷಣವೇ ಮಂತ್ರಿಮಂಡಲದಿಂದ ಕಿತ್ತೊಗೆಯಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ತಡರಾತ್ರಿ ದೆಹಲಿಯ ತಮ್ಮ ಸರ್ಕಾರಿ ನಿವಾಸದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಎಲ್ಲಾ ದುರಂತಗಳಿಗೆ ಶಿವಕುಮಾರ್ ನೇರ ಹೊಣೆ ಎಂದಿದ್ದಾರೆ.

ಕರ್ನಾಟಕದಲ್ಲಿ ಮೂರ್ಖರ ಆಡಳಿತ ನಡೆಯುತ್ತಿದೆ ಎಂದು ಕಿಡಿಕಾರಿದ ಕುಮಾರಸ್ವಾಮಿ, ಇಂತಹ ಅನಾಹುತವನ್ನು ಸಹಿಸಲು ಸಾಧ್ಯವಿಲ್ಲ. ಮುಖ್ಯಮಂತ್ರಿ ಅವರಿಗೆ ನಿಜವಾಗಿ ಧೈರ್ಯ, ತಾಕತ್ತು ಮತ್ತು ನಾಯಕತ್ವ ಇದ್ದರೆ, ಕೂಡಲೇ ಶಿವಕುಮಾರ್ ಅವರನ್ನು ಸಂಪುಟದಿಂದ ವಜಾ ಮಾಡಬೇಕು.

ಆರ್‌ಸಿಬಿಯು ಐಪಿಎಲ್–2025ರ ಜಯವನ್ನು ತಮ್ಮ ಸಾಧನೆ ಎಂಬುದಾಗಿ ಬಿಂಬಿಸಿಕೊಳ್ಳಲು ನಡೆಸಿದ ಯತ್ನದ ದುಷ್ಫಲ ಇದಾಗಿದೆ. ಕ್ರೀಡಾಂಗಣದ ಬಳಿ ನಾಲ್ಕು ಹೆಣಗಳು ಬಿದ್ದಾಗಲೂ ವಿಧಾನಸೌಧದ ಮೆಟ್ಟಿಲ ಮೇಲೆ ವಿಜಯೋತ್ಸವ ಆಚರಿಸಿದ ಮೂರ್ಖ ಸರ್ಕಾರ.

ಹೊರಗಡೆ ಕ್ರೀಡಾಭಿಮಾನಿಗಳ ಹೆಣಗಳು ಬಿದ್ದು ಜನ ನೋವಿನಿಂದ ಚೀರುತ್ತಿದ್ದರೆ, ಶಿವಕುಮಾರ್, ಕ್ರೀಡಾಂಗಣದ ಒಳಗೆ ಟ್ರೋಫಿ ಎತ್ತಿಕೊಂಡು ಅದಕ್ಕೆ ಮುತ್ತಿಟ್ಟು ವಿಜಯೋತ್ಸವ ಆಚರಿಸುತ್ತಿದ್ದರು.

ಆ ವೇಳೆಗೆ 11 ಮಂದಿ ಸಾವಿಗೀಡಾಗಿ 40ಕ್ಕೂ ಹೆಚ್ಚು ಗಾಯಾಳುಗಳು ಸಾವಿನೊಂದಿಗೆ ಹೋರಾಟ ನಡೆಸುತ್ತಿದ್ದಾಗಲೂ, ಈ ವ್ಯಕ್ತಿ ತಾನೇ ಆಟವಾಡಿ ಟ್ರೋಫಿ ಗೆದ್ದಂತೆ ವಿಜೃಂಭಿಸುತ್ತಿದ್ದರು.

ಶ್ರಮಪಟ್ಟು ಆಟವಾಡಿ ಟ್ರೋಫಿ ಗೆದ್ದ ಕ್ರೀಡಾಪಟುಗಳಿಗೇ ಪ್ರಶಸ್ತಿ ಎತ್ತಿಹಿಡಿಯಲು ಸಾಧ್ಯವಾಗಿರಲಿಲ್ಲ. ಕನಕಪುರದ ತನ್ನ ಬೆಂಬಲಿಗರ ಪಡೆಯೊಂದಿಗೆ ವಿಮಾನ ನಿಲ್ದಾಣಕ್ಕೆ ತೆರಳಿ ಆಟಗಾರರನ್ನು ಸ್ವಾಗತಿಸಿದ ಪರಿ ಏನು, ಕ್ರಿಕೆಟ್ ದಿಗ್ಗಜ ವಿರಾಟ್ ಕೊಹ್ಲಿ ಅವರ ಕೈಗೆ ಕನ್ನಡದ ಬಾವುಟ ನೀಡಿ ವಿಜೃಂಭಿಸಿದ್ದೇನು. ಆ ನಂತರ ಬೆಂಗಾವಲು ಪಡೆಯೊಂದಿಗೆ ಅವರನ್ನು ಕರೆತಂದಿದ್ದು, ಯಾವುದಾದರೂ ಒಂದು ಕಡೆ ವಿಜಯೋತ್ಸವ ಆಚರಣೆ ನಿಗದಿಪಡಿಸಿದ್ದರೆ, ಇಂತಹ ದುರಂತ ಸಂಭವಿಸುತ್ತಿರಲಿಲ್ಲ.

ಸ್ವಪ್ರತಿಷ್ಠೆಗಾಗಿ ಶಿವಕುಮಾರ್ 11 ಕ್ರೀಡಾಭಿಮಾನಿಗಳ ಜೀವ ಬಲಿ ಪಡೆದರು. ಯಾವುದೇ ಮುಂಜಾಗ್ರತಾ ಕ್ರಮಗಳಿಲ್ಲದೆ ಕಾರ್ಯಕ್ರಮ ಆಯೋಜಿಸಿದ ದುಷ್ಪರಿಣಾಮ ಇದು.

ನೆಪ ಮಾತ್ರಕ್ಕೆ ಡಾ.ಜಿ.ಪರಮೇಶ್ವರ್ ಗೃಹ ಸಚಿವರಾಗಿದ್ದಾರೆ. ಮುಖ್ಯಮಂತ್ರಿ, ಕುಳಿತುಕೋ ಎಂದರೆ ಕೂರುತ್ತಾರೆ, ನಿಲ್ಲು ಎಂದರೆ ನಿಲ್ಲುತ್ತಾರೆ ಎಂದು ಮೂದಲಿಸಿದರು.

ಕಾಂಗ್ರೆಸ್ ಗೂಂಡಾಗಳು: ವರನಟ ಡಾ.ರಾಜ್‌ಕುಮಾರ್ ನಿಧನರಾದಾಗ ಕಾಂಗ್ರೆಸ್ ಗೂಂಡಾಗಳು ಅಂದಿನ ನನ್ನ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಗಲಭೆ ನಡೆಸಿದ್ದರು, ಅನಿವಾರ್ಯವಾಗಿ ಗೋಲಿಬಾರ್ ಮಾಡಬೇಕಾಯಿತು.

ನಾನು 2ನೇ ಬಾರಿ ಮುಖ್ಯಮಂತ್ರಿಯಾದಾಗ, ಆ ಅವಧಿಯಲ್ಲಿ ನಟ ಅಂಬರೀಶ್ ನಿಧನರಾದಾಗ ಲಕ್ಷಾಂತರ ಅಭಿಮಾನಿಗಳು ಸೇರಿದ್ದರು, ಆದರೆ, ಎಲ್ಲೂ ಗಲಭೆ ಆಗಲಿಲ್ಲ ಎಂದರು.

ಎಂಟ್ರಿ ಫ್ರೀ ಅಂತಾ ಹೇಳಿ ಸ್ಟೇಡಿಯಂನ 4 ಗೇಟ್ ಓಪನ್ ಮಾಡಿಲ್ಲ ಯಾಕೆ?

ದಿವ್ಯಾಂಶಿ ತಾಯಿ ಆಕ್ರೋಶ



ಮೃತೆ ದಿವ್ಯಾಂಶಿ   ತಾಯಿ ಅಶ್ವಿನಿ

ಬೆಂಗಳೂರು, ಜೂ.5– ಸ್ಟೇಡಿಯಂಗೆ ಎಂಟ್ರಿ ಫ್ರೀ ಅಂದ ಮೇಲೆ ಯಾಕೆ ನೀವು 4 ಗೇಟ್ ಕೂಡ ಓಪನ್ ಮಾಡಿಲ್ಲ. ಯಾಕೆ ಎಲ್ಲರೂ 1 ಗೇಟ್‌ನಲ್ಲೇ ಸಾಯ್ಬೇಕಿತ್ತು ಎಂದು ದಿವ್ಯಾಂಶಿ ತಾಯಿ ಅಶ್ವಿನಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬುಧವಾರ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಕಾಲ್ತುಳಿತ ಉಂಟಾದ ಬಗ್ಗೆ ಮಾತನಾಡಿದ ಅವರು, ನನ್ನ ಮಗಳಿಗೆ ವಿರಾಟ್ ಕೊಹ್ಲಿ ಮೇಲೆ ಅಪಾರ ಅಭಿಮಾನವಿತ್ತು. ಹಾಗಾಗಿ ವಿರಾಟ್ ಕೊಹ್ಲಿಯನ್ನು ನೋಡಬೇಕು ಅಂತಾ ಹಠ ಮಾಡಿದ್ದಳು. ಅವಳಿಗೆ ಗೋಲ್ಡನ್ ಮೆಮೋರಿ ಕೊಡೋಣ ಅಂತಾ ಹೋದೆವು. ಅವಳ ಸಾವಿಗೆ ನಾನೇ ಹೊಣೆ ಬೇರೆ ಯಾರು ಅಲ್ಲ ಎಂದು ಕಣ್ಣೀರು ಹಾಕಿದರು.

ಚಿನ್ನಸ್ವಾಮಿ ಸ್ಟೇಡಿಯಂ ವಿಶ್ವ ವಿಖ್ಯಾತ ಕ್ರೀಡಾಂಗಣ. ದೇಶ ವಿದೇಶದಿಂದ ಆಟಗಾರರು ಬಂದು ಆಡಿದ್ದಾರೆ. ಅದು ಗಲ್ಲಿ ಕ್ರಿಕೆಟ್ ಅಲ್ಲ. ಅಲ್ಲಿನ ಜನದಟ್ಟಣೆ ಬಗ್ಗೆ ಮೊದಲೇ ಗೊತ್ತಿತ್ತು. ಆಗಲೇ ಯೋಚನೆ ಮಾಡ್ಬೇಕಿತ್ತು. 1 ಗೇಟ್‌ನಲ್ಲಿ ಎಲ್ಲರೂ ಸ್ಟೇಡಿಯಂ ಒಳಗಡೆ ಹೋಗೋಕೆ ಆಗಲ್ಲ. ಅಲ್ಲಿದ್ದವರ ಕಣ್ಣ ಮುಂದೆಯೇ ಜನರು ಕೆಳಗೆ ಬಿದ್ದು ಸಾಯ್ತಿದ್ದಾರೆ ಎಂದು ಗೊತ್ತಾದರೂ ಗೇಟ್ ಓಪನ್ ಮಾಡಿಲ್ಲ. ಇದರ ಬಗ್ಗೆ ಏನು ಹೇಳಬೇಕು ಅಂತಾ ಗೊತ್ತಾಗ್ತಿಲ್ಲ ಎಂದು ಕಿಡಿಕಾರಿದರು.

ಸ್ಟೇಡಿಯಂನಲ್ಲಿ 21 ಗೇಟ್ ಇದೆ. ಅದು ಓಬವ್ವನ ಕಿಂಡಿ ಅಲ್ಲ. ಅಲ್ಲಿ ಒಂದು ಗೇಟ್‌ನಲ್ಲಿ ಕೇವಲ ಅರ್ಧ ಭಾಗದ ಗೇಟ್ ಮಾತ್ರ ತೆರೆದಿದ್ದರು. ಪೂರ್ತಿಯಾಗಿ ಎರಡೂ ಗೇಟ್ ತೆರೆದಿದ್ದರೆ ಜನರು ಆರಾಮಾಗಿ ಒಳಗೆ ಹೋಗ ಬಹುದಿತ್ತು. ಆದರೆ ಅಲ್ಲಿ ಅವರ ಉದ್ದೇಶ ಏನಿತ್ತು ಅಂತಾ ನನಗೆ ಗೊತ್ತಾಗ್ತಿಲ್ಲ. ಚಿನ್ನಸ್ವಾಮಿಗೆ ಇದೇ ಮೊದಲ ಬಾರಿ ಅಲ್ಲ ಜನ ಬರುತ್ತಿರುವುದು. ಆರ್‌ಸಿಬಿ ಬಗ್ಗೆ ಎಷ್ಟು ಕ್ರೇಜ್ ಇದೆ ಅಂತಾ ಎಲ್ಲರಿಗೂ ಗೊತ್ತಿದೆ. ರೋಡ್ ಶೋ ಮಾಡಿದ್ದರೆ ಈ ರೀತಿಯ ದುರ್ಘಟನೆ ನಡೆಯುತ್ತಿರಲಿಲ್ಲ. ಜನ ರಸ್ತೆ ಬದಿ ನಿಂತು ನೋಡಿಕೊಂಡು ಹೋಗುತ್ತಿದ್ದರು. ಆಗ ಜನರು ಸ್ಟೇಡಿಯಂಗೆ ಹೋಗಿ ನೋಡಬೇಕು ಅಂದ್ಕೊಳ್ಳುತ್ತಿರಲಿಲ್ಲ. ವಿಜಯಯಾತ್ರೆ ರದ್ದು ಮಾಡಿದ ಮೇಲೆ ಸರ್ಕಾರ ಒಂದು ದಿನ ಸಮಯ ತೆಗೊಂಡು ಸರಿಯಾದ ವ್ಯವಸ್ಥೆ ಮಾಡಿ ಕಾರ್ಯಕ್ರಮ ಆಯೋಜನೆ ಮಾಡಬೇಕಿತ್ತು ಎಂದು ಆಕ್ರೋಶ ಹೊರಹಾಕಿದರು.

ದಿವ್ಯಾಂಶಿ ಮಗಳು ಅನ್ನುವುದಕ್ಕೆ ಹೆಚ್ಚಾಗಿ ಬೆಸ್ಟ್ ಫ್ರೆಂಡ್ ಆಗಿದ್ದಳು. ಅವಳಿಗೆ ಯಾವುದೇ ರೀತಿಯ ಶೋಕಿ ಇರಲಿಲ್ಲ. ಯಾವಾಗಲೂ ಅಮ್ಮ ನಿನಿಷ್ಟ ಅಂತಿದ್ಳು. ದಿವ್ಯಾಂಶಿ ನನಗೆ ಎರಡನೇ ತಾಯಿಯಾಗಿದ್ದಳು. ಅವಳು ಸ್ವಿಮ್ಮಿಂಗ್‌ನಲ್ಲಿ ಗೋಲ್ಡ್ ಮೆಡಲ್ ಸಹ ಪಡೆದಿದ್ದಳು. ಮಗಳು ರಾತ್ರಿ ಆರ್‌ಸಿಬಿ ಕಪ್ ಗೆದ್ದ ಖುಷಿಯಲ್ಲಿದ್ದಳು. ಬೆಳಗ್ಗೆ ಸ್ಕೂಲ್ ಹೋಗೋಕೆ ರೆಡಿಯಾಗಿದ್ದಳು. ಆ ವೇಳೆ ಆರ್‌ಸಿಬಿ ಟೀಮ್ ಬೆಂಗಳೂರಿಗೆ ಬರುತ್ತಿದೆ ಎಂಬ ಸುದ್ದಿ ಗೊತ್ತಾಯ್ತು. ಆಗ ಅವಳು ವಿರಾಟ್ ಕೊಹ್ಲಿನ ನೋಡ್ಬೇಕು ಅಂತಾ ಹಠ ಮಾಡಿದ್ದಳು. ಅವಳಿಗೆ ಗೋಲ್ಡನ್ ಮೆಮೋರಿ ಕೊಡೋಣ ಅಂತಾ ಕರೆದುಕೊಂಡು ಹೋದೆ ಆದರೆ ಅಲ್ಲಿ ಸರಿಯಾಗಿ ಪೊಲೀಸ್ ಫೋರ್ಸ್ ಇರಲಿಲ್ಲ. ನಾನು ಇನ್ನೊಬ್ಬರನ್ನು ಕಾಪಾಡಲು ಹೋಗಿ ನನ್ನ ಮಗಳು ಕಾಣೆಯಾದಳು. ಕೆಳಗೆ ಬಿದ್ದ ನನ್ನ ಮಗಳನ್ನು ಯಾರೂ ಕಾಪಾಡಲಿಲ್ಲ. ಅಲ್ಲಿದ್ದ ಯಾರಿಗೂ ಆ ಸಮಯದಲ್ಲಿ ಮಾನವೀಯತೆನೇ ಇರಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆರ್‌ಸಿಬಿ ಸಂಭ್ರಮಾಚರಣೆ ದುರಂತ; ಸಾವು–ನೋವಿಗೆ ಕಾಂಗ್ರೆಸ್ ಸರ್ಕಾರವೇ ಹೊಣೆ

ಸಿಎಂ, ಡಿಸಿಎಂ, ಗೃಹಸಚಿವರ ರಾಜೀನಾಮೆಗೆ ಬಿಜೆಪಿ ಮುಖಂಡ ರಘು ಕೌಟಿಲ್ಯ ಆಗ್ರಹ



ರಘು ಕೌಟಿಲ್ಯ

ಮೈಸೂರು, ಜೂ.5– ಐಪಿಎಲ್ ವಿಜೇತ ಆರ್‌ಸಿಬಿ ತಂಡದ ಸಂಭ್ರಮಾಚರಣೆ ವೇಳೆ ನಡೆದ ದುರಂತಕ್ಕೆ ಕಾಂಗ್ರೆಸ್ ಸರ್ಕಾರವೇ ಹೊಣೆ ಹೊರಬೇಕು ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಆಗ್ರಹಿಸಿದ್ದಾರೆ.


ಈ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿರುವ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಈ ದುರ್ಘಟನೆಯ ಹೊಣೆ ಹೊರಲೇಬೇಕು. ಕನಿಷ್ಠ ನೈತಿಕತೆ ಇದ್ದರೆ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಗೃಹಸಚಿವ ಡಾ.ಜಿ.ಪರಮೇಶ್ವರ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಸಾವಿನ ಮನೆಯಲ್ಲಿ ಹಬ್ಬ!: ವಿಧಾನಸೌಧದಲ್ಲಿ ಸನ್ಮಾನ ಕಾರ್ಯಕ್ರಮ ನಡೆಯುತ್ತಿದ್ದಾಗಲೇ ಚಿನ್ನಸ್ವಾಮಿ ಕ್ರೀಡಾಂಗಣದ ಹೊರಭಾಗದಲ್ಲಿ ಕಾಲ್ತುಳಿತ ನಡೆದು ಕೆಲವರು ಮೃತಪಟ್ಟ ಸುದ್ದಿ ತಲುಪಿದರೂ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಗೃಹ ಸಚಿವರು, ಇನ್ನಿತರ ಸಚಿವರು ಹಾಜರಿದ್ದು ಕಾರ್ಯಕ್ರಮವನ್ನು ಮುಂದುವರಿಸಿದ್ದಾರೆ. ಇದು ಮಾನವೀಯ ಸಂವೇದನೆಯೇ ಇಲ್ಲದ ಭಂಡ ನಡವಳಿಕೆ. 11 ಮಂದಿ ಸತ್ತಿದ್ದಾರೆ ಎಂಬುದು ಗೊತ್ತಾದ ಬಳಿಕವೂ ಕ್ರೀಡಾಂಗಣದಲ್ಲಿ ಸನ್ಮಾನ ಕಾರ್ಯಕ್ರಮ ನಡೆದಿರುವುದು ಸಾವಿನ ಮನೆಯಲ್ಲಿ ಆಚರಿಸಿದ ಹಬ್ಬವಲ್ಲದೇ ಬೇರೇನೂ ಅಲ್ಲ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

ಉತ್ತರದಾಯಿತ್ವ ನಿರ್ಧಾರವಾಗಲಿ: ಜನರ ಜೀವ ಬಲಿ ಪಡೆದುದರ ಹೊಣೆ ಹೊರಬೇಕಾಗಿದ್ದ ಆರ್‌ಸಿಬಿ ತಂಡದ ಮಾಲೀಕರೂ ಸನ್ಮಾನ ಮಾಡಿ ಸಂಭ್ರಮಿಸಿದ್ದು ಅಕ್ಷಮ್ಯ. ಈ ಎಲ್ಲದಕ್ಕೂ ಉತ್ತರದಾಯಿತ್ವ ನಿರ್ಣಯವಾಗಲೇಬೇಕು. ಕಾಂಗ್ರೆಸ್ ಸರ್ಕಾರ ಈ ಹೃದಯವಿದ್ರಾವಕ ಘಟನೆಯ ಹೊಣೆ ಹೊರಲೇಬೇಕು. ಕನಿಷ್ಠ ನೈತಿಕತೆ ಉಳಿಸಿಕೊಂಡಿದ್ದರೆ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಡಾ.ಜಿ.ಪರಮೇಶ್ವರ್ ಅವರು ತಮ್ಮ ಪದವಿಗಳಿಗೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ದೇಶದ ಯುವಜನತೆ ಭವಿಷ್ಯಕ್ಕಾಗಿ ಐಪಿಎಲ್ ಬ್ಯಾನ್ ಅನಿವಾರ್ಯ

ಕ್ರಿಕೆಟ್ ಮಂಡಳಿಯಿಂದ ಮೃತರ ಕುಟುಂಬಕ್ಕೆ ತಲಾ ಐದು ಕೋಟಿ ಪರಿಹಾರಕ್ಕೆ ಎಂ.ಕೆ.ಸೋಮಶೇಖರ್ ಆಗ್ರಹ



ಮೈಸೂರು, ಜೂ.5– ದೇಶದ ಯುವಜನತೆ ಭವಿಷ್ಯದ ಹಿತ ದೃಷ್ಟಿಯಿಂದ ಹೊಡಿಬಡಿ ಮಾದರಿಯ ಐಪಿಎಲ್ ಪಂದ್ಯಾವಳಿಯನ್ನು ರದ್ದುಪಡಿಸಬೇಕು ಎಂದು ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಆಗ್ರಹಿಸಿದ್ದಾರೆ.

ಕ್ರೀಡಾಪ್ರೇಮದ ಬಗ್ಗೆ ಯಾವುದೇ ಆಕ್ಷೇಪವಿಲ್ಲ. ಆದರೆ ಆರ್‌ಸಿಬಿ ಐಪಿಎಲ್ ಟ್ರೋಫಿ ಗೆದ್ದ ಸಂಭ್ರಮಾಚರಣೆ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತದಲ್ಲಿ ಮಕ್ಕಳು, ಯುವಕ–ಯುವತಿಯರು ಸಾವನ್ನಪ್ಪಿದ್ದು ಮಾತ್ರ ವಿಷಾದನೀಯ. ದೇಶದ ಭವಿಷ್ಯವಾಗಬೇಕಿದ್ದ ಯುವ ಜನರನ್ನು ದುರಂತದಲ್ಲಿ ಕಳೆದುಕೊಂಡಿದ್ದೇವೆ. ಇದರಿಂದ ಅವರ ಕುಟುಂಬಕ್ಕಷ್ಟೇ ಅಲ್ಲ ದೇಶಕ್ಕೂ ತುಂಬಲಾರದ ನಷ್ಟ. ಮೂರು ತಿಂಗಳ ಕಾಲ ನಡೆದ ಐಪಿಎಲ್ ಪಂದ್ಯಾವಳಿಯನ್ನು ಭಾರತವಷ್ಟೇ ಅಲ್ಲ ಜಗತ್ತಿನೆಲ್ಲೆಡೆ ಕ್ರಿಕೆಟ್ ಅಭಿಮಾನಿಗಳು ವೀಕ್ಷಿಸಿದ್ದಾರೆ. ಆದರೆ ಈ ಟೂರ್ನಿಯಿಂದ ಬೆಟ್ಟಿಂಗ್‌ಗೆ ಬಲಿಯಾಗಿ ಲಕ್ಷಾಂತರ ಕುಟುಂಬಗಳು ಬೀದಿಗೆ ಬಿದ್ದಿವೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಐಪಿಎಲ್ ಪ್ರಾರಂಭವಾದಾಗಿನಿಂದ ಯುವಕರು ಬಾಲ್ ಟು ಬಾಲ್ ಜೂಜಿಗೆ ಬಿದ್ದು ಹಣ, ಆಸ್ತಿ ಕಳೆದುಕೊಂಡಿದ್ದರಿಂದ ಅವರ ಕುಟುಂಬಗಳೇ ಬೀದಿಗೆ ಬಿದ್ದಿವೆ. ಐಪಿಎಲ್ ಒಂದು ಮೋಸದ ಜಾಲ. ಅದರ ಹಿಂದೆ ಸಾಕಷ್ಟು ರೀತಿಯ ಬೆಟ್ಟಿಂಗ್ ನಡೆಯುತ್ತಿದ್ದು, ಲಕ್ಷಾಂತರ ಮನೆಗಳು ಬೀದಿ ಪಾಲಾಗುತ್ತಿವೆ, ಮಕ್ಕಳ ವಿದ್ಯಾಭ್ಯಾಸವೂ ಹಾಳಾಗುತ್ತಿದೆ. ಮುಂದಾದರೂ ಇದಕ್ಕೆ ಕಡಿವಾಣ ಬೀಳಬೇಕು. ದೇಶಕ್ಕಾಗಿ ಆಟ ಆಡಿ ದೇಶಕ್ಕೆ ಕೀರ್ತಿ ತರುವವರನ್ನು ಗೌರವಿಸೋಣ. ಹಣ ಜಾಸ್ತಿ ಕೊಟ್ಟವರಿಗೆ ತಮ್ಮನ್ನು ಮಾರಿಕೊಂಡು ಹಣಕ್ಕಾಗಿಯೇ ಆಟ ಆಡುವವರಿಗೆ ಹೆಚ್ಚು ಮಹತ್ವ ಕೊಡುವುದು ಒಳ್ಳೆಯದಲ್ಲ. ಹಾಗಾಗಿ ಐಪಿಎಲ್ ಅನ್ನು ಬ್ಯಾನ್ ಮಾಡಿ, ಯುವ ಸಮೂಹವನ್ನು ರಕ್ಷಿಸಿಕೊಳ್ಳಬೇಕಿದೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಒತ್ತಾಯಿಸಿದ್ದಾರೆ.

ಪೂರ್ವ ತಯಾರಿ ಮಾಡಿಕೊಳ್ಳದ ಹಿನ್ನೆಲೆಯಲ್ಲಿ ಆರ್‌ಸಿಬಿ ಸಂಭ್ರಮದಲ್ಲಿ ಘೋರ ದುರಂತ

ಸಂಸದ ಯದುವೀರ್ ವಿಷಾದ



ಮೈಸೂರು, ಜೂ.5(ಬಿಎಲ್‌ಯು)– ಪೂರ್ವ ತಯಾರಿ ಮಾಡಿಕೊಂಡು ಆರ್ ಸಿಬಿ ವಿಜಯೋತ್ಸವದ ಸಂಭ್ರಮಾಚರಣೆ ಮಾಡಿದ್ದರೆ ಇಂತಹ ಘೋರ ದುರಂತ ಸಂಭವಿಸುತ್ತಿರಲಿಲ್ಲ ಎಂದು ಸಂಸದ ಯದುವೀರ್ ಅಭಿಪ್ರಾಯಪಟ್ಟರು.

ನಗರದ ಸಿಎಫ್‌ಟಿಆರ್‌ಐನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಲಕ್ಷಾಂತರ ಜನರು ಸೇರುತ್ತಾರೆ ಎಂದು ತಿಳಿದಿದ್ದರೂ ಯಾವುದೇ ಪೂರ್ವ ಸಿದ್ಧತೆ ಮಾಡದ ಕಾರಣ ಈ ದುರ್ಘಟನೆ ಸಂಭವಿಸಿದೆ ಎಂದರು.

ಅಚ್ಚುಕಟ್ಟಾದ ವ್ಯವಸ್ಥೆ ಮಾಡಿಕೊಂಡು ಎರಡು ದಿನದ ನಂತರ ಸಂಭ್ರಮಾಚರಣೆ ಮಾಡಿದ್ದರೆ ಇಂತಹ ದುರ್ಘಟನೆ ನಡೆಯುತ್ತಿರಲಿಲ್ಲ ಎಂದರು.

ಸರ್ಕಾರ ಆತುರದ ನಿರ್ಧಾರ ಮಾಡಿದ ಹಿನ್ನೆಲೆಯಲ್ಲಿ ಈ ಘಟನೆ ನಡೆದಿದೆ. ಈ ವಿಚಾರದಲ್ಲಿ ಗುಪ್ತಚರ ಇಲಾಖೆ ವೈಫಲ್ಯ ಎಂದು ನಾನು ಈಗಲೇ ಹೇಳುವುದಿಲ್ಲ. ಈ ಘಟನೆ ಬಗ್ಗೆ ಸೂಕ್ತ ತನಿಖೆ ಮಾಡಿದರೆ ಕಾರಣ ಸ್ಪಷ್ಟವಾಗಲಿದೆ. ಈ ಮೂಲಕ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಆರ್‌ಸಿಬಿ ಸಂಭ್ರಮಾಚರಣೆ ದುರಂತ: ಕರ್ನಾಟಕದ ಮಾನ ಹರಾಜು

ಶಾಸಕ ಟಿ.ಎಸ್. ಶ್ರೀವತ್ಸ ಆರೋಪ



ಟಿ.ಎಸ್.ಶ್ರೀವತ್ಸ

ಮೈಸೂರು, ಜೂ.5(ಬಿಎಲ್‌ಯು)– ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಸಂಭವಿಸಿದ ದುರಂತದಿಂದ ರಾಜ್ಯ ಸರ್ಕಾರ ದೇಶದಲ್ಲಿ ಕರ್ನಾಟಕದ ಮಾನ ಕಳೆದಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಆರೋಪಿಸಿದ್ದಾರೆ. ನಗರದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಪೂರ್ವ ತಯಾರಿ ಮಾಡಿಕೊಳ್ಳದೆ ಸರ್ಕಾರ ನಿರ್ಲಕ್ಷ್ಯ ತೋರಿದ ಕಾರಣ 11 ಅಮಾಯಕರು ಸಾವನ್ನಪ್ಪಿದ್ದಾರೆ ಎಂದು ಆಪಾದಿಸಿದರು.

ಆರ್‌ಸಿಬಿ ವಿಜಯೋತ್ಸವ ಕಾಂಗ್ರೆಸ್ ಸರ್ಕಾರದ ಕಾರ್ಯಕ್ರಮದಂತೆ ಕಾಣುತ್ತಿತ್ತು. ಸಚಿವರ ಮಕ್ಕಳ, ಮೊಮ್ಮಕ್ಕಳಿಗೆ ಫೋಟೋ ತೆಗೆಸಿಕೊಳ್ಳಲು ಅವಕಾಶ ಮಾಡಿದ ವ್ಯವಸ್ಥೆಯಂತೆ ಏರ್ಪಡಿಸಲಾಗಿತ್ತು. ಇದರ ನೈತಿಕ ಹೊಣೆ ಹೊತ್ತು ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜಿನಾಮೆ ನೀಡಬೇಕಿತ್ತು ಎಂದು ಹೇಳಿದರು.

ಬೇರೆ ರಾಜ್ಯಗಳಲ್ಲಿ ಐಪಿಎಲ್ ಗೆದ್ದಾಗ ಅಲ್ಲಿನ ಸರ್ಕಾರ ಅಚ್ಚುಕಟ್ಟಾದ ವ್ಯವಸ್ಥೆ ಮಾಡಿತ್ತು. ಇದರಿಂದ ಅಲ್ಲಿ ಯಾವುದೇ ರೀತಿಯ ದುರ್ಘಟನೆ ನಡೆಯಲಿಲ್ಲ. ಆದರೆ ನಿನ್ನೆ ಯಾವುದೇ ಪೂರ್ವ ತಯಾರಿ ಇಲ್ಲದೆ ವಿಜಯೋತ್ಸವ ಸಂಭ್ರಮ ಆಯೋಜಿಸಿದ್ದ ಕಾರಣ ಈ ಘಟನೆ ನಡೆದಿದೆ. ಈಗ 11 ಅಮಾಯಕರ ಸಾವಿಗೆ ಕಾರಣರಾದವರಿಗೆ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿದರು.

ಉತ್ತರ ಪ್ರದೇಶದ ಕುಂಭಮೇಳದಲ್ಲಿ ಕಾಲ್ತುಳಿತವಾದಾಗ ಇದೇ ಕಾಂಗ್ರೆಸ್‌ನವರು ಯೋಗಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದರು. ಈಗ ಈ ಘಟನೆ ಬಗ್ಗೆ ಕಾಂಗ್ರೆಸ್‌ನವರು ಏನೇಳುತ್ತಾರೆ ಎಂದು ಶ್ರೀವತ್ಸ ಪ್ರಶ್ನಿಸಿದರು.

ಹೈಕೋರ್ಟ್ ಹಾಲಿ ನ್ಯಾಯಮೂರ್ತಿ ಮೂಲಕ ತನಿಖೆಗೆ ಬಿಜೆಪಿ ಆಗ್ರಹ

ಮೃತಪಟ್ಟ 11 ಮಂದಿ ಕುಟುಂಬಕ್ಕೆ ತಲಾ 50 ಲಕ್ಷ ಪರಿಹಾರ ಕಲ್ಪಿಸಲು ಒತ್ತಾಯ

ಬೆಂಗಳೂರು, ಜೂ.5(ಕೆಎಂಶಿ)–ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಗೆಲುವಿನ ಸಂಭ್ರಮಾಚರಣೆ ವೇಳೆ ಸಂಭವಿಸಿದ ಕಾಲ್ತುಳಿತದಿಂದ 11 ಜನ ಮೃತಪಟ್ಟ ಘಟನೆಯ ಬಗ್ಗೆ ರಾಜ್ಯ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಯಿಂದ ತನಿಖೆ ನಡೆಸಬೇಕು ಹಾಗೂ ಮೃತರ ಕುಟುಂಬಕ್ಕೆ ಕನಿಷ್ಠ ತಲಾ 50 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಬಿಜೆಪಿ ಒತ್ತಾಯಿಸಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಗೃಹ ಸಚಿವ ಡಾ.ಜಿ.ಪರಮೇಶ್ವರ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ತೆಲಂಗಾಣದಲ್ಲಿ ಇತ್ತೀಚೆಗೆ ನಟ ಅಲ್ಲು ಅರ್ಜುನ್ ಸಿನಿಮಾ ಬಿಡುಗಡೆ ವೇಳೆ ಸಂಭವಿಸಿದ ತುಳಿತದಿಂದ ಸಾವುಗಳಾದಾಗ ಅಲ್ಲಿನ ಕಾಂಗ್ರೆಸ್ ಸರ್ಕಾರ ಅಲ್ಲು ಅರ್ಜುನ್ ಅವರನ್ನು ಬಂಧಿಸಿತ್ತು.

ನಿನ್ನೆಯ ದುರ್ಘಟನೆಗೆ ರಾಜ್ಯ ಸರ್ಕಾರವೇ ಸಂಪೂರ್ಣ ಹೊಣೆ ಹೊರಬೇಕು. ಹೊರದೇಶದಲ್ಲಿರುವ ಆರ್‌ಸಿಬಿ ಮಾಲೀಕರು ಪರಿಹಾರ ಕೊಡಬೇಕು. ಕೇರಳದಲ್ಲಿ ಆನೆ ತುಳಿತದಿಂದ ಸಾವಾದರೆ ಆನೆ ಕರ್ನಾಟಕದ್ದು ಎಂದು 25 ಲಕ್ಷ ರೂ. ಪರಿಹಾರ ಘೋಷಿಸಿದ್ದರು ಎಂದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಮ್ಯಾಜಿಸ್ಟೀರಿಯಲ್ ತನಿಖೆಗೆ ಆದೇಶಿಸಿದ್ದಾರೆ. ಆದರೆ, ಅಪರಾಧಿ ಸ್ಥಾನದಲ್ಲಿರುವ ಮುಖ್ಯಮಂತ್ರಿ, ಮಂತ್ರಿಮಂಡಲದ ಸದಸ್ಯರನ್ನು ಮ್ಯಾಜಿಸ್ಟೀರಿಯಲ್ ತನಿಖೆ ವ್ಯಾಪ್ತಿಗೆ ಬರುವುದಿಲ್ಲ. ಇದರರ್ಥ ವೈಫಲ್ಯಕ್ಕೆ ಹೊಣೆ ಹೊರಲು ಸರ್ಕಾರ ಸಿದ್ಧವಿಲ್ಲ, ಜನಪರ ಕಾಳಜಿ ಬದಲು ಪ್ರಚಾರದ ಹುಚ್ಚು ಇವರಿಗೆ ಪ್ರಮುಖವಾಗಿದೆ.

ಸರ್ಕಾರವು ಆತುರಾತುರವಾಗಿ ಸಂಭ್ರಮಾಚರಣೆ ಏಕೆ ಆಯೋಜಿಸಿತು, ಬೇರೆಯವರ ಕಾರ್ಯಕ್ರಮವಾದರೆ, ಸರ್ಕಾರ ಅನುಮತಿ ಕೊಟ್ಟಿದ್ದೇಕೆ, ಪೂರ್ವ ತಯಾರಿ ಇಲ್ಲದೇ ಅವಕಾಶ ಮಾಡಿಕೊಟ್ಟಿದ್ದೇಕೆ.

ದುರಂತದ ಮಾಹಿತಿ ಟಿ.ವಿ.ಗಳಲ್ಲಿ ಪ್ರಸಾರವಾಗುತ್ತಿದ್ದಾಗಲೂ ಆಡಳಿತ ಪಕ್ಷದವರ ಸೆಲ್ಫಿಗಳ ಭರಾಟೆ ಮುಂದುವರೆದಿತ್ತು, ಉಪಮುಖ್ಯಮಂತ್ರಿ ಶಿವಕುಮಾರ್ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಕಪ್‌ಗೆ ಮುತ್ತಿಕ್ಕುತ್ತಿದ್ದರು, ಸರ್ಕಾರದ ಇಷ್ಟೊಂದು ಅಮಾನವೀಯ ನಡವಳಿಕೆ ಖಂಡನಾರ್ಹ ಎಂದರು.

ವಿಧಾನಸೌಧದ ಮುಂದೆ ಸಂಭ್ರಮಾಚರಣೆ ಮಾಡುವ ಅಗತ್ಯ ಏನಿತ್ತು, ಈ ಕಾರ್ಯಕ್ರಮ ಆಯೋಜಿಸಲು ಉಪಮುಖ್ಯಮಂತ್ರಿ ತೀರ್ಮಾನಿಸಿದರೇ, ಮುಖ್ಯಮಂತ್ರಿ ತಿಳಿಸಿದ್ದರೇ, ಯಾವಾಗ ತೀರ್ಮಾನ ಆಯಿತು ಮಾಹಿತಿ ನೀಡಿ.

30–40 ಸಾವಿರ ಜನ ನಿರೀಕ್ಷಿಸಿದ್ದೆವು, ಒಂದೂವರೆಯಿಂದ 2 ಲಕ್ಷ ಜನ ಬಂದರು ಎಂಬುದಾಗಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ಗೃಹ ಸಚಿವರು ಹೇಳಿದ್ದು, ಇದು ವೈಫಲ್ಯದ ಸ್ಪಷ್ಟ ಉದಾಹರಣೆಯಾಗಿದೆ. ವಿಧಾನಸೌಧದ ಬಳಿ ದುರ್ಘಟನೆ ಆಗಿಲ್ಲ, ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಆಗಿದೆ ಎಂಬುದಾಗಿ ಮುಖ್ಯಮಂತ್ರಿ ಹೇಳಿರುವುದು ನುಣುಚಿಕೊಳ್ಳುವ ತಂತ್ರ

ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಿ ತನಿಖೆ ಪ್ರಾರಂಭಿಸಿದ್ದಾರೆ. ಸರ್ಕಾರದ ಬೇಜವಾಬ್ದಾರಿಯಿಂದ 11 ಅಮಾಯಕರು ಪ್ರಾಣ ಕಳೆದುಕೊಂಡಿದ್ದಾರೆ. ಸಮರ್ಪಕ ತನಿಖೆ ಆಗಲೇಬೇಕು ಎಂದರು.

ಸಾವಿನ ತಪ್ಪು ಯಾರದು : ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, 11 ಜನರ ಸಾವು ದುಃಖಕರ, ಗಾಯಾಳುಗಳು ಬೇಗನೆ ಗುಣಮುಖರಾಗಲಿ, ಕಪ್ ನಮ್ದೇ, ಆದರೆ, ಸಾವಿನ ತಪ್ಪು ಯಾರದು ಎಂಬುದಾಗಿ ರಾಜ್ಯದ 7 ಕೋಟಿ ಜನ ಕೇಳುತ್ತಿದ್ದಾರೆ ಎಂದರು.

ಇಡೀ ಸರ್ಕಾರವೇ ಫೋಟೊ ಶೂಟ್‌ನಲ್ಲಿ ಬ್ಯುಸಿಯಾಗಿತ್ತು, 11 ಅಮಾಯಕರು ಸತ್ತಿದ್ದಕ್ಕೆ ಯಾರ ಮೇಲೆ ಎಫ್‌ಐಆರ್ ಹಾಕಿದ್ದೀರಿ ಎಂದರು.

ದುರಂತಕ್ಕೆ ಪೊಲೀಸರು ಕಾರಣ : ವಿಧಾನ ಪರಿಷತ್‌ನಲ್ಲಿನ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ದುರಂತಕ್ಕೆ ಪೊಲೀಸರು, ಸರ್ಕಾರ ಕಾರಣವಲ್ಲವಾದರೆ ಇನ್ಯಾರು ಕಾರಣ ಎಂದು ಪ್ರಶ್ನಿಸಿದರು.

ಸರ್ಕಾರದ ರಾಜೀನಾಮೆಗೆ ಆಗ್ರಹ: ಕಾಲ್ತುಳಿತ ದುರಂತದಲ್ಲಿ ಗಾಯಗೊಂಡವರನ್ನು ಬೌರಿಂಗ್ ಆಸ್ಪತ್ರೆಯಲ್ಲಿ ಭೇಟಿ ಮಾಡಿ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, 11 ಜನರ ಸಾವಿಗೆ ಕಾರಣವಾದ ರಾಜ್ಯ ಕಾಂಗ್ರೆಸ್ ಸರ್ಕಾರ ತಕ್ಷಣ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಇದೊಂದು ಕೊಲೆಗಡುಕ ಸರ್ಕಾರ, ಉಪಮುಖ್ಯಮಂತ್ರಿ ಕಪ್ ಎತ್ತಿಕೊಂಡು ಚುಂಬಿಸಿಕೊಂಡು ಓಡಾಡುವ ಅಗತ್ಯ ಏನಿತ್ತು, ಬೆಂಗಳೂರು ಡಿ.ಸಿ.ಯಿಂದ ಯಾವುದೇ ತನಿಖೆ ಮಾಡಲು ಆಗದು, ಇದೊಂದು ಮೋಸದ ಕ್ರಮ, ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳಿಂದ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭೈರವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಏಸ್ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹೌಸ್‌ಫುಲ್–5 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಲೇಜ್ ಕಲಾವಿದ (ಕ) + ನೀತಿ (ಕ)	2+2 ಪ್ರದರ್ಶನಗಳು
ಗಾಯಿತ್ರಿ	
ಟಕೀಲಾ (ಕ)	4 ಪ್ರದರ್ಶನಗಳು
ರಾಜಕಮಲ್	
ಮದ್ರಾಸ್ ಮ್ಯಾಟಿನಿ (ತ)	4 ಪ್ರದರ್ಶನಗಳು
ಸಂಗಂ	
ಹೌಸ್‌ಫುಲ್–5 (ಹಿಂ)	4 ಪ್ರದರ್ಶನಗಳು
ಲಿಡೋ	
ಕಾಲೇಜ್ ಕಲಾವಿದ (ಕ) + ನೀತಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕಾಲ್ತುಳಿತಕ್ಕೆ ಬಲಿಯಾದ ಆರ್‌ಸಿಬಿ ಅಭಿಮಾನಿಗಳಿಗೆ ಶ್ರದ್ಧಾಂಜಲಿ



ಭೀಕರ ಕಾಲ್ತುಳಿತಕ್ಕೆ ಬಲಿಯಾದ ಆರ್‌ಸಿಬಿ ಅಭಿಮಾನಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು, ಜೂ.5(ಎಂಕೆ)– ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಆಯೋಜಿಸಿದ್ದ ಆರ್‌ಸಿಬಿ ವಿಜಯೋತ್ಸವದಲ್ಲಿ ಉಂಟಾದ ಭೀಕರ ಕಾಲ್ತುಳಿತದಲ್ಲಿ ಮೃತಪಟ್ಟ ಆರ್‌ಸಿಬಿ ಅಭಿಮಾನಿಗಳಿಗೆ ಮೈಸೂರಿನಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರಿನ ಚಾಮುಂಡಿಪುರಂ ಸರ್ಕಲ್‌ನಲ್ಲಿ ಜನಮನ ವೇದಿಕೆ, ಪಾತಿ ಫೌಂಡೇಶನ್ ಮತ್ತು ಅರಿವು ಸಂಸ್ಥೆ ವತಿಯಿಂದ ಮೇಣದ ಬತ್ತಿ ಬೆಳಗಿಸಿ ಮೌನಾಚರಣೆ ಮೂಲಕ ಮೃತರ ಆತ್ಮಕ್ಕೆ ಶಾಂತಿ ಕೋರಲಾಯಿತು.

ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್ ಪ್ರಸಾದ್, ಕ್ರಿಕೆಟ್ ಮತ್ತು ಕ್ರಿಕೆಟರ್‌ಗಳ ಮೇಲೆ ಅಭಿಮಾನ ಇರಬೇಕು. ಆದರೆ ಅಂಧಾಭಿಮಾನ ಇರಬಾರದು. ಅಲ್ಲದೆ 18 ವರ್ಷಗಳ ಕಪ್ ಗೆದ್ದ ಆರ್‌ಸಿಬಿ ತಂಡದ ವಿಜಯೋತ್ಸವವನ್ನು ಒಂದು ವಾರ ತಡವಾಗಿ ಆಯೋಜನೆ ಮಾಡಿದ್ದರೆ ಇಷ್ಟೊಂದು ಸಾವು–ನೋವು ಸಂಭವಿಸುತ್ತಿರಲಿಲ್ಲ ಎಂದು ಮರುಕ ವ್ಯಕ್ತಪಡಿಸಿದರು.

ಒಂದೆಡೆ ಸಂಭ್ರಮ, ಮತ್ತೊಂದೆಡೆ ಶೋಕ. ಕ್ರಿಕೆಟ್ ಪ್ರೇಮಿಗಳು ಪ್ರಾಣ ಕಳೆದುಕೊಂಡಿದ್ದು, ಅತ್ಯಂತ ದುರದೃಷ್ಟಕರ ಸಂಗತಿಯಾಗಿದೆ. ಮೃತರ ಆತ್ಮಕ್ಕೆ ಶಾಂತಿ, ಅವರ ಕುಟುಂಬಕ್ಕೆ ನೋವನ್ನು ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲು ಎಂದು ನಾವೆಲ್ಲರೂ ಪ್ರಾರ್ಥಿಸುತ್ತೇವೆ ಎಂದು ವಿಷಾದಿಸಿದರು.

ರಾಜ್ಯ ಸರ್ಕಾರದ ಬೇಜವಾಬ್ದಾರಿ ನಡವಳಿಕೆ, ನಿರ್ಧಾರಗಳಿಂದ ಈ ಘೋರ ದುರಂತ ನಡೆದಿದೆ. ಏಕಾಏಕಿ ಕಾರ್ಯಕ್ರಮ ಆಯೋಜನೆ, ಅದು ಉಚಿತ ಎಂದು ಘೋಷಣೆ ಮಾಡಿದರೆ, ಅಭಿಮಾನಿಗಳ ಬಾರದೇ ಇರುವರೇ. ಇಂತಹ ಸಾಮಾನ್ಯ ಪರಿಜ್ಞಾನವೂ ಇಲ್ಲದ ರಾಜ್ಯ ಸರ್ಕಾರವೇ ಈ ದುರಂತಕ್ಕೆ ನೇರಹೊಣೆ ಎಂದು ಕಿಡಿಕಾರಿದರು.

ಪಾತಿ ಫೌಂಡೇಶನ್ ಅಧ್ಯಕ್ಷ ಎಂ.ಡಿ ಪಾರ್ಥಸಾರಥಿ, ಮೈಸೂರು ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ಮುಖಂಡರಾದ ವಿಕ್ರಂ ಅಯ್ಯಂಗಾರ್, ಜೋಗಿ ಮಂಜು, ರಾಕೇಶ್ ಭಟ್, ಅಜಯ್ ಶಾಸ್ತ್ರಿ, ಕೆ.ಎಂ.ನಿಶಾಂತ್, ಮೈಸೂರು ಆನಂದ್, ದೂರ ರಾಜಣ್ಣ, ಜತ್ತಿ ಪ್ರಸಾದ್, ಶ್ರೀಕಾಂತ್ ಕಶ್ಯಪ್, ಸುಚೇಂದ್ರ, ಅರವಿಂದ, ಮಹದೇವ್, ರಾಘವೇಂದ್ರ, ಪುರುಷೋತ್ತಮ್, ಸೋಮೇಶ್, ಮಹೇಶ್, ನಿರಂಜನ್, ಸುರೇಶ್, ರಾಕೇಶ್ ಮತ್ತಿತರರಿದ್ದರು.

ಬಿಜೆಪಿ ಜಿಲ್ಲಾ ಘಟಕದಿಂದ ವಿಶ್ವ ಪರಿಸರ ದಿನಾಚರಣೆ

ಸಸಿ ನೆಟ್ಟು ಪೋಷಿಸಿ ಪರಿಸರ ಸಂರಕ್ಷಿಸಬೇಕು

ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ



ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆ ಪ್ರೌಢಶಾಲೆ ಆವರಣದಲ್ಲಿ ಬಿಜೆಪಿ ಜಿಲ್ಲಾ ಗ್ರಾಮಾಂತರ ಘಟಕದಿಂದ ಗುರುವಾರ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಗಿಡ ನೆಟ್ಟು ನೀರೆರೆಯಲಾಯಿತು.

ಮೈಸೂರು,ಜೂ.5(ಪಿಎಂ)– ಸಸಿಗಳನ್ನು ನೆಟ್ಟು ಪೋಷಿಸುವ ಮೂಲಕ ಪರಿಸರ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕಿದ್ದು, ಜೊತೆಗೆ ನಮ್ಮ ಜೀವನ ಶೈಲಿಯು ಪರಿಸರ ಸ್ನೇಹಿಯಾಗಬೇಕು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಹೇಳಿದರು.

ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆ ಪ್ರೌಢಶಾಲೆ ಆವರಣದಲ್ಲಿ ಬಿಜೆಪಿ ಮೈಸೂರು ಜಿಲ್ಲಾ ಗ್ರಾಮಾಂತರ ಘಟಕದ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಹಾಗೂ ಗಿಡ ನೆಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಧಾನಿ ನರೇಂದ್ರ ಮೋದಿಯವರು ಕಳೆದ ಬಾರಿಯ ವಿಶ್ವ ಪರಿಸರ ದಿನಾಚರಣೆ ಸಂದರ್ಭದಲ್ಲಿ ಪ್ರತಿ ನಾಗರಿಕರೂ ತಮ್ಮ ತಾಯಿಯವರ ಹೆಸರಿನಲ್ಲಿ ಗಿಡ ನೆಟ್ಟು ಪೋಷಿಸಬೇಕೆಂದು ಕರೆ ನೀಡಿದ್ದರು. ಜೊತೆಗೆ ಪರಿಸರ ಸಂರಕ್ಷಿಸುವ ಕಾರ್ಯ ನಿರಂತರವಾಗಿ ಸಾಗಬೇಕೆಂಬ ಸಂದೇಶ ನೀಡಿದ್ದರು. ನಮ್ಮ ಪರಿಸರ ಸಂರಕ್ಷಣೆಗೆ ಮೋದಿಯವರ ಈ ಸಂದೇಶದಂತೆ ನಾವೆಲ್ಲರೂ ಸಾಗಬೇಕಿದೆ ಎಂದರು.

ಪರಿಸರ ದಿನ ಎಂಬುದು ಕೇವಲ ಒಂದು ದಿನಕ್ಕೆ ಸೀಮಿತಗೊಂಡರೆ ಅದು ಪ್ರಯೋಜನಕ್ಕೆ ಬಾರದು. ಹಾಗಾಗಿ ಬಿಜೆಪಿಯ ಪ್ರತಿ ಕಾರ್ಯಕ್ರಮದಲ್ಲಿ ಗಿಡ ನೆಡವ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗುವಂತೆ ಮೋದಿ ಅವರು ಕರೆ ನೀಡಿದ್ದು, ಅದರಂತೆ ನಾವೆಲ್ಲರೂ ಕೆಲಸ ಮಾಡೋಣ ಎಂದು ಹೇಳಿದರು.

ಮನುಷ್ಯರಾದ ನಾವೆಲ್ಲರೂ ಗಿಡ ನೆಟ್ಟು ಪರಿಸರವನ್ನು ಸಲಹಬೇಕಿರುವ ಜವಾಬ್ದಾರಿ ಅರಿಯಬೇಕು. ವಿಶೇಷವಾಗಿ ವಿದ್ಯಾರ್ಥಿಗಳು ಹಾಗೂ ಯುವ ಜನರು ಪರಿಸರ ಸಂರಕ್ಷಣೆಗೆ ಮುಂದಾಗಬೇಕಿದೆ. ನಾವೆಲ್ಲರೂ ದೇಶದ ಶ್ರೇಯೋಭಿವೃದ್ಧಿಗೆ ದುಡಿಯ ಬೇಕು. ಮೋದಿಯವರ ಪರಿಸರ ಉಳಿಸಿ ಬೆಳೆಸಬೇಕೆಂಬ ಅಭಿಯಾನವನ್ನು ನಾವೆಲ್ಲರೂ ಬೆಂಬಲಿಸಬೇಕು. ಅವರ ಆಶಯವನ್ನು ದೇಶದ ಜವಾಬ್ದಾರಿಯುತ ನಾಗರಿಕರಾದ ನಾವೆಲ್ಲರೂ ಈಡೇರಿಸಬೇಕೆಂದು ತಿಳಿಸಿದರು.

ಬಿಜೆಪಿ ತಾಲೂಕು ಅಧ್ಯಕ್ಷ ರಾಜೇಂದ್ರ ಮಾತನಾಡಿ, ನಾವೆಲ್ಲರೂ ನಮ್ಮ ಭವಿಷ್ಯದ ಒಳಿತಿಗಾಗಿ ಪರಿಸರ ಸಂರಕ್ಷಿಸಬೇಕಿದೆ. ವಿಶೇಷವಾಗಿ ವಿದ್ಯಾರ್ಥಿಗಳು ಗಿಡ ನೆಟ್ಟು ಪರಿಸರ ಪೋಷಿಸಬೇಕು. ಬಿಜೆಪಿ ತಾಲೂಕು ಘಟಕದಿಂದ ವಿವಿಧೆಡೆ ಗಿಡನೆಟ್ಟು ಪರಿಸರ ಪ್ರಜ್ಞೆ ಮೂಡಿಸುವ ಕೆಲಸ ಮಾಡ ಲಾಗುತ್ತಿದೆ ಎಂದು ಹೇಳಿದರು.

ಟಿಬೆಟ್ ಧರ್ಮಗುರು ಕರ್ಮ ಮಾತನಾಡಿ, ನಾವು ಹದಿನೈದು ವರ್ಷಗಳಿಂದಲೂ ಈ ಶಾಲೆಯಲ್ಲಿ ಗಿಡ ನೆಡುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದ್ದು, ಪರಿಸರ ಉಳಿಸುವ ಕುರಿತು ಮಕ್ಕಳಿಗೂ ಅರಿವು ಮೂಡಿಸಲಾಗುತ್ತಿದೆ ಎಂದರು. ಬಿಜೆಪಿ ತಾಲೂಕು ಪ್ರಧಾನ ಕಾರ್ಯದರ್ಶಿಗಳಾದ ಚನ್ನಬಸಪ್ಪ ರವಿ, ಪಟ್ಟಣ ಅಧ್ಯಕ್ಷ ವೆಂಕಟೇಶ್, ಕಾಲೇಜಿನ ಪ್ರಾಂಶುಪಾಲ ಅಂಬಿಕಾ, ಮುಖಂಡರಾದ ಲೋಕಪಾಲಯ್ಯ, ಮಲ್ಲೇಶ್, ಶೋಭಾಗೌಡ, ಚಂದ್ರೇಗೌಡ, ಬೋರೇಗೌಡ, ಮಾಗಳಿ ರವಿ ಸೇರಿ ದಂತೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ಪರಿಸರ ಸಂರಕ್ಷಣೆ ನಮ್ಮ ಬದುಕಿನ ಭಾಗವಾಗಬೇಕು

ವಿಶ್ವ ಪರಿಸರ ದಿನಾಚರಣೆಯಲ್ಲಿ ಕೆಆರ್ ನಗರ ತಾಪಂ ಇಓ ವಿ.ಪಿ.ಕುಲದೀಪ್



ಕೆಆರ್.ನಗರದ ತಾಲೂಕು ಪಂಚಾಯಿತಿ ಆವರಣದಲ್ಲಿ ಗುರುವಾರ ಸಸಿಗಳನ್ನು ನೆಡುವ ಕಾರ್ಯಕ್ರಮ ನಡೆಯಿತು.

ಮೈಸೂರು, ಜೂ.5(ಪಿಎಂ)– ಪರಿಸರ ಸಂರಕ್ಷಣೆ ಕೇವಲ ದಿನಾಚರಣೆಗೆ ಮಾತ್ರವೇ ಸೀಮಿತವಾಗದೇ ನಮ್ಮ ಬದುಕಿನ ಭಾಗವಾಗಬೇಕು. ಈ ನಿಟ್ಟಿನಲ್ಲಿ ಸಸಿಗಳನ್ನು ನೆಟ್ಟು ಪೋಷಿಸುವ ಕೆಲಸ ನಿರಂತರವಾಗಿ ನಡೆಯಬೇಕು ಎಂದು ಕೆಆರ್ ನಗರ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ವಿ.ಪಿ.ಕುಲದೀಪ್ ಹೇಳಿದರು.

ಕೆಆರ್ ನಗರದ ತಾಲೂಕು ಪಂಚಾಯಿತಿ ಆವರಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಹಾಗೂ ಸಸಿಗಳನ್ನು ನೆಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದು ಸಸಿಗಳನ್ನು ನೆಟ್ಟು ನೀರೆರೆಯುತ್ತಿರುವುದು ವಿಶ್ವ ಪರಿಸರ ದಿನಾಚರಣೆಯ ಸಾಂಕೇತಿಕ ಅಷ್ಟೇ. ಆದರೆ ಪರಿಸರ ಸಂರಕ್ಷಣೆಗಾಗಿ ಸಸಿಗಳ ನೆಟ್ಟು ಪೋಷಿಸುವುದು ನಮ್ಮ ಬದಕಿನ ಭಾಗವಾಗಬೇಕು. ತಾಪಂ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಲ್ಲಿಯೂ ಇಂದು ಸಸಿ ನಡುವ ಜೊತೆಗೆ ವಿವಿಧ ಕಾರ್ಯಕ್ರಮಗಳ ಮೂಲಕ ಪರಿಸರ ಸಂರಕ್ಷಣೆಯ ಕುರಿತು ಸಂದೇಶ ರವಾನಿಸಲಾಗಿದೆ. ವರ್ಷಪೂರ್ತಿ ಎಲ್ಲರೂ ಸಸಿಗಳನ್ನು ನೆಟ್ಟು ಪರಿಸರವನ್ನು ಕಾಪಾಡೋಣ ಎಂದು ಹೇಳಿದರು.

ಇದಕ್ಕೂ ಮುನ್ನ ತಾಪಂ ಆವರಣದಲ್ಲಿ ನಾಲ್ಕೈದು ಕಡೆ ವಿವಿಧ ಬಗೆಯ ಸಸಿಗಳನ್ನು ನೆಡಲಾಯಿತು. ತಾಲೂಕು ಪಂಚಾಯಿತಿ ಕಚೇರಿ ವ್ಯವಸ್ಥಾಪಕ ಸತೀಶ್, ತಾಲೂಕು ಯೋಜನಾಧಿಕಾರಿ ನಂದೀಶ್, ಸಹಾಯಕ ಲೆಕ್ಕಾಧಿ ಕಾರಿಗಳಾದ ಮೋಹನ ಕುಮಾರಿ, ಶಿವಕುಮಾರ್, ಪ್ರಥಮ ದರ್ಜೆ ಸಹಾಯಕ ಕರೀಗೌಡರು, ದ್ವಿತೀಯ ದರ್ಜೆ ಸಹಾಯಕ ತುಕಾರಾಂ ಮತ್ತಿತರರು ಹಾಜರಿದ್ದರು.

ವಿಶ್ವ ಪರಿಸರ ದಿನಾಚರಣೆ



ಮೈಸೂರಿನ ದಟ್ಟಗಳ್ಳಿ ಕನಕದಾಸನಗರದಲ್ಲಿರುವ ರೋಟರಿ ಪಶ್ಚಿಮ ಶಾಲೆಯಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ವಿದ್ಯಾರ್ಥಿಗಳು ಜಾಥಾ ನಡೆಸಿ ಪರಿಸರ ಜಾಗೃತಿ ಮೂಡಿಸಿದರು. ಶಾಲಾ ಪ್ರಾಂಶುಪಾಲ ಎನ್.ಎಂ.ಮಂಜುನಾಥ್, ಶಿಕ್ಷಕರು, ಸಿಬ್ಬಂದಿ ಉಪಸ್ಥಿತರಿದ್ದರು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ಸಿಟಿ ಎಸ್.ಬಿ.ಎಮ್ ಕಾಲೋನಿ, ಶ್ರೀರಾಂಪುರ ಬ್ಲಾಕ್ 28, ಮನೆ ನಂ. 12 ರಲ್ಲಿ ವಾಸವಾಗಿರುವ ಲೇಟ್ ಕೆ.ಎಸ್. ನಾಗೇಂದ್ರ ರವರ ಧರ್ಮಪತ್ನಿಯಾದ ಲಕ್ಷ್ಮಿ ಎನ್.ಎಸ್, ಅವರ ಮಕ್ಕಳಾದ ಪ್ರಜ್ಞ ಕೆ.ಎನ್. ಮತ್ತು ಪೂರ್ವಿ ಕೆ.ಎನ್. ಪರವಾಗಿ (ಮೈನರ್ ಗಾರ್ಡಿಯನ್ ಆಗಿ ಲಕ್ಷ್ಮಿ ಎನ್.ಎಸ್) ಅವರಿಂದ ಖರೀದಿಸಲು ಇಚ್ಚಿಸಿರುತ್ತಾರೆ, ಸದರಿ ಷೆಡ್ಯೂಲ್ ಸ್ವತ್ತು ಅವರಿಗೆ ವಾರಸುದಾರಿಕೆ ಮೂಲಕ ಬಂದ ಸ್ವತ್ತಾಗಿರುತ್ತದೆ. ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ಯಾವುದೇ ತಂಟೆ ತಕರಾರು ಇದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ 07 ದಿವಸಗಳೊಳಗೆ ಈ ಕೆಳಕಂಡ ವಿಳಾಸದಾರರಿಗೆ ಯಾವುದೇ ವ್ಯಕ್ತಿಗಳು ದಾಖಲೆಸಹಿತ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಮುಂದೆ ನಮ್ಮ ಕಕ್ಷಿದಾರರು ಕೆಳಕಂಡ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ತಂಟೆ–ತಕರಾರು ಇಲ್ಲವೆಂದು ತಿಳಿದು ವ್ಯವಹರಿಸುತ್ತಾರೆ ಎಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್

ಮೈಸೂರು, ಶ್ರೀರಾಂಪುರ ಸೂರ್ಯ ಬಡಾವಣೆಯಲ್ಲಿರುವ ಸ್ವತ್ತಿನ ಸಂಖ್ಯೆ **102 e-katha No. 3432801098** ವಿಸ್ತೀರ್ಣ ಪೂರ್ವ–ಪಶ್ಚಿಮ: 12.00 ಮೀಟರ್ ; ಉತ್ತರ–ದಕ್ಷಿಣ: 9.00 ಮೀಟರ್. ಒಟ್ಟು 108 ಚದರ ಮೀಟರ್ ಸ್ವತ್ತಿಗೆ ಚಕ್ಕುಬಂದಿ:– ಪೂರ್ವಕ್ಕೆ: ನಿವೇಶನ ನಂ. 83 ; ಪಶ್ಚಿಮಕ್ಕೆ: ರಸ್ತೆ ; ಉತ್ತರಕ್ಕೆ: ನಿವೇಶನ ನಂ. 101 ; ದಕ್ಷಿಣಕ್ಕೆ: ನಿವೇಶನ ನಂ. 103.

ಸಹಿ/– ಎಸ್. ಉಮೇಶ್,
ವಾಣಿ ಎಂ.ಎಸ್., ವಕೀಲರು
ನಂ. 369, ಮಾಧವ ಭವನ, ಜೆ.ಎಲ್.ಬಿ ರಸ್ತೆ, ಮೈಸೂರು. ದೂರವಾಣಿ: 0821-2429670, ಮೊ: 9448342572

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ನೆಹರು ವೃತ್ತ ಅಶೋಕ ರಸ್ತೆ, ಮೈಸೂರು–570001
ದೂ: 2520836, 2436460, 2421047, ಫ್ಯಾಕ್ಸ್ ನಂ: 0821-252083

ನಂ:ಮುಕಾನಿ:ಚುನಾವಣೆ: 1632 :2025–26 ದಿ:05.06.2025

ಪ್ರಕಟಣೆ (ಚುನಾವಣಾ ಜರೂರು)

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.. ನೆಹರು ವೃತ್ತ. ಅಶೋಕ ರಸ್ತೆ. ಮೈಸೂರು. ಬ್ಯಾಂಕಿನ 2025 ರಿಂದ 2030ರ ವರೆಗಿನ ಐದು ವರ್ಷಗಳ ಆಡಳಿತ ಮಂಡಳ ಚುನಾವಣೆಯ ಸಂಬಂಧ ಈಗಾಗಲೇ ಸದಸ್ಯ ಸಹಕಾರ ಸಂಘಗಳು ಭರ್ತಿ ಮಾಡಿದ ಡೆಲಿಗೇಟ್ ಫಾರಂಗಳನ್ನು ಸಲ್ಲಿಸಿದ್ದು. ಸಹಕಾರ ಸಂಘಗಳ ಕಾಯ್ದೆ 1959 13(ಡಿ) 5(ಬಿ) ರೀತ್ಯಾ ದಿ :30.04.2025ರ ಅಂತ್ಯಕ್ಕೆ ಬ್ಯಾಂಕಿನ ಕ್ಷೇತ್ರ–1 ಕ್ಷೇತ್ರ–2 ಮತ್ತು ಕ್ಷೇತ್ರ–4 ರ ಡೆಲಿಗೇಟ್/ಪ್ರತಿನಿಧಿಗಳನ್ನೊಳಗೊಂಡ ಕರಡು ಅರ್ಹ ಮತ್ತು ಅನರ್ಹ ಸಹಕಾರ ಸಂಘಗಳ ಮತದಾರರ ಪಟ್ಟಿಯನ್ನು ಬ್ಯಾಂಕಿನ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಡೆಲಿಗೇಟ್/ಪ್ರತಿನಿಧಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಆಕ್ಷೇಪಣೆಗಳಿದ್ದರೆ ದಿನಾಂಕ:08.06.2025 ರ ಸಂಜೆ 6.00 ಘಂಟೆಯೊಳಗೆ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಸಲ್ಲಿಸಲು ಸೂಚಿಸಿದೆ.

ಸಹಿ/– ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು